ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 26 ಮಂಗಳವಾರ 2022

ಸಂಪುಟ: 43 | ಸಂಚಿಕೆ: 11 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಜನಸಂದಣಿ, ಒಳಾಂಗಣ ಪ್ರದೇಶಗಳಲ್ಲಿ ಮಾಸ್ಕ್, ಸಾಮಾಜಿಕ ಅಂತರ ಕಡ್ಡಾಯ

ಬೆಂಗಳೂರು, ಏ. 25– ಕೋವಿಡ್ 4ನೇ ಅಲೆಯನ್ನು ತಡೆಯುವ ಮುನ್ನೆಚ್ಚರಿಕಾ ಕ್ರಮವಾಗಿ ಸಾರ್ವಜನಿಕ ಪ್ರದೇಶಗಳಲ್ಲಿ, ಜನಜಂಗುಳಿ ಹೆಚ್ಚಿರುವ ಕಡೆಗಳಲ್ಲಿ ಹಾಗೂ ಒಳಾಂಗಣ ಪ್ರದೇಶಗಳಲ್ಲಿ ಮಾಸ್ಕ್ ಮತ್ತು ಸಾಮಾಜಿಕ ಅಂತರವನ್ನು ಕಡ್ಡಾಯ ಮಾಡಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದ್ದಾರೆ.



ಹೊಸ ಮಾರ್ಗಸೂಚಿಯಂತೆ ಜನಸಂದಣಿ ಹಾಗೂ ಒಳಾಂಗಣದಲ್ಲಿ ಮಾಸ್ಕ್ ಹಾಗೂ ಸಾಮಾಜಿಕ ಅಂತರ ಪಾಲನೆಗೆ ನಿರ್ದೇಶನ ನೀಡಲಾಗಿದೆ. ಸದ್ಯಕ್ಕೆ ಮಾಸ್ಕ್ ಧರಿಸದೇ ಇದ್ದರೆ ದಂಡ ಹಾಕಲಾಗುವುದಿಲ್ಲ. ಆದರೆ ಜನರು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶೇ.1.9 ರಷ್ಟು ಪ್ರಕರಣಗಳು ದಾಖಲಾಗಿದೆ. ಈ ಬಗ್ಗೆ ಹೆಚ್ಚು ನಿಗಾ ●8ನೇ ಪುಟಕ್ಕೆ

ರಾಜ್ಯ ಪ್ರವೇಶಿಸಿದ 4ನೇ ಅಲೆ

ಎಚ್ಚರವಿರಲಿ... ಆತಂಕ ಬೇಡ

- ಜನತೆಗೆ ಸರ್ಕಾರದ ಎಚ್ಚರಿಕೆ
- ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಯ್ದುಕೊಳ್ಳಿ
- ಹಾಗೆಯೇ ತಪ್ಪದೇ 3ನೇ ಡೋಸ್ ಪಡೆದುಕೊಳ್ಳಿ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ತಾಂತ್ರಿಕ ಸಲಹಾ ಸಮಿತಿ ಸಭೆ ನಡೆಸಿದರು.

ಬೆಂಗಳೂರು,ಏ.25(ಕೆಎಂಶಿ)–ಕೊರೊನಾ 4ನೇ ಅಲೆ ರಾಜ್ಯ ಪ್ರವೇಶಿಸಿದ್ದು, ಸೋಂಕಿನ ಬಗ್ಗೆ ಎಚ್ಚರ ವಹಿಸುವಂತೆ ತಿಳಿಸಿರುವ ರಾಜ್ಯ ಸರ್ಕಾರ, ಆದರೆ ಆತಂಕಪಡುವ ಅಗತ್ಯವಿಲ್ಲ ಎಂದಿದೆ.

ಸೋಂಕು ವೇಗವಾಗಿ ಹರಡುವ ಸಾಧ್ಯತೆ ಇದ್ದು, ಸಾರ್ವಜನಿಕರು ತಪ್ಪದೇ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವಂತೆ ಆದೇಶಿಸಿದೆ. 3ನೇ ಡೋಸ್ ಲಸಿಕೆ ಪಡೆಯದವರು ತಕ್ಷಣವೇ ಲಸಿಕೆ ಪಡೆದು, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಮನವಿ ಮಾಡಿದೆ.

ಸೋಂಕಿನ ತೀವ್ರತೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಇದೇ 27ರಂದು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ವಿಡಿಯೋ ಸಂವಾದ ನಡೆಸುತ್ತಿದ್ದಾರೆ. ಇದರ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗೃಹ ಕಚೇರಿ ಕೃಷ್ಣಾದಲ್ಲಿ ತಾಂತ್ರಿಕ ಸಲಹಾ ಸಮಿತಿ ಸಭೆ ನಡೆಸಿ, ಸೋಂಕಿನ ಬಗ್ಗೆ ●8ನೇ ಪುಟಕ್ಕೆ

ನಾಲ್ಕೈದು ವಾರ ಬಾಧಿಸಲಿದೆ

ಬೆಂಗಳೂರು,ಏ.25– ಮೂರನೇ ಅಲೆ ಆರು ವಾರಗಳ ಕಾಲ ರಾಜ್ಯವನ್ನು ಬಾಧಿಸಿತು, 4ನೇ ಅಲೆಯೂ ನಾಲ್ಕೈದು ವಾರಗಳ ಕಾಲ ಬಾಧಿಸಲಿದ್ದು, ಈ ಸಮಯದಲ್ಲಿ ಬಹಳ ಎಚ್ಚರ ವಹಿಸಬೇಕು. ತಜ್ಞರ ಸಲಹೆಯನ್ನು ಕಾರ್ಯರೂಪಕ್ಕೆ ತರುವಂತೆ ಆರೋಗ್ಯ ಇಲಾಖೆಗೆ ಸಿಎಂ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಈ ವಿಷಯ ತಿಳಿಸಿದರಲ್ಲದೆ, ಜನನಿಬಿಡ ಪ್ರದೇಶಗಳಲ್ಲಿ, ಒಳಾಂಗಣ ಪ್ರದೇಶಗಳಲ್ಲಿ ಜನ ಇನ್ನು ಮುಂದೆ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು. ಜನ ಕಡ್ಡಾಯವಾಗಿ ●8ನೇ ಪುಟಕ್ಕೆ



ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯಲ್ಲೂ ಅಕ್ರಮ: ವಾಟ್ಸಾಪ್‌ನಲ್ಲಿ ಹರಿದಾಡಿದ್ದ ಪ್ರಶ್ನೆ ಪತ್ರಿಕೆಗಳು

ಬೆಂಗಳೂರು ಪೊಲೀಸರಿಂದ ಮಾನಸಗಂಗೋತ್ರಿಯ ಅತಿಥಿ ಉಪನ್ಯಾಸಕಿ ಡಾ.ಸೌಮ್ಯ ಬಂಧನ

ಭೂಗೋಳಶಾಸ್ತ್ರ ವಿಷಯದ 18 ಪ್ರಶ್ನೆಗಳು ಪರೀಕ್ಷೆ ಆರಂಭಕ್ಕೂ ಮುನ್ನ ಸೌಮ್ಯರ ಮೊಬೈಲ್ ವಾಟ್ಸಾಪ್ ಮೂಲಕ ಬೇರೆಯವರಿಗೆ ರವಾನೆಯಾಗಿದ್ದವೆಂಬ ಆರೋಪ

ಮೈಸೂರು, ಏ.25 (ಆರ್‌ಕೆ)– ಸರ್ಕಾರಿ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ (ಅಸಿಸ್ಟೆಂಟ್ ಪ್ರೊಫೆಸರ್) ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮ ಕುರಿತಂತೆ ಮೈಸೂರು ಮಾನಸಗಂಗೋತ್ರಿಯ ಅತಿಥಿ ಉಪನ್ಯಾಸಕಿಯನ್ನು ಬೆಂಗಳೂರಿನ ಮಲ್ಲೇಶ್ವರಂ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಡಾ.ಸೌಮ್ಯ ಬಂಧಿತರು. ಮೈಸೂರಲ್ಲಿ ಬಂಧಿಸಿದ ಪೊಲೀಸರು, ನ್ಯಾಯಾಧೀಶರ ಮುಂದೆ ಅವರ ನಿವಾಸದಲ್ಲೇ ಹಾಜರುಪಡಿಸಿ, ನ್ಯಾಯಾಧೀಶರ ಆದೇಶದನ್ವಯ ತಮ್ಮ ವಶಕ್ಕೆ ಪಡೆದು, ನಂತರ ಆಕೆಯನ್ನು ಬೆಂಗಳೂರಿಗೆ ಕರೆದೊಯ್ದಿದ್ದಾರೆ.

ಪ್ರಸ್ತುತ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಪರೀಕ್ಷಾಂಗ ಕುಲಸಚಿವರಾಗಿರುವ ಡಾ. ಹೆಚ್. ನಾಗರಾಜ್ ಅವರ ಮಾರ್ಗದರ್ಶನದಲ್ಲಿ ಪಿಹೆಚ್‌ಡಿ ಪದವಿ ಪಡೆದಿದ್ದ ಡಾ. ಸೌಮ್ಯ, ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕಿಯಾಗಿದ್ದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA)ವು 2022ರ ಮಾರ್ಚ್ 14ರಂದು ನಡೆಸಿದ ಭೂಗೋಳಶಾಸ್ತ್ರ ಪ್ರಶ್ನೆ ಪತ್ರಿಕೆಯ 18 ಪ್ರಶ್ನೆಗಳು ಪರೀಕ್ಷೆ ಆರಂಭಕ್ಕೂ ಮುನ್ನ ಸೌಮ್ಯ ಎಂಬಾಕೆಯ ಮೊಬೈಲ್‌ನಿಂದ ವಾಟ್ಸಾಪ್‌ನಲ್ಲಿ ಬೇರೆಯವರ ಮೊಬೈಲ್‌ಗೆ ರವಾನೆಯಾಗಿದ್ದು, ಫಾರ್ವರ್ಡ್ ಆಗಿರುವ 18 ಬಹು ಆಯ್ಕೆ ಮಾದರಿಯ ಉತ್ತರ ಸಹಿತ ಪ್ರಶ್ನೆಗಳು, ಪರೀಕ್ಷಾ ಪ್ರಶ್ನೆ ಪತ್ರಿಕೆಯಲ್ಲಿ ಯಥಾವತ್ತಾಗಿದ್ದವು. ಈ ಸಂಬಂಧ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ದೂರು ನೀಡಿದ್ದರು. ●8ನೇ ಪುಟಕ್ಕೆ

ಸೌಮ್ಯ ಮಾಹಿತಿ ಕೋರಿ ವಿಭಾಗದ ಮುಖ್ಯಸ್ಥರಿಗೆ ಪತ್ರ

ಮೈಸೂರು: ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿ ಪರೀಕ್ಷಾ ಪ್ರಶ್ನೆ ಪತ್ರಿಕೆ ಬಯಲು ಹಗರಣದಲ್ಲಿ ಬಂಧಿತರಾಗಿರುವ ಡಾ.ಸೌಮ್ಯರ ಬಗ್ಗೆ ಮಾಹಿತಿ ನೀಡುವಂತೆ ಭೂಗೋಳ ಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥೆ ಪ್ರೊ. ಜಯಶ್ರೀ ಅವರಿಗೆ ಪತ್ರ ಬರೆಯಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಆರ್.ಶಿವಪ್ಪ ತಿಳಿಸಿದ್ದಾರೆ. ●8ನೇ ಪುಟಕ್ಕೆ



ಕೆ.ಆರ್.ಪೇಟೆ ಪಿಯು ಕಾಲೇಜು ಉಪನ್ಯಾಸಕಿಗೆ ಪರೀಕ್ಷೆ ಆರಂಭಕ್ಕೆ ಅರ್ಧ ಗಂಟೆ ಮುನ್ನ ಪ್ರಶ್ನೆ ರವಾನೆ

ಮೈಸೂರು: ಪರೀಕ್ಷೆ ಆರಂಭವಾಗುವ ಅರ್ಧ ಗಂಟೆ ಮುಂಚೆ ಕೆ.ಆರ್.ಪೇಟೆಯಲ್ಲಿ ಪಿಯು ಕಾಲೇಜು ಉಪನ್ಯಾಸಕಿಯಾಗಿರುವ ತನ್ನ ಗೆಳತಿಗೆ ಡಾ. ಆರ್. ಸೌಮ್ಯ ಪ್ರಶ್ನೆಗಳನ್ನು ರವಾನಿಸಿದ್ದರು ಎಂದು ತಿಳಿದುಬಂದಿದೆ.

ಪರೀಕ್ಷೆ ನಡೆದ ದಿನ ಬೆಳಗ್ಗೆ 8.30 ಗಂಟೆಗೆ ತನ್ನ ಸ್ನೇಹಿತೆ ಮೊಬೈಲ್ ವಾಟ್ಸಾಪ್‌ಗೆ 18 ಪ್ರಶ್ನೆಗಳನ್ನು ರವಾನಿಸಿದ್ದ ಡಾ. ಸೌಮ್ಯಾ, ಫೋನ್ ಮಾಡಿ ಮಾಹಿತಿಯನ್ನೂ ನೀಡಿದ್ದರು. ಹೀಗೆ ವಾಟ್ಸಾಪ್‌ನಲ್ಲಿ ಬಂದ ಪ್ರಶ್ನೆಗಳನ್ನು ಉಪನ್ಯಾಸಕಿ ಬಿಡದಿ ಪಿಯು ಕಾಲೇಜು ಉಪನ್ಯಾಸಕನಾಗಿರುವ ತನ್ನ ಸ್ನೇಹಿತನಿಗೂ ರವಾನಿಸಿದ್ದರು. ಆದರೆ ಆತ ಸಹಾಯಕ ಪ್ರಾಧ್ಯಾಪಕರ ಪರೀಕ್ಷೆ ಬರೆಯುವ ತರಾತುರಿಯಲ್ಲಿದ್ದರಿಂದ ●8ನೇ ಪುಟಕ್ಕೆ

ಲೈಸೆನ್ಸ್ ನವೀಕರಣಕ್ಕೆ 20 ಸಾವಿರ ಲಂಚ ಸ್ವೀಕಾರ

ಬೋಗಾದಿ ಪಟ್ಟಣ ಪಂಚಾಯಿತಿ ಸಿಓ ವಿಜಯ್‌ಕುಮಾರ್ ಎಸಿಬಿ ಬಲೆಗೆ

ಮೈಸೂರು,ಏ.25(ಎಸ್‌ಬಿಡಿ)– ಮೈಸೂರು ತಾಲೂಕು ನೂತನ ಬೋಗಾದಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಡಿ.ಎನ್.ವಿಜಯ್‌ಕುಮಾರ್ ಸೋಮವಾರ ಲಂಚ ಪಡೆದು, ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದ ಬಲೆಗೆ ಬಿದ್ದಿದ್ದಾರೆ. ನೋಂದಾಯಿತ ಇಂಜಿನಿಯರ್ ಒಬ್ಬರ ಪರವಾನಗಿ ನವೀಕರಣಕ್ಕೆ 20 ಸಾವಿರ ಲಂಚ ಪಡೆಯುವಾಗ ಎಸಿಬಿ ಪೊಲೀಸರು ದಾಳಿ ನಡೆಸಿ, ಲಂಚದ ಹಣ ಸಮೇತ ವಿಜಯ್‌ಕುಮಾರ್‌ನನ್ನು ವಶಕ್ಕೆ ಪಡೆದಿದ್ದಾರೆ.



ವಿಜಯ್‌ಕುಮಾರ್

ಸರ್ಕಾರದ ಅನುಮೋದಿತ ಮೌಲ್ಯಮಾಪಕ(ಕಟ್ಟಡ)ರೂ ಆದ ಬೋಗಾದಿ ಪಟ್ಟಣ ಪಂಚಾಯ್ತಿ ನೋಂದಾಯಿತ ಇಂಜಿನಿಯರ್ ಒಬ್ಬರ ನೋಂದಣಿ ಪರವಾನಗಿ(ಲೈಸೆನ್ಸ್) ಅವಧಿ ಮುಕ್ತಾಯವಾಗಿತ್ತು. ಈ ಹಿನ್ನೆಲೆಯಲ್ಲಿ ಅವರು ಏ.4ರಂದು ಪರವಾನಗಿ ನವೀಕರಣಕ್ಕೆ ಅರ್ಜಿ ಸಲ್ಲಿಸಿ, ನಿಗದಿತ ಶುಲ್ಕ ಪಾವತಿಸಿದ್ದರು. ಆದರೆ ಪರವಾನಗಿ ನವೀಕರಣಕ್ಕೆ 20 ಸಾವಿರ ರೂ. ಲಂಚ ನೀಡುವಂತೆ ಇಂದು ಮುಖ್ಯಾಧಿಕಾರಿ ವಿಜಯ್‌ಕುಮಾರ್ ಒತ್ತಾಯಿಸಿದ್ದಾಗಿ ಇಂಜಿನಿಯರ್ ಎಸಿಬಿಗೆ ದೂರು ನೀಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಎಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ, ಪರವಾನಗಿ ನವೀಕರಣಕ್ಕಾಗಿ ಇಂಜಿನಿಯರ್‌ನಿಂದ ತಮ್ಮ ಕಚೇರಿಯಲ್ಲೇ 20 ಸಾವಿರ ರೂ. ಲಂಚ ಪಡೆಯುವಾಗ ವಿಜಯ್‌ಕುಮಾರ್ ಅವರನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ತನಿಖೆ ಮುಂದುವರೆದಿದೆ ಎಂದು ಎಸಿಬಿ ಪೊಲೀಸರು ತಿಳಿಸಿದ್ದಾರೆ.

ನೈಸ್ ಸಂಸ್ಥೆಗೆ ಹೆಚ್ಚುವರಿಯಾಗಿ ನೀಡಲಾಗಿದ್ದ 543 ಎಕರೆ ಭೂಮಿ ಹಿಂಪಡೆಯಲು ನಿರ್ಧಾರ

- ಸಂಪುಟ ಉಪ ಸಮಿತಿ ಸಭೆ ನಂತರ ಕಂದಾಯ ಸಚಿವ ಆರ್.ಅಶೋಕ್ ಮಾಹಿತಿ
- ನೈಸ್ ಸಂಸ್ಥೆಯಿಂದ ಯೋಜನೆ ಜಾರಿ ವಿಷಯದಲ್ಲಿ ವ್ಯಾಪಕ ಕಾನೂನು ಉಲ್ಲಂಘನೆ

ಬೆಂಗಳೂರು, ಏ.25 (ಕೆಎಂಶಿ)– ಮೈಸೂರು ಎಕ್ಸ್‌ಪ್ರೆಸ್ ಹೈವೇ ನಿರ್ಮಾಣಕ್ಕಾಗಿ ನೈಸ್ ಸಂಸ್ಥೆಗೆ ನೀಡಲಾಗಿದ್ದ ಹೆಚ್ಚುವರಿ 543 ಎಕರೆ ಭೂಮಿಯನ್ನು ಹಿಂದಕ್ಕೆ ಪಡೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸೋಮವಾರ ನಡೆದ ಸಂಪುಟ ಉಪಸಮಿತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಕಂದಾಯ ಸಚಿವ ಆರ್.ಅಶೋಕ್, ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ್ದಲ್ಲದೆ, ಮುಂದಿನ 15 ದಿನದಲ್ಲಿ ಮತ್ತೊಂದು ಸಭೆ ನಡೆಸಿ, ಕೆಲವು ಕಠಿಣ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.



ಹಿಂದೆ ಇದ್ದ ಕಾಂಗ್ರೆಸ್ ಮತ್ತು ಜನತಾ ಸರ್ಕಾರಗಳು ನೈಸ್ ಸಂಸ್ಥೆಗೆ ಅಗತ್ಯವಾದ ಕಾನೂನಿಗೆ ಅನುವು ಮಾಡಿ ಭೂಮಿಯನ್ನು ನೀಡಿದೆ. ಆದರೆ ಅವರು ಪೂರ್ಣ ಪ್ರಮಾಣದಲ್ಲಿ ಹಾಗೂ ಕಾನೂನು ಬದ್ಧವಾಗಿ ರಸ್ತೆಯನ್ನು ಮಾಡಿಲ್ಲ. ಅಷ್ಟೇ ಅಲ್ಲ ಹೆಚ್ಚುವರಿ ಭೂಮಿಯನ್ನು ರಿಯಲ್ ಎಸ್ಟೇಟ್ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಭೂಮಿ ಕಳೆದುಕೊಂಡ ರೈತರಿಗೆ ಭಾರೀ ಅನ್ಯಾಯವಾಗಿದೆ ಎಂದರು.

ಸೋಮಶೇಖರ್ ಮುಂದುವರೆದು ಮಾತನಾಡಿ, ನೈಸ್ ಸಂಸ್ಥೆಗೆ ಹೆಚ್ಚುವರಿ ಭೂಮಿ ನೀಡಲಾಗಿರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಸಂಸ್ಥೆ 1900 ಎಕರೆ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಂಡು ಟೌನ್ ಶಿಪ್ ನಿರ್ಮಿಸುತ್ತಿದೆ. ಇದು ಕಾನೂನು ಬಾಹಿರ ಎಂದರು. ಟೌನ್‌ಶಿಪ್‌ಗೆ ವಶಪಡಿಸಿಕೊಂಡಿರುವ ಭೂಮಿಗೆ ಎಕರೆಯೊಂದಕ್ಕೆ ಒಂದು ಕೋಟಿ 60 ಲಕ್ಷ ರೂ. ನೀಡಬೇಕು ಮತ್ತು 60x40 ಅಳತೆಯ ನಿವೇಶನವನ್ನು ರೈತರಿಗೆ ಪರಿಹಾರವಾಗಿ ನೀಡಬೇಕಿತ್ತು ಎಂದರು.

ಈ ವಿಷಯದಲ್ಲಿ ರೈತರಿಗೆ ಅನ್ಯಾಯವಾಗಿದೆ. ಈ ಹಿಂದೆ ನಿಗದಿಯಾಗಿದ್ದ ನಲವತ್ತು ಲಕ್ಷ ರೂಪಾಯಿ ಪರಿಹಾರವನ್ನು ರೈತರು ಒಪ್ಪಿಲ್ಲ ಎಂದ ಅವರು, ●8ನೇ ಪುಟಕ್ಕೆ

ಮಾನ್ಯತೆ ಹಿಂಪಡೆದ ಶಾಲೆಗಳಿಗೆ ರಿಲೀಫ್

ಬೆಂಗಳೂರು,ಏ.25– ಮಾನ್ಯತೆ ಹಿಂಪಡೆದ ಶಾಲೆಗಳಿಗೆ ಹೈಕೋರ್ಟ್‌ನಿಂದ ದೊಡ್ಡ ರಿಲೀಫ್ ಸಿಕ್ಕಿದೆ. ಅತ್ತ ಮಾನ್ಯತೆಯೂ ಕಳೆದುಕೊಂಡು ಇತ್ತ ತಮ್ಮ ಶಾಲೆಗಳ ಹೆಸರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಅಂಕಪಟ್ಟಿಯಲ್ಲೂ ನಮೂದಿಸುತ್ತಿಲ್ಲವೆಂದು ನ್ಯಾಯಾಲಯದ ಮೊರೆ ಹೋಗಿದ್ದ ಖಾಸಗಿ ಶಾಲೆಗಳ ಪರ ಹೈಕೋರ್ಟ್ ನಿಂತಿದೆ.



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಬೇರೊಂದು ಶಾಲೆಗಳಲ್ಲಿ ಪರೀಕ್ಷೆ ಬರೆಸಲಾಗಿದೆ. ಇದರಿಂದ, ಪರೀಕ್ಷಾ ಫಲಿತಾಂಶ ಪಟ್ಟಿ ಹಾಗೂ ಅಂಕಪಟ್ಟಿಯಲ್ಲಿ ನಮ್ಮ ಶಾಲೆಗಳ ಹೆಸರನ್ನು ಕೈಬಿಡುವ ಸಾಧ್ಯತೆ ಇದೆ. ಆದ್ದರಿಂದ, ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಕೋರಿದ್ದವು. ವಾದ–ಪ್ರತಿವಾದ ಆಲಿಸಿದ ಬಳಿಕ ನ್ಯಾಯಪೀಠ, ಶೈಕ್ಷಣಿಕ ವರ್ಷದ ಕೊನೆಯಲ್ಲಿ ●5ನೇ ಪುಟಕ್ಕೆ

ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ: ನಿವೇಶನಗಳ ದಾಖಲೆ ಪುಟಗಳೇ ಮಂಗಮಾಯ ಪ್ರಕರಣ

ಮುಡಾ ಸಿಬ್ಬಂದಿಯ ನೆರವಿನಿಂದಲೇ 30 ವರ್ಷದಿಂದ ನಡೆದಿದೆ ಭಾರೀ ಅಕ್ರಮ

ಮೈಸೂರು, ಏ.25(ಆರ್‌ಕೆ)– ನೂರಾರು ನಿವೇಶನಗಳ ದಾಖಲೆಯ ಪುಟಗಳೇ ನಾಪತ್ತೆಯಾಗಿರುವ ಪ್ರಕರಣ ಸಂಬಂಧ ವಿಶೇಷ ಕಾರ್ಯಾಚರಣೆ ನಂತರ ಸಮಗ್ರ ತನಿಖೆಗೆ ಆದೇಶಿಸಲಾಗುವುದು ಎಂದು ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಇಂದಿಲ್ಲಿ ತಿಳಿಸಿದ್ದಾರೆ.

ಪ್ರಾಧಿಕಾರದ ಕಚೇರಿ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಅವರು, ಏ.23 ಮತ್ತು 24 ರಂದು ವಿಶೇಷ ತಪಾಸಣಾ ಕಾರ್ಯಾಚರಣೆ ನಡೆಸಿದಾಗ 216 ಕಡತಗಳಲ್ಲಿನ ಹಾಳೆಗಳು ನಾಪತ್ತೆಯಾಗಿರುವುದು ಕಂಡು ಬಂದಿದ್ದು, ಕಾರ್ಯದರ್ಶಿಗಳ ನೇತೃತ್ವದಲ್ಲಿ 6 ಮಂದಿ ವಿಶೇಷ ಪರಿಶೀಲನಾ ಕಾರ್ಯ ಮುಂದುವರಿಸಿದ್ದಾರೆ. ಎಷ್ಟು ಕಡತಗಳ ಪುಟಗಳು ಕಣ್ಮರೆಯಾಗಿವೆ ಎಂಬ ಸಂಪೂರ್ಣ ಮಾಹಿತಿ ತಿಳಿದ ನಂತರ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ತನಿಖೆ ಮಾಡಿಸುವ ಬಗ್ಗೆ ತೀರ್ಮಾನಿಸಿ, ಒಂದು ಬಲಿಷ್ಠ ಸಂಸ್ಥೆ(Agency)ಗೆ ಒಪ್ಪಿಸುತ್ತೇವೆ ಎಂದರು.

ಕಳೆದ 25–30 ವರ್ಷಗಳಿಂದಲೂ ವಿವಿಧ ಹಂತದಲ್ಲಿ ಈ ಅಕ್ರಮ ನಡೆದಿದ್ದು, ಮುಡಾ ಅಧಿಕಾರಿಗಳು, ಸಿಬ್ಬಂದಿ ಶಾಮೀಲಾಗದೇ ಇದು ಸಾಧ್ಯವಿಲ್ಲ ಎಂಬುದು ಖಾತರಿಯಾಗಿದೆ. ತನಿಖೆಯಲ್ಲಿ ದೃಢಪಟ್ಟರೆ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು. ತಾವು ಅಧ್ಯಕ್ಷರಾದ ನಂತರ ಕಡತಗಳನ್ನು ಸ್ಕ್ಯಾನ್ ಮಾಡಿಸಿ ಕಂಪ್ಯೂಟರೀಕರಣಗೊಳಿಸುವ ಮೂಲಕ ಕ್ಯಾಟ್‌ಲಾಗ್–ಇಂಡೆಕ್ಸ್ ಪ್ರಕ್ರಿಯೆ ಮಾಡಿಸಲು ಮುಂದಾದ ವೇಳೆ ನಿವೇಶನಗಳ ದಾಖಲೆಗಳಲ್ಲಿನ ಹಾಳೆಗಳು ನಾಪತ್ತೆಯಾಗಿರುವುದು ಪತ್ತೆಯಾಗಿದೆ ಎಂದು ವಿವರಿಸಿದರು. ಹಿಂದಿನ ಸಿಐಟಿಬಿ ಮತ್ತು ಮುಡಾ ವ್ಯಾಪ್ತಿಯಲ್ಲಿ ರಚಿಸಲಾದ ವಸತಿ

ವಿಶೇಷ ಕಾರ್ಯಾಚರಣೆ ನಂತರ ಸಮಗ್ರ ತನಿಖೆ: ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ



ಮುಡಾ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿದರು. ಸದಸ್ಯರಾದ ಲಕ್ಷ್ಮೀದೇವಿ, ಮಾದೇಶ್, ನವೀನ್‌ಕುಮಾರ್, ನಿಂಗಣ್ಣ ಉಪಸ್ಥಿತರಿದ್ದರು.

ಮುಡಾ ಕಚೇರಿಯೊಳಗಿನ ಕಳ್ಳರ ಕೈವಾಡವೇ ಹೆಚ್ಚಿದೆ!

ಮೈಸೂರು: ನಿವೇಶನಗಳ ಸಂಬಂಧ ಕಡತ, ಲೆಡ್ಜರ್‌ಗಳಲ್ಲಿನ ಪ್ರಮುಖ ದಾಖಲೆಗಳ ಪುಟಗಳನ್ನು ತೆಗೆದು, ನಕಲಿ ದಾಖಲೆ ಸೇರಿಸಿರುವ ಪ್ರಕರಣಗಳಲ್ಲಿ ಮುಡಾ ಅಧಿಕಾರಿಗಳು, ಸಿಬ್ಬಂದಿ ಶಾಮೀಲಾಗಿದ್ದಾರೆ ಎಂದು ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದ್ದಾರೆ. ಕಚೇರಿಯ ಅಭಿಲೇಖಾಲಯದಲ್ಲಿ ಸಂರಕ್ಷಿಸಿರುವ ಮೂಲ ಕಡತ ಹಾಗೂ ಲೆಡ್ಜರ್‌ಗಳು, ಲೆಕ್ಕ ಶಾಖೆಯಲ್ಲಿರುವ ಹಣ ಪಾವತಿ ಚಲನ್‌ಗಳಿರುವ ಫೈಲ್‌ಗಳ ಕೆಲ ಹಾಳೆಗಳು ನಾಪತ್ತೆಯಾಗಲು ಸಂಬಂಧಪಟ್ಟ ಅಧಿಕಾರಿ, ಸಿಬ್ಬಂದಿಗಳಿಂದ ಮಾತ್ರ ಸಾಧ್ಯ. ಮನೆಯವರಲ್ಲದೇ, ಹೊರಗಿನವರಿಂದ ಈ ಕೆಲಸ ಸಾಧ್ಯವಾಗುವುದಿಲ್ಲ. ಮಧ್ಯವರ್ತಿಗಳಿಗೆ ಸಹಾಯ ಮಾಡಲು ಮುಡಾದವರೇ ಈ ಕೃತ್ಯವೆಸಗಿ ಭಾರೀ ಪ್ರಮಾಣದ ಹಣದ ಅವ್ಯವಹಾರ ನಡೆಸಿರುವ ಶಂಕೆ ಇದೆ ಎಂದರು. ಕಳೆದ 25–30 ವರ್ಷಗಳಿಂದ ಹಂತ–ಹಂತವಾಗಿ ಈ ಅಕ್ರಮಗಳು ನಡೆದಿರುವುದರಿಂದ ●5ನೇ ಪುಟಕ್ಕೆ

ನಿವೇಶನ ಖರೀದಿಸುವಾಗ ಮುಡಾದಲ್ಲಿ ದಾಖಲೆ ನೈಜತೆ ದೃಢಪಡಿಸಿಕೊಳ್ಳಿ

ಮೈಸೂರು: ಮುಡಾದಿಂದ ಅಭಿವೃದ್ಧಿಯಾಗಿರುವ ಬಡಾವಣೆಗಳ ನಿವೇಶನ, ಕಟ್ಟಡಗಳನ್ನು ಖರೀದಿಸುವ ಮುನ್ನ ಪ್ರಾಧಿಕಾರದ ಕಚೇರಿಯಲ್ಲಿ ದಾಖಲಾತಿಗಳ ನೈಜತೆಯನ್ನು ದೃಢಪಡಿಸಿಕೊಳ್ಳಿ ಎಂದು ಅಧ್ಯಕ್ಷ ಹೆಚ್.ವಿ.ರಾಜೀವ್, ಸಾರ್ವಜನಿಕರಿಗೆ ಸಲಹೆ ನೀಡಿದ್ದಾರೆ. ಮುಡಾ ಕಾರ್ಯದರ್ಶಿಗಳಿಗೆ ಅರ್ಜಿ ಸಲ್ಲಿಸಿ ನೀವು ಖರೀದಿಸಬೇಕೆಂದಿರುವ ನಿವೇಶನದ ಮಾಹಿತಿ ನೀಡಿ, ಅದರ ಮೂಲ ಕಡತ, ಲೆಡ್ಜರ್‌ಗಳಲ್ಲಿ ಲಭ್ಯವಿರುವ ದಾಖಲೆಗಳು ಸರಿಯಾಗಿವೆಯೇ ಎಂಬುದನ್ನು ಖಚಿತಪಡಿಸಿಕೊಂಡು ಲಿಖಿತ ರೂಪದ ದೃಢೀಕರಣ ಪಡೆದು ವಂಚನೆಯಿಂದ ಪಾರಾಗಿ ಎಂದು ತಿಳಿಸಿದ್ದಾರೆ.

ಮೋಸ ಮಾಡುವವರು ತೋರಿಸುವ ದಾಖಲೆಗಳು ಮೂಲ ದಾಖಲೆ ರೀತಿಯೇ ಕಾಣುತ್ತವೆ. ಅದನ್ನು ನಂಬಿ ಪರಿಶೀಲಿಸದೇ ಖರೀದಿಸಿದರೆ ನೀವು ವಂಚನೆಗೊಳಗಾಗುವುದು ಖಚಿತ. ನಂತರ ಮುಡಾಗೆ ಬಂದು ಕೇಳಿದರೆ ಏನೂ ಮಾಡಲು ಸಾಧ್ಯವಾಗುವುದಿಲ್ಲ ಎಂದು ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದ್ದಾರೆ.

ಬದಲಿ ನಿವೇಶನದಲ್ಲೂ ಭಾರೀ ಅಕ್ರಮ

ಮೈಸೂರು: ಬದಲಿ ನಿವೇಶನಗಳ ಹಂಚಿಕೆಯಲ್ಲಿ ಭಾರೀ ಅವ್ಯವಹಾರವಾಗಿರುವುದು ಕಂಡು ಬಂದಿದ್ದು, ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿಯಲ್ಲಿ ಮೂಲ ಕಡತ ಇಲ್ಲದಿದ್ದರೂ ನಕಲಿ ದಾಖಲೆ ಸೃಷ್ಟಿಸಿ ಹಲವು ಬದಲಿ ನಿವೇಶನ ನೀಡಿರುವುದು ಬೆಳಕಿಗೆ ಬಂದಿದೆ ಎಂದು ಹೆಚ್.ವಿ.ರಾಜೀವ್ ತಿಳಿಸಿದರು.

ಬಡಾವಣೆಗಳಲ್ಲಿ ಹಂಚಿಕೆಯಾದ ನಿವೇಶನಗಳ ಸಂಬಂಧ ಪ್ರಾಧಿಕಾರದಲ್ಲಿ ನಿರ್ವಹಿಸಲಾದ ಕಡತಗಳಲ್ಲಿನ ಮಾಹಿತಿ ತಾಳೆಯಾಗದಿರುವುದರಿಂದ ಪ್ರಾಧಿಕಾರದ ಅಭಿಲೇಖಾಲಯದಲ್ಲಿರಿಸಿರುವ ಕಡತಗಳನ್ನು ಪರಿಶೀಲಿಸಲಾಗುತ್ತದೆ ಎಂದರು. ●5ನೇ ಪುಟಕ್ಕೆ

2017ನೇ ಸಾಲಿನ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ

ಹಿರಿಯ ನಟಿ ಲಕ್ಷ್ಮೀಗೆ ಡಾ.ರಾಜ್‌ಕುಮಾರ್ ಪ್ರಶಸ್ತಿ ಪ್ರದಾನ

ಎಸ್.ನಾರಾಯಣ್‌ಗೆ ಪುಟ್ಟಣ್ಣ ಕಣಗಾಲ್, ಲಕ್ಷ್ಮೀಪತಿಗೆ ಡಾ.ವಿಷ್ಣುವರ್ಧನ್ ಪ್ರಶಸ್ತಿ

ಬೆಂಗಳೂರು, ಏ.25 (ಕೆಎಂಶಿ)–ಇದೇ ವರ್ಷ ಮೈಸೂರಿನಲ್ಲಿ ಚಿತ್ರ ನಗರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಪ್ರಕಟಿಸಿದರು.

ನಟಸಾರ್ವಭೌಮ ಡಾ ರಾಜಕುಮಾರ್ ಅವರ 94ನೇ ಜನ್ಮದಿನಾಚರಣೆ ಹಾಗೂ 2017ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. ಯಾರೂ ಮನವಿ ಅಥವಾ ಬೇಡಿಕೆ ಸಲ್ಲಿಸದಿದ್ದರೂ ಪ್ರಸಕ್ತ 2022–23ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ ತಾವು 125 ಕನ್ನಡ ಮತ್ತು ಪ್ರಾದೇಶಿಕ ಚಲನಚಿತ್ರಗಳಿಗೆ ಬದಲಾಗಿ 200 ಚಲನಚಿತ್ರಗಳಿಗೆ ಸಹಾಯಧನ ನೀಡಲು ಅವಕಾಶ ಕಲ್ಪಿಸಿರುವುದಾಗಿ ತಿಳಿಸಿದರು.

ಕಾಡುಗಳ್ಳ ವೀರಪ್ಪನ್ ಅವರಿಂದ ಬಂಧಮುಕ್ತ ರಾದ ನಂತರ ಡಾ. ರಾಜ್‌ಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದ ಸಂದರ್ಭದಲ್ಲಿ ಯಾವುದೇ ಕಹಿ ಘಟನೆಗಳನ್ನು ಸ್ಮರಿಸದೆಯೇ ಕೆಟ್ಟ ವಿಚಾರ ಗಳನ್ನು ಪ್ರಸ್ತಾಪಿಸದ ಡಾ. ರಾಜ್ ಕುಮಾರ್ ಅವರ ಉದಾತ್ತ ಮನೋಭಾವವನ್ನು ಕೊಂಡಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜೀವಿತಾವಧಿ ಸಾಧನೆಗಾಗಿ ಸುಪ್ರಸಿದ್ಧ ನಟಿ ಲಕ್ಷ್ಮೀ ಅವರಿಗೆ ಡಾ. ರಾಜಕುಮಾರ್ ಪ್ರಶಸ್ತಿ ಹಾಗೂ ಹೆಸರಾಂತ ನಿರ್ದೇಶಕ ಎಸ್. ನಾರಾಯಣ್ ಅವರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ನೀಡಿ ಗೌರವಿಸಿದರು.



ಇದೇ ಸಂದರ್ಭದಲ್ಲಿ ಡಾ. ರಾಜ್‌ಕುಮಾರ್ ಅವರ ಹೆಸರಿನ ಪ್ರಶಸ್ತಿ ತಮಗೆ ಲಭಿಸುತ್ತಿರುವುದು ರಾಜ್ ಅವರ ಆಶೀರ್ವಾದ ಲಭಿಸಿದಂತೆ ಎಂದು ನಟಿ ಲಕ್ಷ್ಮೀ ಭಾವುಕರಾಗಿ ನುಡಿದರು.

ಕೆಲಸ ಕಲಿಯಲು ಪುಟ್ಟಣ್ಣ ಕಣಗಾಲ್ ಅವರಲ್ಲಿ ತಾವು ಅವಕಾಶ ಕೋರಿದ ದಿನಗಳನ್ನು ಸ್ಮರಿಸಿದ ನಟ–ನಿರ್ದೇಶಕ ಎಸ್ ನಾರಾಯಣ್ ಅವರು ಪುಟ್ಟಣ್ಣ ಅವರ ಹೆಸರಿನ ಪ್ರಶಸ್ತಿ ತಮಗೆ ದೊರೆತಿರುವುದು ತಮ್ಮ ಸೌಭಾಗ್ಯ ಹಾಗೂ ಈ ದಿನ ತಮ್ಮ ಪಾಲಿನ ಸುದಿನ ಎಂದು ಬಣ್ಣಿಸಿದರು. ಕನ್ನಡ ಚಲನಚಿತ್ರ ರಂಗಕ್ಕೆ ಹಲವು ಸದಭಿರುಚಿಯ ಚಿತ್ರಗಳ ಕೊಡುಗೆ ನೀಡಿದ ನಿರ್ಮಾಪಕ ಹಾಗೂ ಡಾ. ವಿಷ್ಣುವರ್ಧನ್ ಪ್ರಶಸ್ತಿಗೆ ಭಾಜನರಾಗಿದ್ದ ಜಿ.ಎನ್.ಲಕ್ಷ್ಮೀಪತಿ ಅವರು ನಿಧನರಾಗಿರುವ ಹಿನ್ನೆಲೆಯಲ್ಲಿ ಲಕ್ಷ್ಮೀಪತಿ ಅವರ ಪುತ್ರ ರಾಮಪ್ರಸಾದ್ ಅವರು ತಮ್ಮ ತಂದೆಯ ಪರವಾಗಿ ಮುಖ್ಯಮಂತ್ರಿಯವರಿಂದ ಡಾ.ವಿಷ್ಣುವರ್ಧನ್ ಪ್ರಶಸ್ತಿ ಸ್ವೀಕರಿಸಿದರು. ಡಾ ರಾಜ ಕುಮಾರ್ ಪ್ರಶಸ್ತಿ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಹಾಗೂ ಡಾ.ವಿಷ್ಣುವರ್ಧನ್ ಪ್ರಶಸ್ತಿ ಪುರಸ್ಕೃತರಿಗೆ ತಲಾ 5 ಲಕ್ಷ ರೂ. ನಗದು, ಐವತ್ತು ಗ್ರಾಂ ಚಿನ್ನದ ಪದಕ, ಪ್ರಶಸ್ತಿ ಫಲಕ, ಸ್ಮರಣಿಕೆ ಮತ್ತು ಫಲ ತಾಂಬೂಲ ನೀಡಿ ಮುಖ್ಯಮಂತ್ರಿ ಗೌರವಿಸಿದರು. ಉತ್ತಮ ನಟ, ಉತ್ತಮ ನಟಿ ಮೊದಲ, ಎರಡನೇ ಮತ್ತು ಮೂರನೇ ಅತ್ಯುತ್ತಮ ಚಿತ್ರಗಳ ಹಾಗೂ ಇತರೆ ತಾಂತ್ರಿಕ ವರ್ಗದವರಿಗೂ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಾಘವೇಂದ್ರ ರಾಜ್‌ಕುಮಾರ್ ಅವರು ತಮ್ಮ ತಂದೆ ರಾಜ್‌ಕುಮಾರ್ ಹಾಗೂ ಕಿರಿಯ ಸಹೋದರ ಪುನೀತ್ ರಾಜ್‌ಕುಮಾರ್ ಅವರ ಸರಳತೆ ಮತ್ತು ಮಾನವೀಯತೆಯ ಗುಣಗಳನ್ನು ಅನಾವರಣಗೊಳಿಸಿದರು. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್.ಜೈರಾಜ್, ನಿರ್ಮಾಪಕ ಎಸ್.ಎ. ಚಿನ್ನೇಗೌಡ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಡಾ.ಪಿ.ಎಸ್.ಹರ್ಷ ಸೇರಿದಂತೆ ಹಲವು ಗಣ್ಯರು ವೇದಿಕೆ ಅಲಂಕರಿಸಿದ್ದರು. ಸಮಾರಂಭಕ್ಕೆ ಮುನ್ನ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳ ರಸದೌತಣ ಪ್ರೇಕ್ಷಕರ ಮನತಣಿಸಿತು.

ಮಾನವೀಯ ಗುಣಗಳೇ ಭಾರತದ ಅಂತರ್ಗತ ಶಕ್ತಿ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮತ
- ರೈಲ್ವೆ ಕಚೇರಿ ಆವರಣದಲ್ಲಿ ಅಂಬೇಡ್ಕರ್ ಪುತ್ಥಳಿ ಅನಾವರಣ

ಬೆಂಗಳೂರು, ಏ.25 (ಕೆಎಂಶಿ)– ಮಾನವೀಯ ಗುಣಗಳೇ ಭಾರತ ದೇಶದ ಅಂತರ್ಗತ ಶಕ್ತಿಯಾಗಿದ್ದು, ಪ್ರತಿ ಭಾರತೀಯನನ್ನು ಒಗ್ಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ಸೋಮವಾರ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿ ಆವರಣದ ಬಳಿ ಅಖಿಲ ಭಾರತ ಪರಿಶಿಷ್ಟ ಜಾತಿ/ವರ್ಗದ ರೈಲ್ವೆ ನೌಕರರ ಸಂಘದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದರು.

ಡಾ.ಅಂಬೇಡ್ಕರ್ ಅವರು ರಚಿಸಿದ ಭಾರತ ಸಂವಿಧಾನ ಶ್ರೇಷ್ಠ ಸಂವಿಧಾನವಾಗಿದೆ. ಕೇವಲ ಆಡಳಿತಗಾರರಿಗೆ ಮಾತ್ರವಲ್ಲ, ದೇಶದ ಪ್ರತಿ ನಾಗರಿಕನಿಗೂ ಅಧಿಕಾರವನ್ನು ಕೊಟ್ಟಿದೆ. ನ್ಯಾಯ, ನೀತಿ, ಬಡವರಿಗೆ ರಕ್ಷಣೆ, ತುಳಿತಕ್ಕೊಳಗಾದವರಿಗೆ ಸ್ವಾಭಿಮಾನವನ್ನು ನೀಡಿದೆ ಎಂದರು.

ಡಾ.ಅಂಬೇಡ್ಕರ್ ಅವರ ವಿಚಾರಧಾರೆ ಕಾರ್ಯರೂಪಕ್ಕೆ ತರುವುದು ನಮ್ಮೆಲ್ಲರ ಕರ್ತವ್ಯ: ಬಾಬಾ ಸಾಹೇಬ್ ಅಂಬೇಡ್ಕರ್ ಅವರು ತಳಹಂತದ, ಅವಕಾಶ ವಂಚಿತ, ಶಿಕ್ಷಣ ವಂಚಿತ ಸಮಾಜದವರು ಸ್ವಾವಲಂಬನೆಯ ಸ್ವಾಭಿಮಾನದ ಸಮಾಜವನ್ನು ಕಟ್ಟಿಕೊಳ್ಳಲು ತಮ್ಮ ಜೀವನವನ್ನೇ ಮುಡುಪಾಗಿಟ್ಟರು. ಹಕ್ಕುಗಳಿಂದ ವಂಚಿತರಾಗಿದ್ದ ಜನರಿಗೆ ನ್ಯಾಯ ಒದಗಿಸಿದರು. ಸ್ವತಂತ್ರ ಭಾರತದಲ್ಲಿ ತುಳಿತಕ್ಕೊಳಗಾದ ಜನರ ಭವಿಷ್ಯದ ಬಗ್ಗೆ ಚಿಂತನೆ ಮಾಡಿದವರು. ಆರ್‌ಬಿಐ ಸ್ಥಾಪನೆಗೆ ರೂಪುರೇಷೆ ರಚಿಸಿದರು. ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಬದಲಾವಣೆಯನ್ನು ತರುವ ಮೂಲಕ ಬದುಕಿಗೆ ಆಧಾರಸ್ತಂಭವಾಗಿದ್ದಾರೆ. ಅವರ ವಿಚಾರಧಾರೆಗಳನ್ನು ಕಾರ್ಯರೂಪಕ್ಕೆ ತರುವುದು ನಮ್ಮೆಲ್ಲರ ಕರ್ತವ್ಯ. ಡಾ.ಅಂಬೇಡ್ಕರ್ ಅವರ ಪುತ್ಥಳಿ ಸ್ಥಾಪನೆಯಿಂದ ಅವರ ಮೌಲ್ಯಗಳನ್ನು ಸ್ಥಾಪಿಸಿದಂತಾಗಿದೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದರು.



ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷರಾಗಿ ನೇಮಕಗೊಂಡಿರುವ ಧರ್ಮಸೇನಾ ಅವರನ್ನು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಹಾಗೂ ಪಾಲಿಕೆ ಮಾಜಿ ಸದಸ್ಯ ಸುನಂದಕುಮಾರ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ರಾಜಶೇಖರ್, ಪ್ರಧಾನ ಕಾರ್ಯದರ್ಶಿ ರಾಕೇಶ್‌ಕುಮಾರ್, ಕಾರ್ಯದರ್ಶಿ ಕುಮಾರಸ್ವಾಮಿ, ಮಾಧ್ಯಮ ಕಾರ್ಯದರ್ಶಿ ಕೃಷ್ಣ, ವಕೀಲ ಎಸ್‌ರಾಜು ಇದ್ದರು.

ಭಾರತೀಯರಿಗೆ ದೇಶದ ಸಂವಿಧಾನವೇ ಧರ್ಮ ಗ್ರಂಥವಾಗಬೇಕು

- ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಭಿಮತ
- ಸಂವಿಧಾನ ಓದು ಕಾರ್ಯಾಗಾರ ಉದ್ಘಾಟನೆ



ಮೈಸೂರು ವಿವಿ ಎನ್‌ಎಸ್‌ಎಸ್ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಸಂವಿಧಾನ ಓದು' ಕುರಿತ ವಿವಿ ಮಟ್ಟದ ಕಾರ್ಯಾಗಾರವನ್ನು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಉದ್ಘಾಟಿಸಿದರು.

ಸಂವಿಧಾನದಂತೆ ದೇಶದ ಪ್ರಜೆ, ರಾಜಕೀಯ ವ್ಯವಸ್ಥೆ ಎರಡೂ ಪ್ರಥಮ ದರ್ಜೆಗೇರಬೇಕು

“ವಿದ್ಯಾವಂತರಲ್ಲೂ ಸಂವಿಧಾನದ ಅರಿವಿನ ಕೊರತೆ ಇರುವುದು ಆತಂಕದ ಸಂಗತಿ. ಭಾರತ ಜಗತ್ತಿನ ಶ್ರೇಷ್ಠ ಸಂವಿಧಾನ ಹೊಂದಿದೆ. ಆದರೆ ಇಲ್ಲಿ 2ನೇ ದರ್ಜೆ ಪ್ರಜೆಗಳು ಮತ್ತು 3ನೇ ದರ್ಜೆಯ ರಾಜಕೀಯ ವ್ಯವಸ್ಥೆ ಇದ್ದು, ಈ ಎರಡೂ ಸಂವಿಧಾನದಂತೆ ಮೊದಲ ದರ್ಜೆಗೆ ಬರುವವರೆಗೆ ರಾಷ್ಟ್ರದ ಪ್ರಗತಿ ಸಾಧ್ಯವಿಲ್ಲ ಎಂದು ಕಾನೂನುತಜ್ಞ ನಾನಿ ಪಾಲ್ಕಿವಾಲ ವಿಡಂಬನಾತ್ಮಕವಾಗಿ ವಿಮರ್ಶಿಸಿದ್ದಾರೆ. ಇದು ದೇಶದ ಇಂದಿನ ಪರಿಸ್ಥಿತಿಯ ದ್ಯೋತಕವಾಗಿದೆ. **–ಪ್ರೊ.ಜಿ.ಹೇಮಂತ್‌ಕುಮಾರ್, ಕುಲಪತಿ**

ಮೈಸೂರು,ಏ.25(ಪಿಎಂ)– ಪ್ರತಿಯೊಬ್ಬ ಭಾರತೀಯನಿಗೂ ದೇಶದ ಸಂವಿಧಾನವೇ ಧರ್ಮ ಗ್ರಂಥವಾಗಬೇಕು. ಆಗ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಮೈಸೂರು ವಿವಿ ಎನ್‌ಎಸ್‌ಎಸ್ ಭವನದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರಿನ ರಾಷ್ಟ್ರೀಯ ಸೇವಾ ಯೋಜನಾ ಕೋಶ (ಎನ್‌ಎಸ್‌ಎಸ್ ಕೋಶ), ಮೈಸೂರು ವಿವಿ ಮತ್ತು ಗೊಟಗೋಡಿಯ ಕರ್ನಾಟಕ ಜಾನಪದ ವಿವಿಯ ಎನ್‌ಎಸ್‌ಎಸ್ ಘಟಕಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ಡಾ.ಬಿ.ಆರ್.ಅಂಬೇಡ್ಕರ್ ಪ್ರಚಾರ ಅಭಿಯಾನ –ಸಂವಿಧಾನ ಓದು' ಕುರಿತ ವಿವಿ ಮಟ್ಟದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನದ ಜ್ಞಾನ ಹೊಂದುವುದು ದೇಶದ ಅಭಿವೃದ್ಧಿ ಮತ್ತು ವೈಯಕ್ತಿಕ ಬೆಳವಣಿಗೆ ಎರಡಕ್ಕೂ ಪೂರಕ. ಸಂವಿಧಾನದ ಅರಿವಿನಿಂದ ನಮ್ಮ ಬದುಕನ್ನು ಉತ್ತಮವಾಗಿ ರೂಪಿಸಿಕೊಳ್ಳಬಹುದು. ಜೊತೆಗೆ ಆಡಳಿತವನ್ನೂ ಅರಿಯಬಹುದು. ಸಂವಿಧಾನದ ಅರಿವಿದ್ದರೆ ರಾಜಕೀಯ ಪಟ್ಟಭದ್ರ ಹಿತಾಸಕ್ತಿಗಳ ವಂಚನೆಗೆ ಬಲಿಯಾಗುವುದು ತಪ್ಪುತ್ತದೆ. ಅಲ್ಲದೆ, ಗೌರವಯುತ ಬದುಕು ಸಾಗಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಒಂದು ರಾಷ್ಟ್ರದ ಜೀವಾಳ, ಪ್ರಗತಿಯ ಮಾರ್ಗ ಸೂಚಕ ಮತ್ತು ಭವಿಷ್ಯದ ನಿರ್ಧಾರಕವೂ ಆಗಿರುವ ಸಂವಿಧಾನ ಪ್ರತಿಯೊಂದು ರಾಷ್ಟ್ರದ ಅವಿಭಾಜ್ಯ ಅಂಗ. ಸಂವಿಧಾನ ಎಂಬುದು ರಾಷ್ಟ್ರಗಳ ದಿಕ್ಸೂಚಿ ಇದ್ದಂತೆ. ಸಂವಿಧಾನ ಇರದ ರಾಷ್ಟ್ರ ನಾವಿಕನಿಲ್ಲದ ಹಡಗಿನಂತೆಯೇ ಸರಿ. ಇಡೀ ರಾಷ್ಟ್ರದ ಮಾರ್ಗಸೂಚಿಯಾಗಿ ಸಂವಿಧಾನ ಕಾರ್ಯ ನಿರ್ವಹಿಸುತ್ತದೆ ಎಂದರು.

ಜಗತ್ತಿನ ಶ್ರೇಷ್ಠ ಸಂವಿಧಾನಗಳ ಪಟ್ಟಿಯಲ್ಲಿ ಭಾರತದ ಸಂವಿಧಾನವೂ ಸ್ಥಾನ ಪಡೆದಿದ್ದು, ಇದು ಹೆಮ್ಮೆಯ ಸಂಗತಿ. ಜಗತ್ತಿನ ಬೃಹತ್ ಲಿಖಿತ ಸಂವಿಧಾನ ಎಂಬ ಹೆಗ್ಗಳಿಕೆಗೂ ನಮ್ಮ ಸಂವಿಧಾನ ಪಾತ್ರವಾಗಿದೆ. ಅಲ್ಲದೆ, ಹತ್ತು ಹಲವು ರಾಷ್ಟ್ರಗಳಿಗೆ ನಮ್ಮ ಸಂವಿಧಾನ ಮಾದರಿಯಾಗಿದೆ. ವಿವಿಧ ಸಂಸ್ಕೃತಿ, ಜನಾಂಗ, ಭಾಷೆ, ಧರ್ಮಗಳು ಸೇರಿದಂತೆ ವೈವಿಧ್ಯತೆಯನ್ನು ಹೊಂದಿರುವ ಭಾರತಕ್ಕೆ ವಿವಿಧತೆಯಲ್ಲಿ ಏಕತೆ ಮೂಡಿಸುವ ನಿಟ್ಟಿನಲ್ಲಿ ನಮ್ಮ ಸಂವಿಧಾನ ರೂಪುಗೊಂಡಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಇಂತಹ ವಿಶ್ವಶ್ರೇಷ್ಠ ಸಂವಿಧಾನವನ್ನು ಭಾರತಕ್ಕೆ ನೀಡುವ ಮೂಲಕ ಭಾರತದ ಸಂವಿಧಾನ ಪಿತಾಮಹರಾದರು ಎಂದು ಸ್ಮರಿಸಿದರು.

ಮೈಸೂರು ವಿವಿ ರಾಜ್ಯಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಹೆಚ್.ಎಂ.ರಾಜಶೇಖರ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವಿವಿಯ ವಿದ್ಯಾರ್ಥಿಗಳು, ಎನ್‌ಎಸ್‌ಎಸ್ ಶಿಬಿರಾರ್ಥಿಗಳಿಗೆ ರಾಜ್ಯ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನದಾಸ್ ಅವರ 'ಸಂವಿಧಾನ ಓದು' ಪುಸ್ತಕಗಳನ್ನು ವಿತರಣೆ ಮಾಡಲಾಯಿತು.

ಕರ್ನಾಟಕ ಜಾನಪದ ವಿವಿಯ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಮತ್ತು ಸಂವಿಧಾನ ಓದು ಅಭಿಯಾನದ ರಾಜ್ಯ ನೋಡಲ್ ಅಧಿಕಾರಿ ಡಾ.ಮಲ್ಲಿಕಾರ್ಜುನ ಬಿ.ಮಾನ್ಪಡೆ, ಮೈಸೂರು ವಿವಿ ಎನ್‌ಎಸ್‌ಎಸ್–ಇಟಿಐ ಸಂಯೋಜನಾಧಿಕಾರಿ ಪ್ರೊ.ಬಿ.ಚಂದ್ರಶೇಖರ, ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ. ಸುರೇಶ, ಅಧ್ಯಾಪಕರಾದ ಡಾ.ಆರ್.ನಿಂಗರಾಜು, ಡಾ. ಮಧುಸೂದನ್ ಮತ್ತಿತರರು ಹಾಜರಿದ್ದರು.

ಅಂತರರಾಷ್ಟ್ರೀಯ ಶಬ್ಧ ದಿನ: ಜಾಥಾ

ಮೈಸೂರು,ಏ.25–ಅಂತರ ರಾಷ್ಟ್ರೀಯ ಶಬ್ಧ ದಿನದ ಅಂಗವಾಗಿ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯು ಏ.27ರಂದು ಜಾಥಾ ಆಯೋಜಿಸಿದೆ. ಶಬ್ಧ, ಅದರ ಮೂಲಗಳು, ಶ್ರವಣ ಇಂದ್ರೀಯಗಳ ಮೇಲೆ ಶಬ್ಧದ ದುಷ್ಪರಿಣಾಮಗಳು ಮತ್ತು ಶ್ರವಣ ಶಕ್ತಿಯ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವುದು ಜಾಥಾದ ಮುಖ್ಯ ಉದ್ದೇಶವಾಗಿದೆ.

ಜಾಥಾವು ಬೆಳಗ್ಗೆ 8 ಗಂಟೆಗೆ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯಿಂದ ಪ್ರಾರಂಭವಾಗಿ ಸಯ್ಯಾಜಿ ರಾವ್ ರಸ್ತೆ, ಚಿಕ್ಕಗಡಿಯಾರ ತಲುಪುತ್ತದೆ. ಇದರ ಅಂಗವಾಗಿ ಫ್ಲಾಶ್ ಮಾಬ್ ಮತ್ತು ಕಿರುನಾಟಕವನ್ನು ಬೆಳಗ್ಗೆ 9 ಗಂಟೆಗೆ ಚಿಕ್ಕಗಡಿಯಾರ ಮತ್ತು ಸಂಜೆ 5 ಗಂಟೆಗೆ ವಾಲ್ ಆಫ್ ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಮೂಳೆ, ಕೀಲು ಸಮಸ್ಯೆಗೆ ತಪಾಸಣೆ

ಮೈಸೂರು,ಏ.25–ಮೈಸೂರಿನ ಗೋಕುಲಂನಲ್ಲಿರುವ ಭವೇದ್ ಆಯುರ್ವೇದ ಸಂಸ್ಥೆಯಲ್ಲಿ ಏ.27ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಮೂಳೆ, ಕೀಲು ಸಮಸ್ಯೆಗೆ ಉಚಿತ ತಪಾಸಣೆ, ಸಲಹಾ ಶಿಬಿರ ಆಯೋಜಿಸಲಾಗಿದೆ. ಮಾಹಿತಿಗೆ ಮೊ. 7483208527, 9916200341 ಸಂಪರ್ಕಿಸಿ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಏ. 25– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಏ.28ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ವಿಶೇಷ ಕೌನ್ಸಿಲ್ ಸಭೆ

ಮೈಸೂರು, ಏ.25– ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಬಜೆಟ್ (ಆಯವ್ಯಯ) ವಿಶೇಷ ಕೌನ್ಸಿಲ್ ಸಭೆಯನ್ನು ಏ.28ರ ಗುರುವಾರ ಬೆಳಗ್ಗೆ 11 ಗಂಟೆಗೆ ಮಹಾನಗರ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಪಿಎಚ್.ಡಿ ಪದವಿ

ಮೈಸೂರು: ಡಾ.ಸಂತೋಷ್ ಮಾರ್ಗದರ್ಶನದಲ್ಲಿ ಪ್ರಿಯಾಂಕ ಅವರು ವಾಕ್ ಭಾಷಾ ಮತ್ತು ದೋಷ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಮೇ 1ರಂದು ಆಹಾರ ಮೇಳ


ಮೈಸೂರು, ಏ. 25– ಮೈಸೂರಿನ ರಾಮಕೃಷ್ಣನಗರದ ವಾಸು ಬಡಾವಣೆಯಲ್ಲಿರುವ ಶ್ರೀದೇವಿ ಮಹಿಳಾ ಸಂಘವು ಮೇ 1ರಂದು 'ವಸಂತೋತ್ಸವ' ಎಂಬ ಕಾರ್ಯಕ್ರಮದಡಿ ಆಹಾರಮೇಳ ಆಯೋಜಿಸಿದೆ. ಉದ್ಯಮಶೀಲ ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ ಅವಕಾಶ ಕೊಡುವ ದೃಷ್ಟಿಕೋನದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮೇಳದಲ್ಲಿ ಇಪ್ಪತ್ತಕ್ಕೂ ಹೆಚ್ಚು ಸ್ಟಾಲ್‌ಗಳಿದ್ದು ಆಹಾರ ಪ್ರಿಯರಿಗೆ ರಸದೌತಣ ದೊರೆಯಲಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗಾಗಿ ವಿವಿಧ ಆಟೋಟ ಸ್ಪರ್ಧೆಗಳು ಮನರಂಜನಾ ಆಟಗಳು ವಿವಿಧ ವಿನೋದಾವಳಿಗಳು ಸಹ ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮವು ಅಂದು ಬೆಳಗ್ಗೆ 9.30ರಿಂದ ಸಂಜೆ 6ರವರೆಗೆ ರಾಮಕೃಷ್ಣನಗರದ ಇ ಮತ್ತು ಎಫ್ ಬ್ಲಾಕ್ ನಲ್ಲಿರುವ ನೃಪತುಂಗ ಕನ್ನಡ ಶಾಲೆಯ ಆವರಣದಲ್ಲಿ ನಡೆಯಲಿದೆ. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ 9964790442 ಅಥವಾ 9606563337.

ಸಪ್ತಪದಿಗೆ ಅರ್ಜಿ ಆಹ್ವಾನ

ಮೈಸೂರು,ಏ.25–ಧಾರ್ಮಿಕ ದತ್ತಿ ಇಲಾಖೆ ವತಿಯಿಂದ 'ಸಪ್ತಪದಿ ಸರಳ ಸಾಮೂಹಿಕ ವಿವಾಹ' ಯೋಜನೆಯಡಿ 2022ನೇ ಸಾಲಿನಲ್ಲಿ ಮೈಸೂರು ಜಿಲ್ಲಾ ವ್ಯಾಪ್ತಿಗೆ ಬರುವ ನಂಜನಗೂಡಿನ ಶ್ರೀ ಕಂಠೇಶ್ವರ ದೇವಸ್ಥಾನ ಹಾಗೂ ಚಾಮುಂಡೇಶ್ವರಿ ದೇವಾಲಯದಲ್ಲಿ ಸಾಮೂಹಿಕ ವಿವಾಹವನ್ನು ಹಮ್ಮಿಕೊಳ್ಳಲಾಗಿದ್ದು, ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಬಗಾದಿ ಗೌತಮ್ ತಿಳಿಸಿದ್ದಾರೆ. ಶ್ರೀ ಕಂಠೇಶ್ವರ ದೇವಸ್ಥಾನದಲ್ಲಿ ಮೇ 11ರಂದು ಜರುಗುವ ವಿವಾಹಕ್ಕೆ ಅರ್ಜಿಯನ್ನು ಮೇ 6ರೊಳಗಾಗಿ ಸಲ್ಲಿಸಬಹುದು ಹಾಗೂ ಚಾಮುಂಡೇಶ್ವರಿ ದೇವಾಲಯದಲ್ಲಿ ಮೇ 25ರಂದು ಜರುಗುವ ವಿವಾಹಕ್ಕೆ ಮೇ 18ರೊಳಗಾಗಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಅರ್ಜಿ ಸಲ್ಲಿಸುವವರು ವಧು–ವರರ ಫೋಟೋ, ಜನನ ಪ್ರಮಾಣ ಪತ್ರ, ಎಸ್‌ಎಸ್‌ಎಲ್‌ಸಿ ಅಂಕ ಪಟ್ಟಿ, ಆಧಾರ್ ಕಾರ್ಡ್, ಪಂಚಾಯತ್, ನಗರಸಭೆ, ಪುರಸಭೆ, ಮಹಾನಗರ ಪಾಲಿಕೆ ಅವರಿಂದ ಅವಿವಾಹಿತ ದೃಢೀಕರಣ ಪತ್ರ, ವಧು–ವರರ ಕುಟುಂಬದ ಪಡಿತರ ಚೀಟಿ ಹಾಗೂ ವಧು–ವರರ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯನ್ನು ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಬಿ.ಮುತ್ತಯ್ಯ



ಮೈಸೂರು,ಏ.25–ಮೈಸೂರಿನ ಗಾಂಧಿನಗರದ ನಿವಾಸಿ, ರೈಲ್ವೆ ಇಲಾಖೆ ನಿವೃತ್ತ ಉದ್ಯೋಗಿ ಬಿ.ಮುತ್ತಯ್ಯ (94) ಭಾನುವಾರ ನಿಧನರಾದರು. ಮೃತರು ಮಕ್ಕಳಾದ ಕೃಷ್ಣ ಮೂರ್ತಿ, ಸತ್ಯಪ್ರಕಾಶ್, ರಂಗರಾಜು, ಶಂಕರನಾರಾಯಣ, ಪಾಟೀಲ್, ವಿಜಯಲಕ್ಷ್ಮಿ, ಸುಗುಣ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಭಾನುವಾರ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ವಿಧಾನ ಪರಿಷತ್ ಮಾಜಿ ಸದಸ್ಯ ಎನ್.ಮಂಜುನಾಥ್ ಅವರ ಪತ್ನಿ ಶ್ರೀಮತಿ ಡಾ. ಆಶಾ ಮಂಜುನಾಥ್, ಪುತ್ರ ಎಂ.ಪ್ರಫುಲ್‌ಕುಮಾರ್ ಮುಂತಾದ ಗಣ್ಯರು ಮೃತರ ಅಂತಿಮ ದರ್ಶನ ಪಡೆದರು.

ಏ.28ರಂದು ಕೈಗಾರಿಕಾ ಅದಾಲತ್

ಮೈಸೂರು, ಏ.25– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ 'ಉದ್ಯಮಿಯಾಗು–ಉದ್ಯೋಗ ನೀಡು' ಕಾರ್ಯಾಗಾರದ ಜೊತೆಗೆ ಕೈಗಾರಿಕಾ ಅದಾಲತ್ ಕಾರ್ಯಕ್ರಮವನ್ನು ಏ.28ರಂದು ಮಧ್ಯಾಹ್ನ 3.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರಗೇಶ ಆರ್.ನಿರಾಣಿ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಶಾಸಕ ಎಲ್.ನಾಗೇಂದ್ರ ವಹಿಸುವರು. ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪಸ್ಥಿತರಿ ರುವರು. ಮುಖ್ಯ ಅತಿಥಿಗಳಾಗಿ ಪೌರಾಡಳಿತ ಸಚಿವ ಎಂಟಿಬಿ ನಾಗರಾಜು, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಮಂಡ್ಯ ಸುಮಲತಾ ಅಂಬರೀಶ್ ಹಾಗೂ ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರು, ನಿಗಮ ಮಂಡಳಿಯ ಅಧ್ಯಕ್ಷರು ಹಾಗೂ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಸುತ್ತೂರು ಶ್ರೀಮಠದಲ್ಲಿ ಜರುಗಿದ 104ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಹದಿಮೂರು ಜೋಡಿಗಳು ದಂಪತಿಗಳಾದರು. ಚಿತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳು–2 ಶ್ರೀ ಶಿವಕುಮಾರಸ್ವಾಮಿ, ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ.ಉದಯಶಂಕರ್, ಶ್ರೀ ದುಗ್ಗಹಟ್ಟಿ ಮಲ್ಲಿಕಾರ್ಜುನಸ್ವಾಮಿ, ಸಂಸ್ಥೆಗಳ ಮುಖ್ಯಸ್ಥರು ಹಾಗೂ ಇತರರನ್ನು ಕಾಣಬಹುದು.

ಮುಡಾದಿಂದ ಕಾಯ್ದೆ ಉಲ್ಲಂಘಿಸಿ ಕಾಮಗಾರಿ; ಆರೋಪ

ಸದರಿ ಸಂಸ್ಥೆ ನಿವೃತ್ತ ಅಧಿಕಾರಿಯಿಂದಲೇ ಬೂಟ್ ಪಾಲಿಷ್ ಮೂಲಕ ವಿಭಿನ್ನ ಪ್ರತಿಭಟನೆ

ಮೈಸೂರು,ಏ.25(ಪಿಎಂ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಕಮಿಷನ್‌ಗಾಗಿ ನಿಯಮ ಬಾಹಿರವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಮುಡಾ ನಿವೃತ್ತ ನಗರ ಯೋಜನಾ ಸಹಾಯಕ ನಿರ್ದೇಶಕ ಹಾಗೂ ಮುಡಾ ನೌಕರರ ಸಂಘದ ಮಾಜಿ ಅಧ್ಯಕ್ಷ ಪಿ.ಎಸ್.ನಟರಾಜ್ ಸೋಮವಾರ ಏಕಾಂಗಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ ಕಚೇರಿ ಎದುರು ಬೂಟ್ ಪಾಲಿಷ್ ಮಾಡುವ ಮೂಲಕ ವಿಭಿನ್ನ ರೀತಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇವಲ 36 ಪುಟಗಳ ಪುಟ್ಟ ಕಾಯ್ದೆಯ ತಳಹದಿಯಲ್ಲಿ ಮುಡಾ ರಚನೆಯಾಗಿದೆ. ಬಡಾವಣೆ ಮತ್ತು ವಸತಿ ನಿರ್ಮಾಣಕ್ಕೆ ಮಾತ್ರ ಮುಡಾ ಅಧಿಕಾರ ವ್ಯಾಪ್ತಿ ಸೀಮಿತವಾಗಿದೆ. ಆದರೂ ಗ್ರಾಮೀಣ ಪ್ರದೇಶದ ಅಭಿವೃದ್ಧಿ ನೆಪದಲ್ಲಿ ವಿವಿಧ ಕಾಮಗಾರಿಗಳ ಮೂಲಕ ಕಮಿಷನ್ ಹೊಡೆಯಲು ಮುಂದಾಗಲಿದೆ ಎಂದು ದೂರಿದರು.



ಕಳೆದ 21 ವರ್ಷಗಳಿಂದ ಯಾವುದೇ ಬಡಾವಣೆಯನ್ನೂ ನಿರ್ಮಾಣ ಮಾಡಿಲ್ಲ. ಇಂತಹ ಒಂದು ದುಸ್ಥಿತಿಯಲ್ಲಿ ಮುಡಾ ಇದ್ದು, ಈಗಿನ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರ ಅಧಿಕಾರ ವ್ಯಾಪ್ತಿಯಲ್ಲಿ ಹೆಚ್ಚಿನ ಭ್ರಷ್ಟಾಚಾರ ನಡೆದಿದೆ. ಇದಕ್ಕೆ ಮುಡಾ ಆಯುಕ್ತ ನಟೇಶ್ ಅವರೇ ಮುಖ್ಯ ಕಾರಣ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಕಾಮಗಾರಿ ಮಾಡದಂತೆ ಸರ್ಕಾರ ಆದೇಶ ನೀಡಿದೆ. ಆದರೆ ಕಮಿಷನ್‌ಗಾಗಿ ಕಾಮಗಾರಿ ನಡೆಸಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಹಳ್ಳಿಗಳ ಅಭಿವೃದ್ಧಿ ನೆಪದಲ್ಲಿ 1,774 ಕೋಟಿ ರೂ. ವೆಚ್ಚದಲ್ಲಿ 1,083 ಕಾಮಗಾರಿಗಳನ್ನು 2021–22ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಹೊರಟಿದ್ದಾರೆ. ಆದರೆ ಮುಡಾದಲ್ಲಿ ಅಷ್ಟು ಪ್ರಮಾಣದ ಆರ್ಥಿಕ ಸಂಪನ್ಮೂಲವೇ ಇಲ್ಲ. ಗ್ರಾಮೀಣ ಪ್ರದೇಶದಲ್ಲಿ ಅನಗತ್ಯ ಕಾಮಗಾರಿ ಕೈಗೊಳ್ಳಲು ಮುಂದಾಗಿದ್ದು, ಜಿಲ್ಲಾ ಪಂಚಾಯಿತಿ ಮಾಡುವ ಕಾಮಗಾರಿಗೆ ಇವರು ತೇಪೆ ಹಚ್ಚುತ್ತಾರೆ ಅಷ್ಟೇ. ಇದೆಲ್ಲಾ ಹಣ ಲೂಟಿ ಮಾಡಲು ಇವರು ಮಾಡಿಕೊಂಡಿರುವ ದಾರಿ ಎಂದು ಆರೋಪಿಸಿದರು.

2021–22ರಲ್ಲಿ ಬಜೆಟ್ ಮಂಡನೆಯಾದ ಸಂದರ್ಭದಲ್ಲಿ ನಿರೀಕ್ಷಿತ ಆದಾಯ 1189.20 ಕೋಟಿ ರೂ.ಗಳು ಬರುತ್ತದೆ ಎಂದು ಅಂದಾಜಿಸಿದ್ದರು. ಆದರೆ ಆದಾಯ ಬಂದಿರುವುದು ಕೇವಲ 425.03 ಕೋಟಿ ರೂ. ಮಾತ್ರ, ಹಾಗಾಗಿ 1774.29 ಕೋಟಿ ರೂ. ವೆಚ್ಚದ ಕಾಮಗಾರಿ ಮಾಡುವ ಶಕ್ತಿ ಪ್ರಾಧಿಕಾರಕ್ಕೆ ಇಲ್ಲವಾಗಿದೆ ಎಂದು ಪ್ರತಿಪಾದಿಸಿದರು.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ಮತ್ತು 2019ರ ಕಾಮಗಾರಿ ಮಾರ್ಗದರ್ಶಿ ಸುತ್ತೋಲೆ ವಿರುದ್ಧವಾದ ಕಾಮಗಾರಿಗಳ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸಬೇಕು. ನಿವೃತ್ತ ಜಿಲ್ಲಾ ನ್ಯಾಯಧೀಶರಿಂದ ಇಲಾಖಾ ವಿಚಾರಣೆ ನಡೆಸಿ, ಅಪವ್ಯಯ ಮಾಡಿದ ಪ್ರಾಧಿಕಾರ ಹಣವನ್ನು ಸಂಬಂಧಿಸಿದ ಅಧಿಕಾರಿಗಳಿಂದ ವಸೂಲಿಗೆ ಶಿಸ್ತು ಕ್ರಮ ಕೈಗೊಳ್ಳಬೇಕು. ನೂರಾರು ಕೋಟಿ ಹಗರಣ, ಭ್ರಷ್ಟಾಚಾರ ಆರೋಪ ಸಂಬಂಧ ಸಿಬಿಐ ತನಿಖೆಗೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ನನಗೆ ಪಿಂಚಣಿ ಕೊಡುವ ಸಂಸ್ಥೆ ಇದು. ಈ ಸಂಸ್ಥೆ ಉಳಿಸಬೇಕಿರುವುದು ನನ್ನ ಜವಾಬ್ದಾರಿಯಾಗಿದೆ. ಏ.28ರವರೆಗೂ ಮುಡಾ ಎದುರು ಕಚೇರಿ ವೇಳೆಯಲ್ಲಿ ಇದೇ ರೀತಿಯಲ್ಲಿ ಪ್ರತಿಭಟನೆ ನಡೆಸಲಿದ್ದೇವೆ. ಬಳಿಕ ಕಾನೂನು ಹೋರಾಟಕ್ಕೂ ಮುಂದಾಗಲಿದ್ದೇನೆ ಎಂದು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.04.2022 ಮಂಗಳವಾರ, ಮಳೆ ನಕ್ಷತ್ರ: ಅಶ್ವಿನಿ 14.04.2022ರಿಂದ 26.04.2022 ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ ತಿಥಿ: ಏಕಾದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಕ್ರೀಡಾ ಕೌಶಲ್ಯ ಮತ್ತು ಹಸ್ತಿ ಮಂಗಳ ವಸ್ತುಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಕಲಾ ಪ್ರತಿಷ್ಠಾನ, ಮೃಗಾಲಯದ ಎದುರು, ಬೆಳಗ್ಗೆ 10ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಮತ್ತು 5.00 ಅಕ್ಷರ ಮೈಸೂರು ಅನ್ನದ ಸೂರು –ಮೈಸೂರಿನ ಪರಂಪರೆಯಲ್ಲಿ ಅನ್ನ ಅಕ್ಷರಗಳ ನೆನಪು– ಪ್ರಸ್ತುತಿ– ಡಾ.ವಿ.ರಂಗನಾಥ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಎಂ.ಆರ್. ಸುಧಾ, ಹಂಸಿನಿ ಎಸ್.ಕುಮಾರ್, ವ್ಯಾಖ್ಯಾನ–ಡಾ.ಪ್ರದೀಪ್ ಕುಮಾರ್ ಹೆಬ್ರಿ,7.15 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್, 10.05 ಖೇಲೋ ಇಂಡಿಯಾ ಯೂನಿವರ್ಸಿಟಿ ಕ್ರೀಡಾಕೂಟದ ಸೋಮವಾರದ ಆಟಗಳ ಅವತರಣಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರ ನಾಮ–ಎಂ.ಎಸ್.ಶೀಲ, ವಾಣಿ ಜಯರಾಂ, 1.20 ಭಾವಗೀತೆ–ಯಶ್‌ವಂತ್ ಹಳಿಬಂಡಿ, ಸಂಗೀತಾ ಕಟ್ಟಿ, 3.00 ಎಸ್. ಶಂಕರ್ –ಹಾಡುಗಾರಿಕೆ, 4.00 ಕಥಾಕಾಲಕ್ಷೇಪ–ಮೂರೂವರೆ ವಜ್ರಗಳು, ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ, ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಕುರಿತು ಸಿ.ಮಿಲ್ ನಾಗರಾಜು ಅವರೊಡನೆ ಸಂದರ್ಶನ, 9.30 ಎನ್.ಚೊಕ್ಕಮ್ಮ –ವೀಣಾವಾದನ ಮತ್ತು ಹಾಡುಗಾರಿಕೆ, 10.30 ಸವಿನೆನಪು

ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ

8,338 ಮಂದಿಗೆ ಪದವಿ ಪ್ರದಾನ





ಮೈಸೂರು,ಏ.25(ಎಂಟಿವೈ)– ಮೈಸೂರಿನ ಮುಕ್ತ ಗಂಗೋತ್ರಿ ಆವರಣದಲ್ಲಿರುವ ಘಟಿಕೋತ್ಸವ ಭವನದಲ್ಲಿ ಸೋಮವಾರ ನಡೆದ ರಾಜ್ಯ ಮುಕ್ತ ವಿವಿ 17ನೇ ಘಟಿಕೋತ್ಸವದಲ್ಲಿ 2018–19ನೇ ಮತ್ತು 2020–22ನೇ ಶೈಕ್ಷಣಿಕ ಸಾಲಿನ 8,338 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಯಿತು. ಪದವಿ ಬೇಟೆಯಲ್ಲಿ ಮಹಿಳೆಯರೇ ಮೇಲುಗೈ ಸಾಧಿಸಿದರು. ವಿವಿಧ ವಿಷಯಗಳಲ್ಲಿ 5,066 ವನಿತೆಯರು ಹಾಗೂ 3,272 ಪುರುಷರು ಪದವಿ ಪಡೆದುಕೊಂಡರು.

ಕುಲಾಧಿಪತಿಯೂ ಆದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು 48 ಅಭ್ಯರ್ಥಿಗಳಿಗೆ ಚಿನ್ನದ ಪದಕ, 38 ಅಭ್ಯರ್ಥಿಗಳಿಗೆ ನಗದು ಬಹುಮಾನ, 31 ಸಂಶೋಧನಾ ಅಭ್ಯರ್ಥಿಗಳಿಗೆ ಪಿಹೆಚ್‌ಡಿ ಪದವಿ ಪ್ರದಾನ ಮಾಡಿದರು. ಇದರಲ್ಲಿ 20 ಪುರುಷರು, 11 ಮಹಿಳೆಯರಿದ್ದರು. ಕನ್ನಡದಲ್ಲಿ 11, ಇತಿಹಾಸ, ಕಾನೂನು ಶಾಸ್ತ್ರ, ಶಿಕ್ಷಣದಲ್ಲಿ ತಲಾ ಮೂವರು, ಇಂಗ್ಲಿಷ್, ಹಿಂದಿ, ತೆಲುಗು, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ವಾಣಿಜ್ಯಶಾಸ್ತ್ರ ತಲಾ ಇಬ್ಬರು ಪಿಹೆಚ್‌ಡಿ ಪದವಿ ಪಡೆದರು.

ಭಾಷಿಕ ವಿಷಯಗಳ ಸ್ನಾತಕೋತ್ತರ ಪದವಿ ಪಡೆಯುವವರಲ್ಲಿ ಕನ್ನಡ ಐಚ್ಛಿಕ ವಿಷಯದ ವಿದ್ಯಾರ್ಥಿಗಳು ಮುಂಚೂಣಿಯಲ್ಲಿದ್ದರು. ಈ ವಿಷಯದಲ್ಲಿ 877 ಮಹಿಳೆಯರು ಸೇರಿದಂತೆ 1,274 ಅಭ್ಯರ್ಥಿಗಳು ಪದವಿ ಸ್ವೀಕರಿಸಿದರು. ಅಂತೆಯೇ ಇಂಗ್ಲಿಷ್‌ನಲ್ಲಿ 138 ಪುರುಷರು, 285 ಮಹಿಳೆಯರು ಸೇರಿದಂತೆ 423, ಹಿಂದಿ ವಿಷಯದಲ್ಲಿ 22 ಪುರುಷರು, 89 ಮಹಿಳೆಯರು ಸೇರಿದಂತೆ 111, ಸಂಸ್ಕೃತ ಭಾಷೆಯಲ್ಲಿ 32 ಪುರುಷರು, 42 ಮಹಿಳೆಯರು ಸೇರಿದಂತೆ 74 ಮತ್ತು ಉರ್ದು ವಿಷಯದಲ್ಲಿ ಇಬ್ಬರು ಪುರುಷರು, 10 ಮಹಿಳೆಯರು ಸೇರಿದಂತೆ 12 ಅಭ್ಯರ್ಥಿಗಳು ಸ್ನಾತಕೋತ್ತರ ಪದವಿ ಪಡೆದರು. ಸ್ನಾತಕ ಪದವಿ ವಿಭಾಗದಲ್ಲಿ 598 ಮಹಿಳೆಯರು ಸೇರಿದಂತೆ 961 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಪತ್ರಿಕೋದ್ಯಮ, ಸಾರ್ವಜನಿಕ ಆಡಳಿತ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಒಳಗೊಂಡ ಸಮಾಜವಿಜ್ಞಾನ ವಿಷಯದಲ್ಲಿ 1286 ಪುರುಷರು, 1,490 ಮಹಿಳೆಯರು ಸೇರಿದಂತೆ 2,776 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ ಪ್ರದಾನ ವಿತರಿಸಲಾಯಿತು. ವಾಣಿಜ್ಯಶಾಸ್ತ್ರ ವಿಷಯದಲ್ಲಿ 435 ಪುರುಷರು, 1,090 ಮಹಿಳೆಯರು ಸೇರಿದಂತೆ 1,525 ಅಭ್ಯರ್ಥಿಗಳಿಗೆ ಎಂ.ಕಾಂ. ಸ್ನಾತಕೋತ್ತರ ಪದವಿ, 17 ಪುರುಷರು, 40 ಮಹಿಳೆಯರು ಸೇರಿದಂತೆ 57 ವಿದ್ಯಾರ್ಥಿಗಳಿಗೆ ಬಿ.ಕಾಂ. ಸ್ನಾತಕ ಪದವಿಯನ್ನು ನೀಡಲಾಯಿತು.

86 ಪುರುಷರು, 66 ಮಹಿಳೆಯರು ಸೇರಿ 152 ಅಭ್ಯರ್ಥಿಗಳು ಎಂಬಿಎ ಪದವಿಗೆ ಭಾಜನರಾದರು. 241 ಮಹಿಳೆಯರು ಸೇರಿದಂತೆ 467 ಅಭ್ಯರ್ಥಿಗಳು ಬಿಎಡ್ ಪದವಿ ಪಡೆದುಕೊಂಡರೆ, ವಿಜ್ಞಾನ, ಗ್ರಂಥಾಲಯ, ಮಾಹಿತಿ ವಿಜ್ಞಾನ ವಿಷಯದಲ್ಲಿ 238 ಮಹಿಳೆಯರು ಸೇರಿದಂತೆ 506 ಅಭ್ಯರ್ಥಿಗಳಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪಡೆದರು. ಚಿನ್ನದ ಪದಕ, ನಗದು ಬಹುಮಾನ ಪಡೆದವರನ್ನು ಹೊರತುಪಡಿಸಿ ಉಳಿದ ಎಲ್ಲರಿಗೂ ಕಾರ್ಯಕ್ರಮದ ನಂತರ ಪದವಿ ಪ್ರಮಾಣ ಪತ್ರ ನೀಡಲಾಯಿತು.

ಎವಿಎಸ್ ಮೂರ್ತಿ, ಈ.ಎಸ್.ಚಕ್ರವರ್ತಿ, ಆನಂದ ಸಂಕೇಶ್ವರ್‌ಗೆ ಮುಕ್ತ ವಿವಿ ಗೌರವ ಡಾಕ್ಟರೇಟ್ ಪ್ರದಾನ



ಮೈಸೂರು,ಏ.25(ಎಂಟಿವೈ)– ಕೋವಿಡ್ ಸೇರಿದಂತೆ ಕೆಲ ಕಾರಣದಿಂದ ಮೂರು ವರ್ಷದ ಬಳಿಕ ನಡೆದ ಮುಕ್ತ ವಿವಿಯಲ್ಲಿ ಘಟಿಕೋತ್ಸವದಲ್ಲಿ ಮೂವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಮುಕ್ತ ಗಂಗೋತ್ರಿಯಲ್ಲಿನ ಘಟಿಕೋತ್ಸವ ಭವನದಲ್ಲಿ ನಡೆದ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು, ಆರ್‌ವಿ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎ.ವಿ.ಎಸ್.ಮೂರ್ತಿ, ಬೆಂಗಳೂರಿನ ಟಾಟಾ ಗ್ಲೋಬಲ್ ಸಂಪನ್ಮೂಲ ನಿರ್ವಹಣಾ ಸೇವಾ ಸಂಸ್ಥೆಯ ಉಪಾಧ್ಯಕ್ಷ ಈ.ಎಸ್.ಚಕ್ರವರ್ತಿ ಹಾಗೂ ವಿಆರ್‌ಎಲ್ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿ ಗೌರವಿಸಿದರು.

ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿದ ಬಳಿಕ ಎ.ವಿ.ಎಸ್.ಮೂರ್ತಿ ಹಾಗೂ ಈ.ಎಸ್. ಚಕ್ರವರ್ತಿ ಮಾತನಾಡಿ, ಮುಕ್ತ ವಿವಿ ವತಿಯಿಂದ ನೀಡಿರುವ ಗೌರವ ಡಾಕ್ಟರೇಟ್ ಪದವಿಯನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ. ಇದರಿಂದ ನಮ್ಮ ಜವಾಬ್ದಾರಿ ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸೇವಾ ಕಾರ್ಯ ಮಾಡಲು ಪ್ರೇರಣೆಯಾಗಿದೆ ಎಂದರು.

ಆನಂದ್ ಸಂಕೇಶ್ವರ ಮಾತನಾಡಿ, ನಾನು 14–15 ವಯಸ್ಸಿನಲ್ಲಿರುವಾಗಲೇ ನನ್ನ ತಂದೆಯೊಂದಿಗೆ ವೃತ್ತಿಯಲ್ಲಿ ಸಕ್ರಿಯನಾದೆ. ಶಾಲಾ–ಕಾಲೇಜಿನ ಕಲಿಕೆಯೊಂದಿಗೆ ಕಚೇರಿಯಲ್ಲೇ ಹೆಚ್ಚಿನ ಸಮಯ ಕಳೆದಿರುವೆ. ತನ್ನ ತಂದೆಯವರ ತರಬೇತಿಯು ನನಗೆ ಆರ್ಮಿ ಟ್ರೈನಿಂಗ್‌ನಂತೆ ಇತ್ತು. ಅಲ್ಲೇ ನನಗೆ ಶಿಸ್ತು ಕಲಿಸಿಕೊಟ್ಟರು. ನನ್ನ ಎಲ್ಲ ಸಾಧನೆಗೆ ಅವರೇ ಕಾರಣಕರ್ತರು ಎಂದರು.

ಮಾನವ ಬಂಡವಾಳ ಅಭಿವೃದ್ಧಿಗೆ ದೂರ ಶಿಕ್ಷಣ ಸಹಕಾರಿ





ಮೈಸೂರು,ಏ.25(ಎಂಟಿವೈ)– ಮುಕ್ತ ಹಾಗೂ ದೂರ ಶಿಕ್ಷಣವು ಮಾನವ ಬಂಡವಾಳ ಅಭಿವೃದ್ಧಿಗೆ ಸಹಕಾರಿಯಾಗಿದ್ದು, ವಿವಿಧ ವಯೋಮಾನದವರು ದೂರ ಶಿಕ್ಷಣದ ಪ್ರಯೋಜನ ಪಡೆದುಕೊಳ್ಳುತ್ತಿರುವುದು ಶ್ಲಾಘನೀಯ ಎಂದು ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಇಲಾಖೆಯ ನಿರ್ದೇಶಕ ಎ.ಬಿ. ಬಸವರಾಜು ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 17ನೇ ಘಟಿಕೋತ್ಸವದಲ್ಲಿ ಪ್ರಧಾನ ಭಾಷಣ ಮಾಡಿದ ಅವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿಕೊಂಡು ಸಾಗುತ್ತಿದೆ. ರಾಜ್ಯವು ಶಿಕ್ಷಣ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚು ಪ್ರಸಿದ್ಧಿ ಪಡೆದಿದೆ. ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಪಠ್ಯಕ್ರಮವು ಹೆಚ್ಚು ಕ್ರಿಯಾತ್ಮಕವಾಗಿದ್ದು, ಇನ್ನಷ್ಟು ಉದ್ಯಮ ಕೇಂದ್ರಿತವಾಗಬೇಕಾಗಿದೆ. ಉನ್ನತ ಶಿಕ್ಷಣವನ್ನು ಹೆಚ್ಚು ಸ್ಪರ್ಧಾತ್ಮಕವಾಗಿಸುವ ನಿಟ್ಟಿನಲ್ಲಿ ಶೈಕ್ಷಣಿಕ, ಉದ್ಯಮ ಮತ್ತು ಸಂಶೋಧನೆಗಳ ನಡುವೆ ಬಲವಾದ ಆಂತರಿಕ ಸಂಬಂಧ ಇರಬೇಕು. ಈ ನಿಟ್ಟಿನಲ್ಲಿ ಹೊಸ ಶಿಕ್ಷಣ ನೀತಿ– 2020 ನಮ್ಮ ದೇಶವನ್ನು ಎತ್ತರಕ್ಕೆ ಕೊಂಡೊಯ್ಯಲಿದೆ ಎಂದರು.

ಶಾಲಾ–ಕಾಲೇಜು ಹಂತದಲ್ಲೇ ಸಂಶೋಧನೆಗೆ ಒತ್ತು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಸಂಶೋಧನೆ, ಅಭಿವೃದ್ಧಿ ಹಾಗೂ ಅನ್ವೇಷಣೆಗೆ ಸಂಬಂಧಿಸಿದ ನೂತನ ನೀತಿ ರೂಪಿಸಲು ಮುಂದಾಗಿದೆ. ಹೊಸ ತಂತ್ರಜ್ಞಾನಗಳ ಅಭಿವೃದ್ಧಿಯಲ್ಲಿ ಸಂಶೋಧನೆಯ ಪಾತ್ರ ಬಲು ಮುಖ್ಯವಾದುದು. ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಹೊಸ ನೀತಿಗಳನ್ನು ಜಾರಿಗೊಳಿಸುವ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಸುಧಾರಣೆಗೆ ಮಹತ್ವ ನೀಡಿದೆ ಎಂದು ತಿಳಿಸಿದರು.

ಗುಣಮಟ್ಟ ಹೆಚ್ಚಿಸಬೇಕು: 'ಕ್ಯುಎಸ್ ವಿಶ್ವ ಯೂನಿವರ್ಸಿಟಿ ರ್‍ಯಾಂಕಿಂಗ್–2022'ರ ಪಟ್ಟಿಯಲ್ಲಿ ವಿಶ್ವದ ಅಗ್ರ 200 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಮೂರು ಶಿಕ್ಷಣ ಸಂಸ್ಥೆಗಳು ಮಾತ್ರ ಸ್ಥಾನ ಪಡೆದುಕೊಂಡಿವೆ. ಭಾರತದ ವಿ.ವಿಗಳು ರ್‍ಯಾಂಕಿಂಗ್‌ನಲ್ಲಿ ಮೇಲಿನ ಸ್ಥಾನ ಪಡೆಯಬೇಕಾದರೆ, ಶಿಕ್ಷಣದ ಗುಣಮಟ್ಟವನ್ನು ಇನ್ನಷ್ಟು ಹೆಚ್ಚಿಸಬೇಕು. ಉನ್ನತ ಶಿಕ್ಷಣವನ್ನು ಸ್ಪರ್ಧಾತ್ಮಕವಾಗಿಸಲು ಶಿಕ್ಷಣ, ಕೈಗಾರಿಕೆ ಮತ್ತು ಸಂಶೋಧನಾ ಕ್ಷೇತ್ರಗಳನ್ನು ಪರಸ್ಪರ ಜೋಡಿಸುವುದು ಅಗತ್ಯ. ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅದಕ್ಕೆ ಪೂರಕವಾಗಿ ಕೆಲಸ ಮಾಡುತ್ತದೆ. ಹೊಸ ನೀತಿಯ ಸಮರ್ಪಕ ಅನುಷ್ಠಾನವು ದೇಶದ ಶಿಕ್ಷಣ ವ್ಯವಸ್ಥೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

2035ರ ವೇಳೆಗೆ ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಅನುಪಾತವನ್ನು (ಜಿಇಆರ್) ಶೇ.50 ಕ್ಕೆ ಹೆಚ್ಚಿಸುವ ಗುರಿಯನ್ನು ಎನ್‌ಇಪಿ ನೀಡಿದೆ. ಉನ್ನತ ಶಿಕ್ಷಣದಲ್ಲಿ ಜಿಇಆರ್ ಪ್ರಮಾಣ ದೇಶದಲ್ಲಿ ಪ್ರಸ್ತುತ ಶೇ.27ರಷ್ಟಿದೆ. ಕರ್ನಾಟಕದಲ್ಲಿ ಈ ಪ್ರಮಾಣ ಶೇ.32ರಷ್ಟಿದೆ. ಎನ್‌ಇಪಿ ನೀಡಿದ ಗುರಿ ಈಡೇರಿಸಲು ಗಂಭೀರ ಪ್ರಯತ್ನ ಮಾಡಬೇಕಾಗಿದೆ. ವಿವಿಧ ಕಾರಣಗಳಿಂದ ಸಾಂಪ್ರದಾಯಿಕ ವಿವಿಗಳಲ್ಲಿ ಶಿಕ್ಷಣ ಪಡೆಯಲು ಆಗದವರಿಗೆ ಕೆಎಸ್‌ಒಯು ಅವಕಾಶದ ಬಾಗಿಲು ತೆರೆದಿದೆ. ಮುಕ್ತ ಹಾಗೂ ದೂರ ಶಿಕ್ಷಣದ ಮೂಲಕ ಜ್ಞಾನದ ಬೆಳಕು ಹರಡಿದೆ. ದೇಶದಾದ್ಯಂದ 20 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಕೆಎಸ್‌ಒಯುವಿನಿಂದ ಪದವಿ, ಸ್ನಾತಕೋತ್ತರ ಪದವಿ ಪಡೆದಿದ್ದಾರೆ ಎಂದು ವಿವರಿಸಿದರು.

ಇಳಿ ವಯಸ್ಸಿನಲ್ಲಿ ಪದವಿ ಪಡೆದ ಶ್ರೀನಿವಾಸ್‌ಮೂರ್ತಿ, ಶ್ರೀಧರ್ ಸಂಭ್ರಮ

ಮೈಸೂರು,ಏ.25(ಎಂಟಿವೈ)– ಮುಕ್ತ ವಿಶ್ವವಿದ್ಯಾನಿಲಯದ 17ನೇ ಘಟಿಕೋತ್ಸವದಲ್ಲಿ 8,338 ಮಂದಿ ವಿವಿಧ ವಿಷಯಗಳಲ್ಲಿ ಪದವಿ ಸ್ವೀಕರಿಸಿದರೂ ಇಬ್ಬರು ಮಾತ್ರ ಎಲ್ಲರೂ ಗಮನ ಸೆಳೆದರು. ಕಲಿಕೆಯಲ್ಲಿ ನಿರಾಸಕ್ತಿ ಪ್ರದರ್ಶಿಸುವ ಯುವ ಜನರು ನಾಚುವಂತೆ ಹಿರಿಯ ನಾಗರಿಕರು ತಮಗಿರುವ ಓದುವ ಆಸಕ್ತಿಯನ್ನು ಪ್ರದರ್ಶಿಸಿ ಗಮನ ಸೆಳೆದರು.

ಘಟಿಕೋತ್ಸವದ ಕಾರ್ಯಕ್ರಮದಲ್ಲಿ ಬೆಂಗಳೂರಿನ 81 ವರ್ಷದ ಶ್ರೀನಿವಾಸ ಮೂರ್ತಿ, ಮೈಸೂರಿನ 75 ವರ್ಷದ ಎನ್.ಶ್ರೀಧರ್ ಸ್ನಾತಕಕೋತ್ತರ ಪದವಿ ಪಡೆದು ಇಳಿವಯಸ್ಸಿನಲ್ಲಿ ಸಾಧನೆ ಮಾಡಿದವರಾಗಿದ್ದಾರೆ. ಶ್ರೀನಿವಾಸ ಮೂರ್ತಿ ಮಾತೃಭಾಷೆ ಕನ್ನಡದಲ್ಲಿ ಹಾಗೂ ಎನ್.ಶ್ರೀಧರ್ ಅವರು ಸಂಸ್ಕೃತ ವಿಷಯದಲ್ಲಿ ಸ್ನಾತಕ ಪದವಿಗೆ ಭಾಜನರಾಗಿದ್ದಾರೆ. ಇಬ್ಬರು ರಾಜ್ಯಪಾಲರಿಂದ ವಿಶೇಷ ನಗದು ಪ್ರಶಸ್ತಿ ಪುರಸ್ಕಾರ ಸ್ವೀಕರಿಸಿದಾಗ ನೆರೆದಿದ್ದ ಸಭಿಕರು ಚಪ್ಪಾಳೆ ತಟ್ಟುವ ಮೂಲಕ ಹಿರಿಯ ಜೀವಗಳಿಗೆ ಗೌರವ ಸಮರ್ಪಿಸಿದರು.

ಶ್ರೀನಿವಾಸಮೂರ್ತಿ: ಮೂಲತಃ ದಾವಣಗೆರೆ ಜಿಲ್ಲೆಯವರಾದ ಶ್ರೀನಿವಾಸ ಮೂರ್ತಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 2019–20ನೇ ಸಾಲಿನಲ್ಲಿ ಬೆಂಗಳೂರು ಪ್ರಾದೇಶಿಕ ಕೇಂದ್ರದಲ್ಲಿ ಪ್ರವೇಶ ಪಡೆದರು. ಶೇ. 67 ಅಂಕಗಳನ್ನು ಪಡೆದು ತೇರ್ಗಡೆಯಾಗಿದ್ದಾರೆ. ಕವಿ ಹೆಚ್.ಎಸ್. ವೆಂಕಟೇಶ್‌ಮೂರ್ತಿ ಅವರ ಸೋದರ ಸಂಬಂಧಿಯಾದ ಶ್ರೀನಿವಾಸಮೂರ್ತಿ ನಿವೃತ್ತ ಇಂಜಿನಿಯರ್. 2016–17ರಲ್ಲಿ ಸಂಸ್ಕೃತ ಅಭ್ಯಾಸಕ್ಕೆ ಸೇರಿದರು. ಅದನ್ನು ಬದಲಿಸಿ ಕನ್ನಡ ಆಯ್ದುಕೊಂಡರು. ಪರಾಮರ್ಶನ ಗ್ರಂಥ ಓದಿ ನೋಟ್ ಮಾಡಿಕೊಳ್ಳುತ್ತಿದ್ದೆ. 8 ಗಂಟೆ ಅಧ್ಯಯನ ಮಾಡುತ್ತಿದ್ದೆ. ಬರೆಯೋದು ಕಷ್ಟವಾಗುತ್ತಿತ್ತು. ಅಭ್ಯಾಸ ಮಾಡಿದೆ. ತೀ.ನಂ.ಶ್ರೀಕಂಠಯ್ಯ ಅವರ ಭಾರತೀಯ ಕಾವ್ಯ ಮೀಮಾಂಸೆ ಪ್ರಿಯವಾದ ಪಠ್ಯ ನಿಯಮಿತವಾಗಿ ಅಭ್ಯಾಸ ಮಾಡಿ ಪರೀಕ್ಷೆ ಬರೆದೆ ಎಂದು ತಿಳಿಸಿದರು.

ಎನ್.ಶ್ರೀಧರ್: 75 ವರ್ಷ ವಯಸ್ಸಿನ ಎನ್.ಶ್ರೀಧರ್ ಅವರು ಮೈಸೂರಿನ ಹೆಬ್ಬಾಳು 2ನೇ ಹಂತದ ನಿವಾಸಿ. ಎನ್‌ಐಇ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವೀಧರರು. ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದಲ್ಲಿ ಮುಖ್ಯ ಅಭಿಯಂತರರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. 2019–20ನೇ ಸಾಲಿನಲ್ಲಿ ಮೈಸೂರು ಕೇಂದ್ರದಲ್ಲಿ ಸಂಸ್ಕೃತ ಎಂಎಗೆ ಸೇರಿದರು. ಶೇ.72 ಅಂಕಗಳೊಂದಿಗೆ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಸಂಸ್ಕೃತಿ, ಪರಂಪರೆಯ ಬಗ್ಗೆ ನಿಖರವಾಗಿ ತಿಳಿಯಬೇಕೆಂಬ ದಿಸೆಯಲ್ಲಿ ಸಂಸ್ಕೃತ ವಿಷಯ ಆಯ್ಕೆ ಮಾಡಿಕೊಂಡೆ. ಸಾಕಷ್ಟು ವಿಷಯಗಳನ್ನು ತಿಳಿದಿದ್ದೇನೆ. ವೇದ, ಉಪನಿಷತ್ತು, ಭಾರತದ ಸಂಸ್ಕೃತಿ ತಿಳಿಯಲು ಸಂಸ್ಕೃತ ಅವಶ್ಯ. ಶಾಲಾ–ಕಾಲೇಜುಗಳಲ್ಲಿ ಸಂಸ್ಕೃತ ಕಲಿಕೆಗೆ ಉತ್ತೇಜನ ಕೊಡಬೇಕು. ಯುವಕರು ಸಂಸ್ಕೃತಿ ಬಗ್ಗೆ ತಿಳಿಯುವ ಕುತೂಹಲಿಗಳಾಗಬೇಕು ಎಂದರು.



ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದ ಎನ್.ಶ್ರೀಧರ್



ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದ ಶ್ರೀನಿವಾಸ್‌ಮೂರ್ತಿ

ಉದ್ಯೋಗಿಗಳಿಗೆ ಉನ್ನತ ಶಿಕ್ಷಣ ಪಡೆಯಲು ಕೆಎಸ್‌ಒಯು ಸಹಕಾರ



ನಾನು ಬೆಂಗಳೂರಿನ ಬಿಇಎಲ್‌ನಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ಕನ್ನಡದ ಮೇಲಿನ ಪ್ರೀತಿಯಿಂದಾಗಿ ಕನ್ನಡದಲ್ಲಿ ಸ್ನಾತಕ್ಕೋತರ ಪದವಿ ಪಡೆಯಬೇಕೆಂಬ ಹಂಬಲ ಇತ್ತು. ಅದಕ್ಕೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಉತ್ತಮ ವೇದಿಕೆ ಕಲ್ಪಿಸಿದೆ. ಕೋವಿಡ್ ಸಂದರ್ಭದಲ್ಲೂ ಆನ್‌ಲೈನ್ ಮೂಲಕ ತರಗತಿ ನಡೆಸಿ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಸಹಕಾರ ನೀಡಿದರೆ. ದೂರ ಶಿಕ್ಷಣದ ಮೂಲಕ ಮುಕ್ತ ವಿವಿ ಔದ್ಯೋಗಿಕ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಪಡೆಯಲು ಕೆಎಸ್‌ಒಯು ನೆರವಾಗಿದೆ.

- ಟಿ.ಸಿ.ಗೀತಾ, ಸ್ನಾತಕೋತ್ತರ ಪದವಿ ಪಡೆದ ಎಂಜಿನಿಯರ್

ವಿದ್ಯಾರ್ಥಿಗಳು ಶೈಕ್ಷಣಿಕ ವಿಕಾಸಕ್ಕೆ ಪ್ರಯತ್ನಿಸಬೇಕು

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸಲಹೆ

ಮೈಸೂರು,ಏ.25(ಎಂಟಿವೈ)– ಯುವ ಜನರು ಹಾಗೂ ವಿದ್ಯಾರ್ಥಿಗಳು ಆಧುನಿಕ ಜ್ಞಾನದೊಂದಿಗೆ ನೈತಿಕ ಮೌಲ್ಯ ಬೆಳೆಸಿಕೊಂಡು ಶೈಕ್ಷಣಿಕ ವಿಕಾಸಕ್ಕೆ ಪ್ರಯತ್ನಿಸಿ ಜಗತ್ತಿಗೆ ಹೊಸ ದಿಕ್ಕು ತೋರಿಸಲು ಮುಂದಾಗಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸಲಹೆ ನೀಡಿದ್ದಾರೆ.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 17ನೇ ಘಟಿಕೋತ್ಸವದಲ್ಲಿ ವಿವಿಧ ವಿಷಯಗಳಲ್ಲಿ ಪದವಿ ಹಾಗೂ ಸ್ನಾತಕ್ಕೋತ್ತರ ಪದವಿ ಪಡೆದವರಿಗೆ ಪದವಿ ಹಾಗೂ ಪದಕ ಪ್ರದಾನ ಮಾಡಿ ಮಾತನಾಡಿದ ಅವರು, ಭಾರತವನ್ನು ಇನ್ನಷ್ಟು ಪ್ರಗತಿಶೀಲ ಮತ್ತು ಶ್ರೇಷ್ಠ ರಾಷ್ಟ್ರವಾಗಿಸಲು ಪಣ ತೊಡಬೇಕಾಗಿದೆ. ಈಗಾಗಲೇ ಕೇಂದ್ರ ಸರ್ಕಾರ ಸ್ವಾವಲಂಬನೆಯ ಜೀವನ ನಡೆಸುವುದಕ್ಕೆ ಜನರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಆತ್ಮನಿರ್ಬರ ಭಾರತ ಯೋಜನೆ ಅನುಷ್ಠಾನಗೊಳಿಸಿದೆ. ಈ ಯೋಜನೆಯ ಸದುಪಯೋಗ ಪಡೆದುಕೊಳ್ಳುವತ್ತ ಜನರು ಗಮನ ಹರಿಸಬೇಕು. ಈ ಕಾರ್ಯಸಾಧನೆಗೆ ಯುವ ಜನರು, ವಿದ್ಯಾರ್ಥಿಗಳ ಶ್ರಮಿಸಬೇಕು. ಭಾರತವನ್ನು ಹೊಸ ರೂಪದಲ್ಲಿ ನೋಡಲು ದೇಶದ ಜನರು ಬಯಸುತ್ತಿದ್ದು, ಅದಕ್ಕಾಗಿ ಕೇಂದ್ರ ಸರ್ಕಾರವು ಪ್ರತಿಯೊಂದು ಕ್ಷೇತ್ರದಲ್ಲೂ ವಿಭಿನ್ನ ಕಾರ್ಯಯೋಜನೆ ಜಾರಿಗೊಳಿಸುತ್ತಿದೆ. ಇದಕ್ಕೆ ಕೈಜೋಡಿಸುವ ಮೂಲಕ ಯುವಜನರು, ಪ್ರತಿಯೊಬ್ಬರ ಪ್ರಜೆಗಳು ಹೊಸ ರಾಷ್ಟ್ರವನ್ನು ಕಟ್ಟುವಲ್ಲಿ ಸಹಕರಿಸಬೇಕು. ಪ್ರಗತಿಶೀಲ ರಾಷ್ಟ್ರ ನಿರ್ಮಾಣ ನಮ್ಮ ಪೂರ್ವಜರ ಬಹುದಿನ ಕನಸು. ಇದನ್ನು ಸಾಕಾರಗೊಳಿಸಬೇಕು. ಅದಕ್ಕಾಗಿ ಮುಂದಿನ ಪೀಳಿಗೆ ಕಾರ್ಯಸಾಧನೆ ಮಾಡಬೇಕು ಎಂದರು.



ಪ್ರತಿಯೊಬ್ಬರಿಗೂ ಮತ್ತು ಪ್ರತಿಯೊಂದು ಕಡೆಗೂ ಉನ್ನತ ಶಿಕ್ಷಣ ಸುಲಭವಾಗಿ ದೊರೆಯಬೇಕು. ಈ ಆಶಯದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಮುಕ್ತ ವಿಶ್ವವಿದ್ಯಾಲಯದ ಪ್ರಗತಿ ಪ್ರಶಂಸನೀಯ. ಬೆಳ್ಳಿಹಬ್ಬ ಆಚರಿಸಿಕೊಳ್ಳುತ್ತಿರುವ ವಿವಿಯು ಇನ್ನಷ್ಟು ಸಾಧನೆ ಮಾಡಲಿ. ಇದಕ್ಕಾಗಿ ಕಠಿಣ ಪರಿಶ್ರಮವನ್ನು ಹಾಕಿ ಗುರಿಮುಟ್ಟಬೇಕು. ಇಂದು ಮೂವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗಿದೆ. ಸಮಾಜಕ್ಕೆ ಅವರ ಸೇವೆ ಇನ್ನಷ್ಟು ಆಗಬೇಕು. ಆ ಮೂಲಕ ಮತ್ತಷ್ಟು ಪುರಸ್ಕಾರಕ್ಕೆ ಭಾಜನರಾಗುತ್ತೀರಿ ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಶಾಸಕ ಎಲ್. ನಾಗೇಂದ್ರ, ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್, ಕುಲಸಚಿವ ಡಾ. ಕೆ.ಬಿ.ಪ್ರವೀಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕ ಎ.ವಿ.ಬಸವರಾಜು, ಕುಲಸಚಿವರಾದ ಡಾ. ಆರ್. ರಾಜಣ್ಣ, ಡಾ. ಕಾಂಬ್ಳೆ ಅಶೋಕ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಹಿಳೆ ಉದ್ಯಮಿಯಾಗಲು ಕುಟುಂಬದ ಸಹಕಾರ ಅಗತ್ಯ

ಯಶಸ್ವಿ ಯುವ ಉದ್ಯಮಿಗಳ ಅಭಿಮತ



ಮೈಸೂರು, ಏ.25(ಎಂಕೆ)– ನಗರದ ವಿವಿ ಮೊಹಲ್ಲಾದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಲಘು ಉದ್ಯೋಗ್ ಭಾರತಿ, ಮೈಸೂರು ವಿಭಾಗ್ ವತಿಯಿಂದ ಆಯೋಜಿಸಿದ್ದ '28ನೇ ಸಂಸ್ಥಾಪನ ದಿನ' ಆಚರಣೆಯಲ್ಲಿ ಯುವ ಮಹಿಳಾ ಉದ್ಯಮಿಗಳಾದ ಮಹಿಮಾ ಹೆಗಡೆ, ಮೋಕ್ಷ ಶರ್ಮಾ ಹಾಗೂ ಶೋಮಿಕಾ ಎಸ್.ರಾವ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರು ಡಿಆರ್‌ಸಿ ಸಿನಿಮಾಸ್ ವ್ಯವಸ್ಥಾಪಕ ಪಾಲುದಾರರಾದ ವೈಶಾಲಿ ಹನುಮಂತ್ ಮಾತನಾಡಿ, ಮಹಿಳೆಯರು ಯಶಸ್ವಿ ಉದ್ಯಮಿಗಳಾಗಲೂ ಕುಟುಂಬದ ಸಹಕಾರ ಅತ್ಯಂತ ಮುಖ್ಯವಾಗಿದೆ ಸಾಧಕರಾಗಬೇಕಾದರೆ ಕಷ್ಟದಲ್ಲಿ ಸಹಾಯ ಮಾಡಿದವರಿಗೆ ಋಣಿಯಾಗಿರಬೇಕು. ಗೆಲ್ಲುವ ಆತ್ಮವಿಶ್ವಾಸದ ಜೊತೆಗೆ ತಮ್ಮೊಂದಿಗೆ ಇರುವವರನ್ನು ಚೆನ್ನಾಗಿ ನೋಡಿಕೊಳ್ಳುವ ಮನೋಭಾವನೆ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಉದ್ಯಮಿಗಳಾಗಲು ಜೀವನ ಶೈಲಿ, ರೂಢಿಸಿಕೊಳ್ಳಬೇಕಾದ ಆದರ್ಶಗಳು ಬಹಳ ಮುಖ್ಯ. ಹಾಗೆಯೇ ಪ್ರತಿಯೊಬ್ಬರು ಪರಿಸರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಮೈಸೂರಿನಲ್ಲಿ ದಿನದಿಂದ ದಿನಕ್ಕೆ ಧೂಳು, ಬಿಸಿಲು ಹೆಚ್ಚಾಗುತ್ತಿದೆ. ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ಸಾಧ್ಯವಾದಷ್ಟು ಪ್ರಯತ್ನಿಸಬೇಕು ಎಂದು ಹೇಳಿದರು.

ಲಘು ಉದ್ಯೋಗ್ ಭಾರತಿ ಮೈಸೂರು ವಿಭಾಗ್ ಕಾರ್ಯದರ್ಶಿ ಕೆ.ಎಂ.ರಾಜಪ್ಪ, ಮೈಸೂರು, ಮಂಡ್ಯ, ಕೊಡಗು ಹಾಗೂ ಚಾ.ನಗರವನ್ನೊಳಗೊಂಡ ಮೈಸೂರು ವಿಭಾಗ್ ಕಾರ್ಯಚಟುವಟಿಕೆ, ಸಣ್ಣ ಉದ್ಯಮಗಳ ಬೆಳವಣಿಗೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಲಘು ಉದ್ಯೋಗ್ ಭಾರತಿ ಮೈಸೂರು ವಿಭಾಗ್ ಅಧ್ಯಕ್ಷ ಡಾ.ಎಂ.ಮಹೇಶ್ ಶೆಣೈ, ಉಪಾಧ್ಯಕ್ಷ ಪ್ರಶಾಂತ್ ಮತ್ತಿತರರು ಉಪಸ್ಥಿತರಿದ್ದರು.

ಕ್ರೈಸ್ತ ರಾಯಭಾರಿ ಡಾ.ಲಿಯೋಪೋಲ್ಡ್ ಗಿರೆಲಿ ಅವರಿಗೆ ಭವ್ಯ ಸ್ವಾಗತ

ಮೈಸೂರು, ಏ.25(ಎಂಕೆ)– ಮೈಸೂರಿನ ಸೆಂಟ್ ಫಿಲೋಮಿನಾ ಚರ್ಚ್‌ಗೆ ಸೋಮವಾರ ಭೇಟಿ ನೀಡಿದ ಕಥೋಲಿಕ್ ಕ್ರೈಸ್ತರ ಧರ್ಮ ಗುರುಗಳೂ ಆದ ಭಾರತ–ನೇಪಾಳ ರಾಯಭಾರಿ ಡಾ.ಲಿಯೋಪೋಲ್ಡ್ ಗಿರೆಲಿ ಅವರಿಗೆ ಮೈಸೂರು ಧರ್ಮಕ್ಷೇತ್ರದಿಂದ ಭವ್ಯ ಸ್ವಾಗತ ಕೋರಿ, ಅತ್ಮೀಯವಾಗಿ ಅಭಿನಂದಿಸಲಾಯಿತು.

ಈ ವೇಳೆ ಆಯೋಜಿಸಿದ್ದ ಪ್ರಾರ್ಥನಾ ಕೂಟದಲ್ಲಿ ಭಾಗವಹಿಸಿದ ಅವರು, ಯೇಸುವಿಗೆ ನಮಿಸಿ ಎಲ್ಲರ ಒಳಿತಿಗಾಗಿ ಪ್ರಾರ್ಥಿಸಿದರು. ಬಳಿಕ ಮೈಸೂರು ಬಿಷಪ್ ಡಾ.ಕೆ.ಎ.ವಿಲಿಯಂ, ವಿಶ್ರಾಂತ ಬಿಷಪ್ ಥಾಮಸ್ ಆಂಟೋನಿ ವಾಳಪಳಿ, ಮಂಡ್ಯ ಬಿಷಪ್ ಸೆಬಾಸ್ಟಿಯನ್, ಧರ್ಮ ಗುರುಗಳಾದ ಆಲ್ಫ್ರೆಡ್ ಜಾನ್ ಮೆಂಡೋ, ಡೋಮಿನಿಕ್ ವಾಸ್ ಹಾಗೂ ವಿವಿಧ ಸಮುದಾಯದ ಸಂಘಟನೆಗಳಿಂದ ಸನ್ಮಾನಿಸಿ, ಅಭಿನಂದಿಸಲಾಯಿತು.



ನಂತರ ಮಾತನಾಡಿದ ಅವರು, ಕರ್ನಾಟಕದಲ್ಲಿ ಮೈಸೂರು ಅತ್ಯಂತ ಪ್ರಾಚೀನ ಧರ್ಮಕ್ಷೇತ್ರವಾಗಿದ್ದು, ಏಷ್ಯಾದಲ್ಲಿಯೇ ಅತ್ಯಂತ ಎತ್ತರವಾದ ಚರ್ಚ್ ಇದಾಗಿದೆ. ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಹಾಗೂ ಇನ್ನಿತರೆ ಸಮಾಜ ಕಾರ್ಯಗಳ ಮೂಲಕ ಕ್ರೈಸ್ತ ಸಮುದಾಯ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿದೆ ಎಂದರು.

ಮೈಸೂರು ಕರ್ನಾಟಕದಲ್ಲಿಯೇ ಹಲವಾರು ವಸ್ತುಗಳಿಗೆ ಪ್ರಸಿದ್ಧಿಯನ್ನು ಪಡೆದಿದೆ. ಮೈಸೂರು ಸಿಲ್ಕ್, ಮೈಸೂರು ಪಾಕ್, ಮೈಸೂರು ಸ್ಯಾಂಡಲ್ ಸೋಪ್‌ಗಳಷ್ಟೇ ಅಲ್ಲದೆ ಮೈಸೂರು ದಸರಾ ವಿಶ್ವ ಪ್ರಸಿದ್ಧವಾಗಿದೆ. ದೇಶದ ಅಭಿವೃದ್ಧಿಗಾಗಿ ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನದೆ ಛಾಪು ಮೂಡಿಸಿದೆ. ಮೈಸೂರು ಕೊಡುಗೆ ಬಗ್ಗೆ ನನಗೆ ಅಪಾರ ಗೌರವಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಸ್ತುತ ದೇಶದಲ್ಲಿ ಹಲವಾರು ಬದಲಾವಣೆಗಳು ಆಗುತ್ತಿವೆ. ಕ್ರೈಸ್ತ ಸಮುದಾಯದವರು ಸನ್ನಿವೇಶವನ್ನು ಅರಿತು ಬದುಕಬೇಕಾಗಿದೆ. ದೇವರು ಪ್ರತಿಯೊಬ್ಬರ ಜೊತೆಗೆ ಇರಲಿದ್ದು, ಪ್ರತಿನಿತ್ಯ ಪ್ರಾರ್ಥನೆ ಸಲ್ಲಿಸಬೇಕು. ಪರಸ್ಪರ ಹೊಂದಾಣಿಕೆ ಹಾಗೂ ಒಗ್ಗಟ್ಟಿನಿಂದ ಜೀವನ ಸಾಗಿಸಬೇಕು ಎಂದು ಸಲಹೆ ನೀಡಿದರು.

ವ್ಯಕ್ತಿ ನಾಪತ್ತೆ



ಮೈಸೂರು, ಏ.25– ಮನೆಯಿಂದ ಹೊರ ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಘಟನೆ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮೈಸೂರಿನ ಗಾಯತ್ರಿಪುರಂ 2ನೇ ಹಂತದ 8ನೇ ಕ್ರಾಸ್ ನಿವಾಸಿ ಸರದಾರ್ ಖಾನ್(40) ಕಾಣೆಯಾದವರು. ಏ.2ರಂದು ಮನೆಯಿಂದ ಹೊರಹೋದವರು ಇಲ್ಲಿಯವರೆಗೆ ವಾಪಸ್ ಆಗಿಲ್ಲ ಎಂದು ಸರದಾರ್ ಖಾನ್ ಪುತ್ರ ಸಿಕಂದರ್ ಉದಯಗಿರಿ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ದೂ.ಸಂ. 0821–2418309/2418513/2418339 ಸಂಪರ್ಕಿಸುವಂತೆ ಕೋರಲಾಗಿದೆ.

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ... ಆ ನಾಯಿ ನಿಮ್ಮನ್ನು ನೋಡಿದ ಕೂಡ್ಲೇ ಹಾಗೇಕೆ ಓಡಿ ಹೋಗ್ತಿದೆ..?
ಪತಿ : ನಿನ್ನೆ ನೀನು ಪಲಾವ್ ಮಾಡಿದ್ದೆಯಲ್ಲ..?
ಪತ್ನಿ : ಹೌದು... ಅದಕ್ಕೇನು..?
ಪತಿ : ಪಲಾವ್ ಅನ್ನು ಆ ನಾಯಿಗೆ ಹಾಕಿದ್ದೆ... ಅದಕ್ಕೆ...!!

ಮೈಸೂರು ಮಿತ್ರ

ಮಂಗಳವಾರ, 26 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಇಡೀ ಮಾನವಕೋಟಿಗೆ ಪ್ರೀತಿ ಅನುರೂಪ ತೋರಿಸುವುದೇ ನಿಜವಾದ ಧರ್ಮ – ಸ್ವಾಮಿ ವಿವೇಕಾನಂದರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಕುಂತಿರೋದಕ್ಕಿಂತ ಕೂಲಿ ಮಾಡುವುದೇ ಲೇಸು


ಸರಕಾರಿ ಶಾಲೆಗಳ ಕಥೆ–ವ್ಯಥೆ





ಸರಕಾರಿ ಶಾಲೆಗಳು ದಿನದಿಂದ ದಿನಕ್ಕೆ ಅವನತಿಯತ್ತ ಮುಖ ಮಾಡುತ್ತಿವೆ. ಶಾಲೆ ಉಳಿಸುವುದೇ ನಮ್ಮ ಗುರಿಯಾಗಿದೆ ಎಂದು ಶಿಕ್ಷಕರು ತಿಳಿಸುತ್ತಾರೆ. ಇಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವಿದ್ದರೂ ಖಾಸಗಿ ಶಾಲೆಗಳ ಹಾವಳಿಯಿಂದ ವಿದ್ಯಾರ್ಥಿಗಳಲ್ಲಿ ಕಲಿಕೆಗಿಂತಲೂ ಹೆಚ್ಚು ಪೈಪೋಟಿಯ ಮನೋಭಾವನೆ ಮೂಡುವಂತೆ ಮಾಡುತ್ತಿವೆ. ಹೀಗಾಗಿ ಸರಕಾರಿ ಶಾಲೆಗಳು ಮುಚ್ಚುವ ಪರಿಸ್ಥಿತಿ ಎದುರಾಗುತ್ತಿದೆ.

ಇದು ಒಂದು ಶಾಲೆಯ ಕಥೆಯಲ್ಲ, ಎಲ್ಲಾ ಸರಕಾರಿ ಶಾಲೆಗಳ ಕಥೆ ವ್ಯಥೆ. ಉದಾರಣೆಗೆ ಮೈಸೂರಿನ ಅಶೋಕಪುರಂ ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಹಿಂದೆ ನಂ.1 ಶಾಲೆಯಾಗಿತ್ತು ದಶಕಗಳ ಕಾಲ ಸಾವಿರಾರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದ ಶಾಲೆ, ಇಂದು ಕೇವಲ 17 ಮಕ್ಕಳ ಹಾಜರಾತಿ, ಈ ಸರಕಾರಿ ಶಾಲೆಯಲ್ಲಿ ಮೂಲ ಸೌಕರ್ಯಗಳು ಎಲ್ಲವೂ ಇದೆ. ಉತ್ತಮವಾದ ಶಾಲೆಯ ಕಟ್ಟಡ, ಕೊಠಡಿಗಳು, ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸುಂದರವಾದ ಬಯಲು ರಂಗ ಮಂದಿರ, ಆಟದ ಮೈದಾನ, ಮಕ್ಕಳು ಕುಳಿತುಕೊಳ್ಳಲು ಆಸನಗಳು, ಮಕ್ಕಳ ಕಲಿಕೆಗೆ ಕಂಪ್ಯೂಟರ್‌ಗಳು ಬಳಕೆಯಾಗದೇ ಧೂಳು ಹಿಡಿಯುತ್ತಿವೆ. ಮಕ್ಕಳಿಗೆ ಊಟ, ಬಟ್ಟೆ, ಪುಸ್ತಕ, ಶಾಲೆಯ ಶುಲ್ಕಗಳು ಉಚಿತ, ಇಷ್ಟೆಲ್ಲಾ ಅನುಕೂಲತೆ ಇದ್ದರೂ ಮಕ್ಕಳ ಹಾಜರಾತಿ ಸಂಖ್ಯೆ ಕೊರತೆಂರಾಗಿದೆ ಏಕೆ? ಇದಕ್ಕೆಲ್ಲ ಕಾರಣವೇನು? ಓದುವ ಮಕ್ಕಳಿಗೆ ಎಲ್ಲವೂ ಉಚಿತವಾಗಿ ಸಿಗುವುದರಿಂದಲೋ ಅಥವಾ ಅತೀ ಹೆಚ್ಚು ಖಾಸಗಿ ಶಾಲೆಗಳು ಅಣಬೆಯಂತೆ ತಲೆ ಎತ್ತಲು ಸರಕಾರ ಕಾರಣವೇ? ಅಥವಾ ರಾಜಕಿಯ ಧುರೀಣರು ತಮ್ಮ ಸ್ವಾರ್ಥಕ್ಕಾಗಿ ಖಾಸಗಿ ಶಾಲೆಗಳಿಗೆ ಅನುಮತಿ ನೀಡುತ್ತಿರುವುದರಿಂದಲೋ, ಅಥವಾ ಪೋಷಕರು ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಸೇರಿಸುತ್ತಿರುವುದರಿಂದಲೋ ತಿಳಿಯದಾಗಿದೆ.



ಇಲ್ಲಿ ಎಲ್ಲರ ಲೋಪ–ದೋಷಗಳೂ ಎದ್ದು ಕಾಣುತ್ತಿವೆ. ಸರಕಾರಿ ಶಾಲೆಗಳಲ್ಲಿ ಆಡಳಿತ ನಿರ್ವಹಣೆಯೂ ಸಮರ್ಪಕವಾಗಿರಬೇಕು. ಇನ್ನು ನಿರ್ವಹಿಸುತ್ತಿರುವ ಶಿಕ್ಷಕರಲ್ಲಿ ಹೆಚ್ಚಿನ ಅನುಭವಿಗಳಾಗಿರಬೇಕು, ತಿಳುವಳಿಕೆಯ ಸ್ಪಷ್ಟ ಕೊರತೆಯಿಂದಾಗಿಯೂ ಮತ್ತು ಹಿಂದಿನ ದೋಷಪೂರಿತ ಶೈಕ್ಷಣಿಕ ನೀತಿಯಿಂದಾಗಿಯೂ ಈ ಎಲ್ಲಾ ಸನ್ನಿವೇಶವೂ ಶಿಕ್ಷಣ ಗುಣಮಟ್ಟದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

ಮಕ್ಕಳ ಹಾಜರಾತಿ ಕಡಿಮೆ ಆಗುವುದರಿಂದ ಶಿಕ್ಷಕರು ತಮ್ಮ ಖಾಸಗಿ ಬದುಕನ್ನು ಉತ್ತಮಪಡಿಸಿಕೊಳ್ಳುವತ್ತ ಹೆಚ್ಚು ಗಮನ ನೀಡುತ್ತಾರೆ. ಸಂಕಟದ ಪರಿಸ್ಥಿತಿಯೇ ಆಗಿರುವುದರಿಂದ ಶಿಕ್ಷಕರನ್ನು ಯಾರೂ ದೂಷಿಸಲು ಸಾಧ್ಯವಿಲ್ಲ.

ಪೋಷಕರು ಖಾಸಗಿ ಶಾಲೆಗಳ ಮೊರೆ ಹೋಗುವುದನ್ನು ಮೊದಲು ತಪ್ಪಿಸಬೇಕೆಂದರೆ ಬ್ಲಾಕ್ ಸಂಪನ್ಮೂಲ ವ್ಯಕ್ತಿ, ಶಿಕ್ಷಣ ಸಂಯೋಜಕರು ಮತ್ತು ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಹಾಗೂ ಎಸ್.ಡಿ.ಎಂ.ಸಿಯವರ ಪಾತ್ರ ಬಹಳ ಮುಖ್ಯವಾಗುತ್ತದೆ. ಆದರೆ ಮಕ್ಕಳಿಗೆ ಆದರ್ಶ ಪರೀಕ್ಷೆ ಮಾಡುತ್ತಿದ್ದೇವೆ. ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರಿಗೆ ತಿಳಿಸಿದ್ದೇವೆ. ಪೋಷಕರ ಮನೆ–ಮನೆಗೆ ತೆರಳಿ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ಸೇರಿಸಲು ತಿಳುವಳಿಕೆ ನೀಡಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿ ರಾಮಾರಾಧ್ಯ ಅವರು ತಿಳಿಸುತ್ತಾರೆ.

ಖಾಸಗಿ ಶಾಲೆಗಳು ಈಗ ಅಪೂರ್ವ ರೀತಿಯಲ್ಲಿ ಬೆಳೆಯುತ್ತಿವೆ. ಕೆಲವು ವಿಶ್ಲೇಷಕರು ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಕುಸಿಯುತ್ತಿರುವ ಈ ಸಮಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತಿವೆ. ಇದಕ್ಕೆಲ್ಲ ಕಾರಣ ಶಾಲೆಯ ಶಿಕ್ಷಕರು, ಪೋಷಕರಿಗೆ ನಿಮ್ಮ ಮಗನ ಶೈಕ್ಷಣಿಕ ಗುಣಮಟ್ಟ ಸುಧಾರಣೆಯಾಗಬೇಕಿದೆ. ಅದಕ್ಕಾಗಿ ನೀವೇನಾದರೂ ಮಾಡಬೇಕು ಎಂದು ತಿಳಿಸುತ್ತಾರೆ. ಶಾಲಾ ಅವಧಿಯಲ್ಲಿ ಮಕ್ಕಳು ಪಠ್ಯ ವಿಷಯಗಳ ಹಿನ್ನಡೆಗೆ, ತಪ್ಪು ನಡವಳಿಕೆಗಳಿಗೆ ಶಿಕ್ಷಕರೇ ಜವಾಬ್ದಾರರಾಗುತ್ತಾರೆ. ಆದರೆ ಪೋಷಕರು ಶಿಕ್ಷಕರ ಮೇಲೆ ಆರೋಪಿಸುವಂತಿಲ್ಲ. ಶಿಕ್ಷಕರು ಇತ್ತೀಚೆಗೆ ಮಗುವಿನ ಕುರಿತು ಎಲ್ಲಾ ಜವಾಬ್ದಾರಿಯನ್ನು ಪೋಷಕರ ಮೇಲೆ ಹೊರಿಸುತ್ತಾರೆ. ಮಕ್ಕಳ ಓದು ಮತ್ತು ಬರವಣಿಗೆಯನ್ನು ಉತ್ತಮಗೊಳಿಸುವುದು ಶಿಕ್ಷಕರ ಜವಾಬ್ದಾರಿ. ಜೊತೆಗೆ ಪೋಷಕರದು ಸಮ ಪಾಲಾಗಿರಬೇಕು. ಪೋಷಕರ ಮನಸ್ಥಿತಿಯೂ ಬದಲಾಗಬೇಕು. ಆಗ ಮಾತ್ರ ಮಕ್ಕಳ ಶಿಕ್ಷಣದ ಗುಣಮಟ್ಟ ಸುಧಾರಿಸುತ್ತದೆ.

ಸರಕಾರ ಇತ್ತೀಚೆಗೆ ಸರಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಶಿಕ್ಷಣದ ವ್ಯವಸ್ಥೆ ಮಾಡಲಾಗುತ್ತಿದೆ. ಇಲ್ಲಿಯೂ ಕೂಡ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಸ್ವಲ್ಪ ಮಟ್ಟಿಗೆ ಪೋಷಕರು ಬದಲಾಗುತ್ತಿದ್ದಾರೆ. ಆದರೆ ಎಲ್ಲಾ ಯೋಜನೆಗಳನ್ನು ಸರಕಾರವೇ ಮಾಡಲು ಸಾಧ್ಯವಿಲ್ಲ. ಸರಕಾರಿ ಶಾಲೆಗಳು ಅಭಿವೃದ್ಧಿ ಹಾಗೂ ಹಾಜರಾತಿ ಹೆಚ್ಚಾಗಬೇಕಾದರೆ ಆಯಾಯ ಕ್ಷೇತ್ರದ ಎಸ್.ಡಿ.ಎಂ.ಸಿಯವರ ಪಾತ್ರ ತುಂಬಾ ಮುಖ್ಯವಾದದ್ದು ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳ ಅಭಿಪ್ರಾಯ.

ಮೇ 16 ರಿಂದ ಶಾಲೆಗಳು ಆರಂಭವಾಗುತ್ತವೆ. ಇನ್ನು ಮುಂದಾದರೂ ಸರಕಾರ ಹಾಗೂ ಶಿಕ್ಷಣ ಇಲಾಖೆ ಎಚ್ಚೆತ್ತುಕೊಂಡು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸರಕಾರಿ ಶಾಲೆಯ ಹಾಜರಾತಿ ಹೆಚ್ಚಾಗಬೇಕಾದರೆ ಶಿಕ್ಷಕರು, ಸಿ.ಆರ್.ಪಿ, ಬಿ.ಆರ್.ಪಿ. ಇ.ಸಿ.ಓ ಎಲ್ಲರೂ ಒಟ್ಟಿಗೆ ಸೇರಿ ಶಿಕ್ಷಣದ ಜಾಥಾ "ಮರಳಿ ಶಾಲೆಗೆ" ಮೆರವಣಿಗೆ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡರೆ ಮಾತ್ರ ಸರಕಾರಿ ಶಾಲೆಗಳು ಉಳಿಯುತ್ತವೆ. ಅದರಲ್ಲೂ ಅಶೋಕಪುರಂನ ಸರಕಾರಿ ಬಾಲಕಿಯರ ಪ್ರೌಢಶಾಲೆಯ ಹಾಜರಾತಿ ಹೆಚ್ಚಾಗಬಹುದೇನೋ ಕಾದು ನೋಡೋಣ.

–ಎಂ.ಆರ್.ಮಂಜುನಾಥ್

ನಿಮ್ಮ ಪತ್ರಗಳು

ಯುದ್ಧ ಕೊನೆಗೊಂಡು ಶಾಂತಿ ನೆಲೆಸಲಿ

ಮಾನ್ಯರೆ,

ಕಳೆದ ಎರಡು ತಿಂಗಳುಗಳ ಕಾಲದಿಂದಲೂ ನಡೆಯುತ್ತಿರುವ ರಷ್ಯಾ ಮತ್ತು ಉಕ್ರೇನ್ ನಡುವಿನ ಭೀಕರ ಯುದ್ಧ ಇಡೀ ವಿಶ್ವದ ಗಮನ ಸೆಳೆದಿದೆ. ಈ ಯುದ್ಧದಲ್ಲಿ ಉಕ್ರೇನ್ ಬಹುತೇಕ ಸರ್ವನಾಶಗೊಂಡಿದೆ.

ಸಾವಿರಾರು ಉಕ್ರೇನ್ ಪ್ರಜೆಗಳನ್ನು ನಿರ್ದಯೆಯಿಂದ ಅತ್ಯಂತ ಭೀಕರ ರೀತಿಯಲ್ಲಿ ಕೊಲ್ಲಲಾಗಿದೆ. ಮಕ್ಕಳು ರೋಗಿಗಳು ಎಂಬುದನ್ನೂ ಲೆಕ್ಕಿಸದೇ, ಶಾಲೆಗಳ ಮೇಲೆ, ಆಸ್ಪತ್ರೆಗಳ ಮೇಲೆ, ವಸತಿ ಪ್ರದೇಶಗಳ ಮೇಲೆ ಬಾಂಬ್ ಮತ್ತು ಶೆಲ್ ದಾಳಿ ನಡೆಸಿರುವ ರಷ್ಯಾದ ಸೈನಿಕರು, ಸಾವಿರಾರು ಉಕ್ರೇನ್ ಜನರ ಮಾರಣ ಹೋಮ ಮಾಡುತ್ತಿದ್ದಾರೆ. ಅತ್ತ, ಉಕ್ರೇನ್ ಯೋಧರಿಂದ ಹಾಗೂ ನಾಗರಿಕರಿಂದ ವ್ಯಾಪಕ ಪ್ರತಿರೋಧ ಎದುರಿಸುತ್ತಿರುವ ರಷ್ಯಾದ ಸೈನಿಕರು ಸಹ ಸಾವಿರ ಸಂಖ್ಯೆಯಲ್ಲಿ ಮೃತಪಟ್ಟಿದ್ದು, ಎರಡೂ ಕಡೆ ಸಾವು ನೋವುಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಈ ನಡುವೆ, ಉಕ್ರೇನ್‌ನ ಬಂದರು ನಗರವಾದ ಹಾಗೂ ಅತ್ಯಂತ ಪ್ರತಿಷ್ಠೆಯ 'ಮರಿಯಾಪೋಲ್' ರಷ್ಯಾದ ವಶವಾಗಿದ್ದು, ಇನ್ನೂ ಹಲವಾರು ಪ್ರಮುಖ ನಗರಗಳನ್ನು ವಶಪಡಿಸಿಕೊಂಡಿರುವ ದೈತ್ಯ ರಷ್ಯಾ ಸೇನೆ ಅಟ್ಟಹಾಸದಿಂದ ಅಬ್ಬರಿಸುತ್ತಿದೆ. ಆದರೆ, ಈ ಭೀಕರ ಯುದ್ಧಕ್ಕೆ ತೆರೆ ಎಳೆಯಲು ವಿಶ್ವ ಸಮುದಾಯ ಸಾಕಷ್ಟು ಹೆಣಗಾಡುತ್ತಿದೆ. ಇದರ ಭಾಗವಾಗಿ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟೆರಸ್ ಅವರು ಮುಂದಿನ ವಾರದಲ್ಲಿ ಶಾಂತಿ ಸಂಧಾನದ ಮಾತುಕತೆಗಳನ್ನು ನಡೆಸಲು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್‌ಸ್ಕಿ ಅವರನ್ನು ಭೇಟಿಯಾಗಲಿದ್ದಾರೆ ಎಂಬ ಇತ್ತೀಚಿನ ವರದಿ ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಯುದ್ಧ ಯಾವಾಗಲೂ ವಿನಾಶಕಾರಿಯಾಗಿರುತ್ತದೆ. ವಿಜೇತರು, ವಿಜಯ ಪತಾಕೆ ಹಾರಿಸಿದರೂ ಸಹ, ಅದರ ಬುಡದಲ್ಲಿ ರಕ್ತಸಿಕ್ತ ಕಲೆಗಳಿರುತ್ತವೆ. ಯುದ್ಧ ಒಂದು, ದೇಶದ ಒಂದು ಸಂಸ್ಕೃತಿಯ ಸರ್ವ ನಾಶ ಎನ್ನಬಹುದು. ಅಷ್ಟೇ ಏಕೆ ಇಡೀ ಮನುಕುಲಕ್ಕೆ ಮಾರಕವೆಂದು ಹೇಳಬಹುದು. ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ನಡೆಸಲಿರುವ ಶಾಂತಿ ಸಂಧಾನದ ಮಾತುಕತೆಗಳು ಫಲಪ್ರದವಾಗಲಿ ಹಾಗೂ ಆದಷ್ಟು ಬೇಗ ಯುದ್ಧ ಕೊನೆಗೊಂಡು, ಶಾಂತಿ ನೆಲೆಸಲಿ ಎಂದು ಹಾರೈಸೋಣ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಮುಡಾದ ಅಕ್ರಮ ಪತ್ತೆ ಬರೀ ಪ್ರಹಸನ...!

ಮಾನ್ಯರೇ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ 2005 ರಿಂದ 2010ರವರೆಗೆ ನಡೆದಿರುವ ಅಕ್ರಮಗಳಲ್ಲಿ ಮುಡಾ ಸಿಬ್ಬಂದಿ ಭಾಗಿಯಾಗಿರುವುದನ್ನು ಬಯಲಾಗುತ್ತಿರುವ ಪ್ರಕರಣಗಳೇ ಸಾಬೀತುಪಡಿಸುತ್ತಿವೆ. ಅಕ್ರಮ ಅಗೆದಷ್ಟು ಆಳಕ್ಕೆ ಹೋಗುತ್ತಿರುವುದು ಆತಂಕಕಾರಿ ಸಂಗತಿ. ಈ ಹಿಂದೆ ಇದೇ ರೀತಿ ಅಕ್ರಮಗಳು ಪತ್ತೆಯಾದಾಗ ಸಿಕ್ಕಿಬಿದ್ದ ತಪ್ಪಿತಸ್ಥರನ್ನು ಶಿಕ್ಷಿಸದೆ ಬಿಟ್ಟಿದ್ದರಿಂದಲೇ ಮುಡಾಕ್ಕೆ ಭಾರೀ ನಷ್ಟ ಮತ್ತು ಜನರ ವಿಶ್ವಾಸಕ್ಕೆ ಧಕ್ಕೆಯುಂಟಾಗಿದೆ. ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳು ಹಾಗೂ ನೌಕರರನ್ನು ಈಗಲಾದರೂ ಶಿಕ್ಷೆಗೊಳಪಡಿಸಬೇಕು. ಇಲ್ಲವಾದಲ್ಲಿ ಈ ಅಕ್ರಮ ಪತ್ತೆ ಕೇವಲ ಪ್ರಹಸನವಾಗಿ ಮತ್ತಷ್ಟು ಸುಲಿಗೆಗೆ ಪ್ರೋತ್ಸಾಹಿಸಿದಂತಾಗುತ್ತದೆ. ಮೂಡಾ ಅಧ್ಯಕ್ಷರೂ ಸೇರಿದಂತೆ ಶಾಸಕರು, ಸಂಸದರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಪ್ರತಿಕ್ರಿಯಿಸದಿರುವುದು ಅವರ ಬದ್ಧತೆಯನ್ನು ಸಂಶಯಿಸುವಂತೆ ಮಾಡಿದೆ. ಇವರೆಲ್ಲರಿಗೂ ಈ ನಗರ ಬದುಕು, ಮಾನ, ಸಮ್ಮಾನ ಎಲ್ಲವನ್ನೂ ಕೊಟ್ಟಿದೆ. ಇದನ್ನು ಒಂದು ಕ್ಷಣ ನೆನೆದು ಮೌನ ಮುರಿದು ಅಕ್ರಮದ ಬಗ್ಗೆ ಮಾತಾಡಬೇಕು. ಆದರೆ ಸರ್ಕಾರವೇ 40 ಪರ್ಸೆಂಟ್ ಕಮೀಷನ್ ಇನ್ನಿತರ ಅಕ್ರಮಗಳ ಕೆಸರಿನಲ್ಲಿ ಮುಳುಗಿರುವುದರಿಂದ ಎಲ್ಲರ ಬಾಯಿಗೂ ಬೀಗ ಬಿದ್ದಿದೆ. ಧಾರ್ಮಿಕ ವಿಚಾರಗಳನ್ನು ಬಳಸಿಕೊಂಡು ಕೋಮು ಸೌಹಾರ್ದತೆಗೆ ಕಿಚ್ಚು ಹತ್ತಿಸುವುದನ್ನು ಬಿಟ್ಟು, ಸಾರ್ವಜನಿಕರ ಒಳಿತಿಗಾಗಿ ಮಾತನಾಡಬೇಕು.

–ಉಗ್ರನರಸಿಂಹೇಗೌಡ, ಸ್ವರಾಜ್ ಇಂಡಿಯಾ

ಉದ್ಬೂರು ಗ್ರಾಮದಲ್ಲಿ ಎಟಿಎಂ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು ತಾಲೂಕು ಜಯಪುರ ಹೋಬಳಿಯ ಉದ್ಬೂರು ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ.ಈ ಗ್ರಾಮದಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್ ಶಾಖೆ ಇದೆ. ದಿನನಿತ್ಯ ಲಕ್ಷಾಂತರ ರೂ ವಾಣಿಜ್ಯ ವಹಿವಾಟು ನಡೆಯುವ ಈ ಗ್ರಾಮದಲ್ಲಿ ಎಟಿಎಂ ಸೌಲಭ್ಯ ಇಲ್ಲ. ಪ್ರಸ್ತುತ ಇರುವ ಬ್ಯಾಂಕ್‌ಗಳಲ್ಲಿ ನೇರವಾಗಿ ಗ್ರಾಹಕರು ಹಣಕಾಸಿನ ವ್ಯವಹಾರ ನಡೆಸಬೇಕು. ಬ್ಯಾಂಕ್ ಸಮಯ ಹೊರತುಪಡಿಸಿ ಬೇರೆ ಸಮಯದಲ್ಲಿ ಹಣದ ಅವಶ್ಯಕತೆ ಇದ್ದಾಗ ತುಂಬಾ ತೊಂದರೆಯಾಗುತ್ತಿದೆ. ಇಂತಹ ಸಮಯದಲ್ಲಿ ಎಟಿಎಂ ಇದ್ದರೆ ಅನುಕೂಲವಾಗುತ್ತದೆ. ಬ್ಯಾಂಕ್‌ಗಳಲ್ಲಿ ಜನಜಂಗುಳಿ ಉಂಟಾಗುತ್ತದೆ. ಆದ್ದರಿಂದ ಕಾವೇರಿ ಗ್ರಾಮೀಣ ಬ್ಯಾಂಕ್ ಎಟಿಎಂ ಕೌಂಟರ್ ತೆರೆದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಸಂಬಂಧಪಟ್ಟ ಬ್ಯಾಂಕ್ ಅಧಿಕಾರಿಗಳು ಇತ್ತ ಗಮನಹರಿಸಲು ಮನವಿ.

–ಸುಚಿತ್ರ ಸಿ ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು.

ರಸ್ತೆ ರಿಪೇರಿಗೆ ಮಳೆ ಮುಹೂರ್ತಕ್ಕೆ ಕಾದು ಕುಳಿತಿದೆಯೇ ಪಾಲಿಕೆ?

ಮಾನ್ಯರೆ,

ಮೈಸೂರು ನಗರವನ್ನು ಒಂದು ಸುತ್ತು ಹಾಕಿದರೆ ಕನಿಷ್ಟ ವಾರ ಕಾಲ ವಿಶ್ರಾಂತಿ ಪಡೆಯಬೇಕಿದೆ. ಅಷ್ಟರ ಮಟ್ಟಿಗೆ ರಸ್ತೆಗಳು ಹಾಳಾಗಿವೆ. ಮೈಸೂರು ನಗರದ ಶೇ. 80 ರಷ್ಟು ರಸ್ತೆಗಳು ಹಳ್ಳಕೊಳ್ಳಗಳಿಂದ ಕೂಡಿವೆ. ಇವುಗಳನ್ನು ಬೇಸಿಗೆಯಲ್ಲಿ ರಿಪೇರಿ ಮಾಡಲು ಸುಸಮಯ. ಆಗ ಗುಣಮಟ್ಟದ ಕಾಮಗಾರಿ ಮಾಡಬಹುದು. ಅಲ್ಲದೆ ರಸ್ತೆಗಳು ಬಾಳಿಕೆಯೂ ಬರುತ್ತವೆ. ಆದರೆ ನಗರ ಪಾಲಿಕೆ ಅಧಿಕಾರಿ ವರ್ಗ ಬೇಸಿಗೆಯಲ್ಲಿ ರಸ್ತೆಗಳ ಸರಿಪಡಿಸದೆ, ಮಳೆಗಾಲವನ್ನೇ ಆಯ್ಕೆ ಮಾಡಿಕೊಳ್ಳುವ ಸಂಗತಿ ಅಚ್ಚರಿ ಮೂಡಿಸುತ್ತದೆ.

ಮಳೆಯ ನಡುವೆ ರಸ್ತೆ ಕಾಮಗಾರಿಯನ್ನು ಗುಣಮಟ್ಟದಿಂದ ಮಾಡಲು ಸಾಧ್ಯವೆ? ಕೆಲವೇ ತಿಂಗಳಲ್ಲಿ ಮತ್ತೆ ಹಾಳಾಗುತ್ತವೆ. ಮತ್ತೆ ಟೆಂಡರ್, ರಿಪೇರಿ ಆರಂಭವಾಗುತ್ತದೆ. ಹೀಗೆ ಕೋಟ್ಯಾಂತರ ರೂ. ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಾ ಇದೆ. ಇದರ ಬಗ್ಗೆ ಯಾವುದಾದರೂ ಜನಪರ ಹೋರಾಟದ ಸಂಘಟನೆಗಳು ನ್ಯಾಯಾಲಯದ ಮೊರೆ ಹೋಗಿ, ಸೂಕ್ತ ಆದೇಶವನ್ನು ನೀಡದೇ ಹೋದಲ್ಲಿ ಅಧಿಕಾರಿ ವರ್ಗ ಎಚ್ಚೆತ್ತುಕೊಳ್ಳದು. ಜನಪ್ರತಿನಿಧಿಗಳಿಗಂತೂ ಜನಪರ ಕಾಳಜಿ ಇಲ್ಲ ಎಂಬುದು ಅವರ ಮೌನವೇ ಸಾಬೀತುಪಡಿಸುತ್ತದೆ.

–ರಾಘವೇಂದ್ರ, ಕುವೆಂಪುನಗರ, ಮೈಸೂರು.

ರಕ್ಷಣಾ ವಲಯಕ್ಕೆ ಹೆಚ್ಚಿನ ಹಣ ವೆಚ್ಚ; ಅಮೆರಿಕ, ಚೀನಾ ಬಳಿಕ ಭಾರತಕ್ಕೆ ಮೂರನೇ ಸ್ಥಾನ



ನವದೆಹಲಿ, ಏ. 25– ಜಗತ್ತಿನಲ್ಲಿ ರಕ್ಷಣಾ ವಲಯಕ್ಕೆ ಅತೀ ಹೆಚ್ಚಿನ ಹಣ ವ್ಯಯಿಸುವ ದೇಶಗಳ ಪಟ್ಟಿಯಲ್ಲಿ ಭಾರತ ಮೂರನೇ ಸ್ಥಾನಕ್ಕೇರಿದೆ. ಈ ಬಗ್ಗೆ ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸೋಮವಾರ ಮಾಹಿತಿ ನೀಡಿದ್ದು, 'ವಿಶ್ವ ಮಿಲಿಟರಿ ವೆಚ್ಚವು 2021 ರಲ್ಲಿ ಶೇ. 0.7 ಪ್ರತಿಶತದಷ್ಟು ಹೆಚ್ಚಾಗಿದ್ದು, ಸಾರ್ವಕಾಲಿಕ ಗರಿಷ್ಠ ಅಂದರೆ 2.1 ಟ್ರಿಲಿಯನ್ ಡಾಲರ್‌ಗೆ ತಲುಪಿದೆ ಎಂದು ಹೇಳಿದೆ.

ಈ ಪೈಕಿ ಅತೀ ಹೆಚ್ಚು ರಕ್ಷಣಾ ವೆಚ್ಚ ಮೀಸಲಿಟ್ಟಿರುವುದು ಅಮೆರಿಕ ರಾಷ್ಟ್ರವಾಗಿದ್ದು, ನಂತರದ ಸ್ಥಾನದಲ್ಲಿ ಚೀನಾ ದೇಶವಿದೆ. ಇದೀಗ ಈ ಪಟ್ಟಿಯಲ್ಲಿ ಭಾರತ ಬ್ರಿಟನ್ ಅನ್ನು ಹಿಂದಿಕ್ಕಿ ಮೂರನೇ ಸ್ಥಾನಕ್ಕೇರಿದ್ದು, ಬ್ರಿಟನ್ ನಾಲ್ಕನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ನಂತರದ ಸ್ಥಾನದಲ್ಲಿ ರಷ್ಯಾ ದೇಶವಿದೆ. ಜಗತ್ತಿನ ಒಟ್ಟಾರೆ ರಕ್ಷಣಾ ವೆಚ್ಚದ ಪೈಕಿ ಶೇ.62ರಷ್ಟು ವೆಚ್ಚವನ್ನು ಈ ಐದು ದೇಶಗಳೇ ವ್ಯಯಿಸುತ್ತಿವೆ ಎಂದು ವರದಿಯಲ್ಲಿ ಹೇಳಲಾಗಿದೆ

ಕೋವಿಡ್–19 ಸಾಂಕ್ರಾಮಿಕದ ಆರ್ಥಿಕ ಕುಸಿತದ ನಡುವೆಯೂ, ವಿಶ್ವ ಮಿಲಿಟರಿ ವೆಚ್ಚವು ದಾಖಲೆಯ ಮಟ್ಟವನ್ನು ತಲುಪಿದೆ ಎಂದು SIPRI ಯ ಮಿಲಿಟರಿ ವೆಚ್ಚ ಮತ್ತು ಶಸ್ತ್ರಾಸ್ತ್ರ ಉತ್ಪಾದನಾ ಕಾರ್ಯಕ್ರಮದ ಹಿರಿಯ ಸಂಶೋಧಕ ಡಾ. ಡಿಯಾಗೋ ಲೋಪೆಸ್ ಡಾ ಸಿಲ್ವಾ ಹೇಳಿದರು. ಹಣದುಬ್ಬರದಿಂದಾಗಿ ನೈಜ–ಅವಧಿಯ ಬೆಳವಣಿಗೆಯ ದರದಲ್ಲಿ ಮಂದಗತಿ ಕಂಡುಬಂದಿದೆ. ಆದಾಗ್ಯೂ, ನಾಮಮಾತ್ರದ ಪರಿಭಾಷೆಯಲ್ಲಿ, ಮಿಲಿಟರಿ ವೆಚ್ಚವು 6.1 ಪ್ರತಿಶತದಷ್ಟು ಹೆಚ್ಚಾಗಿದೆ. ಕೋವಿಡ್–19 ಸಾಂಕ್ರಾಮಿಕದಿಂದ ಆರ್ಥಿಕ ಚೇತರಿಕೆಯ ಪರಿಣಾಮವಾಗಿ, ರಕ್ಷಣಾ ವೆಚ್ಚವು ಜಾಗತಿಕ GDPಯ ಶೇಕಡಾ 2.2 ರಷ್ಟಿದ್ದರೆ, 2020 ರಲ್ಲಿ ಈ ಅಂಕಿ ಅಂಶವು 2.3 ಶೇಕಡಾ ತಲುಪಿದೆ ಎನ್ನಲಾಗಿದೆ.

ಅಮೆರಿಕ ಮಿಲಿಟರಿ ವೆಚ್ಚವು 2021 ರಲ್ಲಿ USD 801 ಶತಕೋಟಿಯನ್ನು ತಲುಪಿದ್ದು, 2020 ರಿಂದ 1.4 ರಷ್ಟು ಕಡಿಮೆಯಾಗಿದೆ. 2012 ರಿಂದ 2021 ರ ಅವಧಿಯಲ್ಲಿ, ಅಮೆರಿಕ ಮಿಲಿಟರಿ ಸಂಶೋಧನೆ ಮತ್ತು ಅಭಿವೃದ್ಧಿಗೆ 24 ಪ್ರತಿಶತದಷ್ಟು ಹಣವನ್ನು ಹೆಚ್ಚಿಸಿದೆ ಮತ್ತು ಶಸ್ತ್ರಾಸ್ತ್ರ ಖರೀದಿಯ ಮೇಲಿನ ವೆಚ್ಚವನ್ನು ಶೇಕಡಾ 6.4 ರಷ್ಟು ಕಡಿಮೆ ಮಾಡಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಎರಡನೇ ಸ್ಥಾನದಲ್ಲಿ ಚೀನಾ ಇದ್ದು, ಇಲ್ಲಿ ಮಿಲಿಟರಿ ವೆಚ್ಚಕ್ಕಾಗಿ 293 ಶತಕೋಟಿ ಡಾಲರ್‌ಗಳನ್ನು ಖರ್ಚು ಮಾಡಿದೆ, ಇದು 2020 ಕ್ಕೆ ಹೋಲಿಸಿದರೆ 4.7 ಶೇಕಡಾ ಹೆಚ್ಚಳವಾಗಿದೆ. ಭಾರತದ ಮಿಲಿಟರಿ ವೆಚ್ಚವು ಕಳೆದ ವರ್ಷ 76.6 ಶತಕೋಟಿ ಡಾಲರ್ ನೊಂದಿಗೆ ಮೂರನೇ ಸ್ಥಾನದಲ್ಲಿದ್ದು, 2020 ಕ್ಕೆ ಹೋಲಿಸಿದರೆ 0.9 ಶೇಕಡಾ ಹೆಚ್ಚಳವಾಗಿದೆ ಎನ್ನಲಾಗಿದೆ.

ಸ್ಟಾಕ್‌ಹೋಮ್ ಮೂಲದ ಸಂಸ್ಥೆಯ ಪ್ರಕಾರ, USD 76.6 ಶತಕೋಟಿಯ ಭಾರತದ ಮಿಲಿಟರಿ ವೆಚ್ಚವು ವಿಶ್ವದಲ್ಲೇ ಮೂರನೇ ಅತ್ಯಧಿಕ ಸ್ಥಾನದಲ್ಲಿದೆ. ಇದು 2020 ರಿಂದ ಶೇಕಡಾ 0.9 ರಷ್ಟು ಮತ್ತು 2012 ರಿಂದ ಶೇಕಡಾ 33 ರಷ್ಟು ಹೆಚ್ಚಾಗಿದೆ. ಸ್ಥಳೀಯ ಶಸ್ತ್ರಾಸ್ತ್ರ ಉದ್ಯಮವನ್ನು ಬಲಪಡಿಸುವ ಪ್ರಯತ್ನದಲ್ಲಿ, 2021 ರ ಮಿಲಿಟರಿ ಬಜೆಟ್‌ನಲ್ಲಿ 64 ಶೇಕಡಾ ಬಂಡವಾಳವನ್ನು ದೇಶೀಯವಾಗಿ ಉತ್ಪಾದಿಸಿದ ಶಸ್ತ್ರಾಸ್ತ್ರಗಳ ಸ್ವಾಧೀನಕ್ಕೆ ಮೀಸಲಿಡಲಾಗಿದೆ. ಬ್ರಿಟನ್ ಕಳೆದ ವರ್ಷ $ 68.4 ಶತಕೋಟಿಯನ್ನು ರಕ್ಷಣೆಗಾಗಿ ಖರ್ಚು ಮಾಡಿದೆ, 2020 ರಿಂದ ಶೇಕಡಾ ಮೂರು ಹೆಚ್ಚಾಗಿದೆ ಎಂದು ಹೇಳಿಕೆ ಓದಿದೆ.


ಏತನ್ಮಧ್ಯೆ, ರಕ್ಷಣಾ ವೆಚ್ಚದಲ್ಲಿ ರಷ್ಯಾ ಐದನೇ ಸ್ಥಾನವನ್ನು ಪಡೆದುಕೊಂಡಿದೆ. "ರಷ್ಯಾ ತನ್ನ ಮಿಲಿಟರಿ ವೆಚ್ಚವನ್ನು 2021 ರಲ್ಲಿ ಶೇಕಡಾ 2.9 ರಷ್ಟುಅಂದರೆ 65.9 ಶತಕೋಟಿಗೆ ಹೆಚ್ಚಿಸಿದೆ, ಇದು ಸತತ ಮೂರನೇ ವರ್ಷದ ಬೆಳವಣಿಗೆಯಾಗಿದ್ದು, 2021 ರಲ್ಲಿ ಜಿಡಿಪಿಯಲ್ಲಿ ರಷ್ಯಾದ ಮಿಲಿಟರಿ ವೆಚ್ಚವು ಶೇಕಡಾ 4.1 ಕ್ಕೆ ತಲುಪಿದೆ.

ರಾಜ್ಯದಲ್ಲಿ ಸೋಮವಾರ 64 ಮಂದಿಗೆ ಕೊರೊನಾ

ಬೆಂಗಳೂರು, ಏ. 25– ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ 64 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,46,998ಕ್ಕೆ ಏರಿಕೆಯಾಗಿದೆ. ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೊನಾದಿಂದ ಇಂದು ಯಾವುದೇ ಸಾವು ವರದಿಯಾಗಿಲ್ಲ. ಹೀಗಾಗಿ ಸಾವಿನ ಸಂಖ್ಯೆ 40057 ಇದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನಲ್ಲಿ ಇಂದು 63 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 17,82,999ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲೂ ಯಾವುದೇ ಕೊರೊನಾ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇಂದು 69 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 39,05228ಕ್ಕೆ ಏರಿಕೆಯಾಗಿದೆ. ಇನ್ನು 1671 ಸಕ್ರಿಯ ಪ್ರಕರಣಗಳಿವೆ.

ವಿಜಯನಗರ 3ನೇ ಹಂತದಲ್ಲಿ ವಿಜಯ ಮಹಾಗಣಪತಿ ರಥೋತ್ಸವ



ಮೈಸೂರು, ಏ.25– ಮೈಸೂರಿನ ವಿಜಯನಗರ 3ನೇ ಹಂತದಲ್ಲಿರುವ ವಿಜಯ ಮಹಾಗಣಪತಿ ದೇವಸ್ಥಾನದಲ್ಲಿ ವಿಜಯ ಮಹಾಗಣಪತಿ ಜಾತ್ರಾ ಮಹೋತ್ಸವದ ಅಂಗವಾಗಿ ಬ್ರಹ್ಮ ರಥೋತ್ಸವ ಹಮ್ಮಿಕೊಳ್ಳಲಾಗಿತ್ತು.

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್ ಗೌಡ ಅವರು ರಥ ಎಳೆಯುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು, ಬ್ರಹ್ಮರಥೋತ್ಸವದ ಅಂಗವಾಗಿ ಮಹಾಗಣಪತಿ ಹೋಮ, ನವಗ್ರಹ ಹೋಮ ಉಯ್ಯಾಲೋತ್ಸವ ವೇದಘೋಷ ಕಾರ್ಯಕ್ರಮ ಮತ್ತು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಜರುಗಿತು.

ವಿಜಯನಗರ 3ನೇ ಹಂತದ ಪ್ರಮುಖ ಬಡಾವಣೆಯಲ್ಲಿ ರಥೋತ್ಸವ ಸಾಗಿತು. ಮೆರವಣಿಗೆಯಲ್ಲಿ ನಾದಸ್ವರ ಮಂಗಳ ವಾದ್ಯ, ಭಜನಾಮಂಡಳಿ, ಅರ್ಚಕ ಪುರೋಹಿತರ ವೇದಬಳಗ ಭಾಗವಹಿಸಿದ್ದರು. ನಂತರ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಅವರು ಮಾತನಾಡಿ, ವಿಜಯನಗರ ಬಡಾವಣೆಯಲ್ಲಿ ವಿಜಯ ಮಹಾಗಣಪತಿ ದೇವಸ್ಥಾನ ಶ್ರದ್ಧಾಭಕ್ತಿಯ ಧಾರ್ಮಿಕ ಕೇಂದ್ರವಾಗಿದೆ. ನಮ್ಮ ಪೂರ್ವಜರ ನಂಬಿಕೆಯಂತೆ ದೇವಸ್ಥಾನಕ್ಕೆ ಬರುವುದರಿಂದ ಮಾನಸಿಕ ಶಕ್ತಿ ಹೆಚ್ಚುತ್ತದೆ. ಮಹಿಳಾ ಭಜನಾ ಕಾರ್ಯಕ್ರಮ ಮತ್ತು ಸಂಗೀತ ಶಾಲೆ, ಯೋಗಾಭ್ಯಾಸ ಶಿಬಿರಗಳನ್ನು ಮುಂದಿನ ದಿನಗಳಲ್ಲಿ ದೇವಸ್ಥಾನದ ಆವರಣದಲ್ಲಿ ಆಯೋಜಿಸುತ್ತಿದ್ದು, ವಿಜಯನಗರ ಬಡಾವಣೆಯ ನಿವಾಸಿಗಳಿಗೆ ಇದು ಉಪಯುಕ್ತವಾಗಲಿದೆ ಎಂದರು. ವಿಜಯಮಹಾಗಣಪತಿ ದೇವಸ್ಥಾನದ ಪ್ರಧಾನ ಅರ್ಚಕ ಮಂಜುನಾಥ್ ಶಾಸ್ತ್ರಿ, ಯುವ ಮುಖಂಡ ಅಜಯ್ ಶಾಸ್ತ್ರಿ, ವಿಜಯನಗರ ಮಂಜು, ಕೇಶವ ಇತರರು ರಥೋತ್ಸವದಲ್ಲಿ ಭಾಗವಹಿಸಿದ್ದರು.

ವಿಶ್ವದ 3ನೇ ಅತ್ಯಂತ ದುಬಾರಿ ನಂಬರ್ ಪ್ಲೇಟ್ 70 ಕೋಟಿ ರೂ.ಗೆ ಹರಾಜು

ಅಬುಧಾಬಿ, ಏ. 25– ಪ್ರತಿಯೊಂದು ವಾಹನಗಳಲ್ಲೂ ನಂಬರ್ ಪ್ಲೇಟ್ ಇರುತ್ತೆ. ಕೆಲವರು ತಮ್ಮ ವಾಹನದ ನಂಬರ್ ಫ್ಯಾನ್ಸಿಯಾಗಿರಬೇಕು ಎಂದು ಇಷ್ಟಪಡುತ್ತಾರೆ. ಶ್ರೀಮಂತರು ಫ್ಯಾನ್ಸಿ ಸಂಖ್ಯೆಗಳಿರುವ ನಂಬರ್ ಪ್ಲೇಟ್‌ಗಳನ್ನು ಖರೀದಿಸಿ ಇನ್ನೊಬ್ಬರ ಗಮನ ಸೆಳೆಯುವಂತೆ ಮಾಡುತ್ತಾರೆ. ಇತ್ತೀಚೆಗೆ ದುಬಾರಿ ನಂಬರ್ ಪ್ಲೇಟ್ ಒಂದು ಮಾರಾಟವಾಗಿ ಸುದ್ದಿಯಾಗಿದೆ.

ಇತ್ತೀಚೆಗೆ ದುಬೈನ ಮೋಸ್ಟ್ ನೋಬೆಲ್ ನಂಬರ್ಸ್ ಚ್ಯಾರಿಟಿ ವತಿಯಿಂದ ವಿಶೇಷ ಫೋನ್ ಸಂಖ್ಯೆ ಹಾಗೂ ವಿಶೇಷ ಕಾರ್ ನಂಬರ್ ಪ್ಲೇಟ್‌ಗಳ ಹರಾಜು ನಡೆಯಿತು. ಈ ಹರಾಜಿನಲ್ಲಿ ವ್ಯಕ್ತಿಯೊಬ್ಬರು ಬರೋಬ್ಬರಿ 70 ಕೋಟಿ ರೂ.ಗೆ ವಿಶೇಷ ಸಂಖ್ಯೆಯ ನಂಬರ್ ಪ್ಲೇಟ್ ಖರೀದಿ ಮಾಡಿದ್ದಾರೆ. ಇದು ವಿಶ್ವದ ಮೂರನೇ ಅತ್ಯಂತ ದುಬಾರಿ ನಂಬರ್ ಪ್ಲೇಟ್ ಎನಿಸಿಕೊಂಡಿತು.

ಎಎ8 ಸಂಖ್ಯೆಯ ನಂಬರ್ ಪ್ಲೇಟ್ ಸುಮಾರು 70 ಕೋಟಿ ರೂ.ಗೆ ಹರಾಜಾಗಿದೆ. ಇದು ವಿಶ್ವದಲ್ಲೇ ಮೂರನೇ ಅತೀ ದುಬಾರಿ ನಂಬರ್ ಪ್ಲೇಟ್ ಎನಿಸಿಕೊಂಡಿದೆ. ಈ ಹಿಂದೆ ಎಎ9 ಸಂಖ್ಯೆಯ ನಂಬರ್ ಪ್ಲೇಟ್ ಕಳೆದ ವರ್ಷ ಸುಮಾರು 79 ಕೋಟಿ ರೂ.ಗೆ ಹರಾಜಾಗಿತ್ತು. ಇತ್ತೀಚೆಗೆ ನಡೆದ ಮೋಸ್ಟ್ ನೋಬೆಲ್ ನಂಬರ್ಸ್ ಚ್ಯಾರಿಟಿಯ ಹರಾಜಿನಲ್ಲಿ ಎಫ್55 ಹಾಗೂ ವಿ66 ನಂಬರ್ ಪ್ಲೇಟ್ 8 ಕೋಟಿ ರೂ.ಗೂ ಅಧಿಕ ಬೆಲೆಗೆ ಮಾರಾಟವಾಗಿದೆ. ವೈ66 ನಂಬರ್ ಪ್ಲೇಟ್ 7.91 ಕೋಟಿ ರೂ.ಗೆ ಮಾರಾಟವಾಗಿದೆ.

ವಿಚಾರಣೆಗೆ ಹಾಜರಾಗಲು ಪ್ರಿಯಾಂಕ್ ಖರ್ಗೆ ಹಿಂದೇಟು; ಇದು ಆಪ್ತರ ರಕ್ಷಿಸೋ ತಂತ್ರ: ಆರಗ



ಆರಗ ಜ್ಞಾನೇಂದ್ರ

ಬೆಂಗಳೂರು, ಏ. 25– PSI ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಪ್ರಿಯಾಂಕ್ ಖರ್ಗೆಗೆ ಸಿಐಡಿ ಅಧಿಕಾರಿಗಳು ನೋಟಿಸ್ ನೀಡಿದರೂ, ಪ್ರಿಯಾಂಕ್ ಖರ್ಗೆ ವಿಚಾರಣೆಗೆ ಹಾಜರಾಗಿಲ್ಲ. ಈ ವಿಚಾರಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ವಿರುದ್ಧ ಕಿಡಿಕಾರಿದ್ದಾರೆ. ತಮ್ಮ ಬಳಿ ಇರಬಹುದಾದ, PSI ಹುದ್ದೆಗಳ ಅಕ್ರಮ ನೇಮಕಾತಿಗೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು, ಮಾಹಿತಿಗಳನ್ನು, ಹಂಚಿಕೊಳ್ಳಬೇಕು ಎಂದು ಸಿಐಡಿ ಅಧಿಕಾರಿಗಳು ನೋಟಿಸ್ ನೀಡಿದ್ದರು.

ಶಾಸಕರು, ತಮ್ಮ ಬಳಿ ಅಕ್ರಮ ನೇಮಕಾತಿಗೆ ಸಂಬಂಧಿಸಿದಂತೆ ಬಹಳಷ್ಟು ಸಾಕ್ಷ್ಯಾಧಾರಗಳಿವೆ ಹಾಗೂ ಅಕ್ರಮದಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ಹೆಸರುಗಳು ಗೊತ್ತು ಎಂದು ಮಾಧ್ಯಮದವರ ಮುಂದೆ ಬಿಂಬಿಸಿಕೊಂಡಿದ್ದರು. ಈಗ ಸಿಐಡಿ ಅಧಿಕಾರಿಗಳ ಮುಂದೆ ಹಾಜರಾಗಲು ಹಿಂಜರಿಯುತ್ತಿದ್ದಾರೆ ಎಂದು ಕಿಡಿಕಾರಿದರು.

ಪಲಾಯನವಾದ ನೀತಿ ಅನುಸರಿಸಿದ್ದಾರೆ: ಶಾಸಕ ಪ್ರಿಯಾಂಕ್ ಖರ್ಗೆ ತಮ್ಮ ಹೊಣೆಗಾರಿಕೆಯನ್ನು ಮರೆತು, ತಮ್ಮಲ್ಲಿ ಯಾವುದೇ ಸಾಕ್ಷ್ಯಾಧಾರಗಳಿಲ್ಲ, ಕೇವಲ ಸಾಮಾಜಿಕ ಜಾಲತಾಣದಲ್ಲಿರುವ ಮಾಹಿತಿಯನ್ನು ಮಾತ್ರ ಪ್ರಕಟಿಸಿದ್ದೆ, ಎಂಬ ಬಾಲಿಶ ಹೇಳಿಕೆ ನೀಡಿದ್ದಾರೆ. ಪ್ರಿಯಾಂಕ್ ಖರ್ಗೆ ಅವರು ಸಿಐಡಿ ಅಧಿಕಾರಿಗಳ ಮುಂದೆ ಹಾಜರಾಗಿ ತನಿಖೆಗೆ ಸಹಕರಿಸುವುದರ ಬದಲು ಪಲಾಯನವಾದ ನೀತಿ ಅನುಸರಿಸಿದ್ದಾರೆ ಎಂದು ಕಿಡಿಕಾರಿದರು. ಪ್ರಾಮಾಣಿಕವಾಗಿ ಪರೀಕ್ಷೆ ಬರೆದರೂ ಹುದ್ದೆಯಿಂದ ವಂಚಿತರಾದ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲು ಸಿಐಡಿ ತನಿಖೆಗೆ ನಾನೇ ಸ್ವತಃ ಆಸಕ್ತಿ ತೋರಿಸಿದ್ದೆ, ಮುಖ್ಯಮಂತ್ರಿಗಳ ಜತೆ ಸಮಾಲೋಚಿಸಿ ತನಿಖೆಗೆ ಆದೇಶ ನೀಡಿದ್ದೆ ಎಂದರು.

ಇದು ಆರೋಪಿಗಳನ್ನು ರಕ್ಷಿಸುವ ತಂತ್ರ: ಬಡ ಕುಟುಂಬದಿಂದ ಬಂದಂಥಾ ಸಾವಿರಾರು ಪ್ರಾಮಾಣಿಕ ಹಾಗೂ ಪ್ರತಿಭಾವಂತ ಆಕಾಂಕ್ಷಿಗಳು ಮೂಲೆ ಗುಂಪಾದರೆ ಸಮಾಜಕ್ಕೆ ಆಗುವ ನಷ್ಟದ ಅಂದಾಜನ್ನು ಪ್ರಿಯಾಂಕ್ ಖರ್ಗೆ ಅವರು ಅರಿಯಬೇಕಿತ್ತು. ಸಿಐಡಿ ಅಧಿಕಾರಿಗಳ ಮುಂದೆ ಹಾಜರಾಗಿ ಸಾಕ್ಷ್ಯಾಧಾರಗಳನ್ನು ನೀಡದೆ ಇರುವ ನಿರ್ಧಾರದ ಹಿಂದೆ ಬಂಧನಕ್ಕೆ ಒಳಗಾಗಿರುವ ತಮ್ಮ ಆಪ್ತರನ್ನು ರಕ್ಷಿಸುವ ಇರಾದೆ ಇದೆ ಎಂಬ ಸಂಶಯ ಮೂಡುತ್ತದೆ.

ತನಿಖೆಯು ನಿಷ್ಪಕ್ಷಪಾತವಾಗಿ ನಡೆಯುತ್ತಿದ್ದು, ಅಕ್ರಮದಲ್ಲಿ ಒಳಗಾಗಿದವರು ಎಷ್ಟೇ ದೊಡ್ಡವರಾದರೂ ರಕ್ಷಿಸುವ ಪ್ರಶ್ನೆಯಿಲ್ಲ ಎಂದು ಪತ್ರಿಕಾ ಪ್ರಕಟಣೆ ಮೂಲಕ ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕಾಂಗ್ರೆಸ್‌ನಿಂದ 'ಎಂಪವರ್ಡ್ ಆಕ್ಷನ್ ಗ್ರೂಪ್–2024' ರಚನೆ

ಪ್ರಶಾಂತ್ ಕಿಶೋರ್ ಸೇರ್ಪಡೆ ಬಗ್ಗೆ ಸ್ಪಷ್ಟತೆ ಇಲ್ಲ



ನವದೆಹಲಿ, ಏ. 25– 2024ರ ಲೋಕಸಭೆ ಚುನಾವಣೆಗೆ ಪಕ್ಷವನ್ನು ಸಿದ್ಧಗೊಳಿಸಲು 'ಎಂಪವರ್ಡ್ ಆಕ್ಷನ್ ಗ್ರೂಪ್–2024' ರಚಿಸುವುದಾಗಿ ಕಾಂಗ್ರೆಸ್ ಸೋಮವಾರ ಘೋಷಿಸಿದೆ. ಆದರೆ ಚುನಾವಣಾ ಚಾಣಕ್ಯ ಪ್ರಶಾಂತ್ ಕಿಶೋರ್ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಯಾವುದೇ ಸ್ಪಷ್ಟತೆ ನೀಡಿಲ್ಲ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮೇ 13 ರಿಂದ 15ರವರೆಗೆ ರಾಜಸ್ಥಾನದ ಉದಯಪುರದಲ್ಲಿ ಚಿಂತನ–ಮಂಥನ ಅಧಿವೇಶನ ಕರೆಯಲು ನಿರ್ಧರಿಸಿದ್ದಾರೆ. ಅಲ್ಲಿ ದೇಶಾದ್ಯಂತದ ಪಕ್ಷದ ನಾಯಕರು ಎದುರಿಸುತ್ತಿರುವ ಆಂತರಿಕ ಸಮಸ್ಯೆಗಳ ಕುರಿತು ಚರ್ಚಿಸಿ ಸಂಘಟನೆಯನ್ನು ಬಲಪಡಿಸಲು ಪರಿಹಾರ ಕಂಡುಕೊಳ್ಳಲಾಗುವುದು. ಈ ಮೂಲಕ ಮುಂಬರುವ ಚುನಾವಣೆಯಲ್ಲಿ ಬಿಜೆಪಿಯನ್ನು ಸಮರ್ಥವಾಗಿ ಎದುರಿಸಲಾಗುವುದು ಎಂದು ಪಕ್ಷದ ಮುಖ್ಯ ವಕ್ತಾರ ರಂದೀಪ್ ಸುರ್ಜೇವಾಲಾ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪ್ರಶಾಂತ್ ಕಿಶೋರ್ ಅವರು ಕಾಂಗ್ರೆಸ್ ಸೇರ್ಪಡೆ ಕುರಿತು ಯಾವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂಬ ವರದಿಗಾರರ ಪ್ರಶ್ನೆಗೆ ನೇರ ಉತ್ತರ ನೀಡದ ಸುರ್ಜೇವಾಲಾ, ಆಕ್ಷನ್ ಗ್ರೂಪ್ ರಚಿಸಿದಾಗ, ಅದರಲ್ಲಿ ಯಾರಿದ್ದಾರೆ ಎಂಬುದು ನಿಮಗೇ ತಿಳಿಯುತ್ತದೆ ಎಂದರು.

ಪ್ರಶಾಂತ್ ಕಿಶೋರ್ ಮಂಡಿಸಿದ ಯೋಜನೆ ಸೇರಿದಂತೆ ಮುಂದಿನ ಸಾರ್ವತ್ರಿಕ ಮತ್ತು ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಕಾರ್ಯತಂತ್ರವನ್ನು ರೂಪಿಸಲು ಪಕ್ಷದ ಹಿರಿಯ ನಾಯಕರ ಸಭೆಯಲ್ಲಿ ನಿರ್ಧಾರಗಳನ್ನು ತೆಗೆದು ಕೊಳ್ಳಲಾಗಿದೆ ಎಂದಿದ್ದಾರೆ. ಸತತ ಸೋಲಿನ ಹಿನ್ನೆಲೆಯಲ್ಲಿ ಮುಂಬರುವ ಚುನಾವಣೆಗೆ ರಣತಂತ್ರ ರೂಪಿಸಲು ಹರಸಾಹಸಪಡುತ್ತಿದೆ.

ರಷ್ಯಾ ವಿರುದ್ಧ ಹೋರಾಟದಲ್ಲಿ ಉಕ್ರೇನ್‌ಗೆ ಹೊಸ ಮಿಲಿಟರಿ ನೆರವು

ಅಮೆರಿಕ ಭರವಸೆ

ಕೀವ್, ಏ. 25– ರಷ್ಯಾ ವಿರುದ್ಧ ಹೋರಾಟದಲ್ಲಿ ಉಕ್ರೇನ್ಗೆ ಹೊಸದಾಗಿ ನೂರಾರು ಮಿಲಿಯನ್ ಡಾಲರ್ ಮಿಲಿಟರಿ ನೆರವು ನೀಡಲಾಗುವುದು ಎಂದು ಅಮೆರಿಕದ ಉನ್ನತ ಮಟ್ಟದ ಅಧಿಕಾರಿಗಳು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ ಸ್ಕಿಗೆ ಭರವಸೆ ನೀಡಿದ್ದಾರೆ.

ಯುದ್ಧ ಪೀಡಿತ ಉಕ್ರೇನ್‌ಗೆ 300 ಮಿಲಿಯನ್ ಡಾಲರ್‌ಗೂ ಹೆಚ್ಚಿನ ವಿದೇಶಿಕ ಮಿಲಿಟರಿ ಹಣಕಾಸಿನೊಂದಿಗೆ 165 ಮಿಲಿಯನ್ ಡಾಲರ್ ನಷ್ಟು ಮೊತ್ತದ ಶಸಾಸ್ತ್ರ ಒದಗಿಸಲು ಅಮೆರಿಕ ಅನುಮೋದನೆ ನೀಡಿದೆ ಎಂದು ಝೆಲೆನ್ ಸ್ಕಿಗೆ ಜೊತೆಗೆ ನಡೆದ ಸಭೆಯಲ್ಲಿ ಅಮೆರಿಕ ಸೆಕ್ರೆಟರಿ ಆಫ್ ಸ್ಟೇಟ್ ಅಂಟೊನಿ ಬ್ಲಿಕೆನ್ ಮತ್ತು ಅಮೆರಿಕ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಅಸ್ಟಿನ್ ಹೇಳಿದ್ದಾರೆ.

ರಷ್ಯಾ ಹೋರಾಟ ಆರಂಭಿಸಿದ 60ನೇ ದಿನದ ಅಂಗವಾಗಿ ಭಾನುವಾರ ಈ ಪ್ರತಿಜ್ಞೆ ಮಾಡಲಾಗಿದೆ. ಪೂರ್ವ ಉಕ್ರೇನ್ ವಲಯದಲ್ಲಿನ ಡಾನ್ ಬಾಸ್‌ನಲ್ಲಿ ರಷ್ಯಾ ಸೇನೆಯನ್ನು ಮಟ್ಟಹಾಕಲು ಹೆಚ್ಚಿನ ಶಕ್ತಿಯುತವಾದ ಶಸಾಸ್ತ್ರಗಳನ್ನು ಪೂರೈಸುವಂತೆ ಝೆಲೆನ್ ಸ್ಕಿ ಅಮೆರಿಕಕ್ಕೆ ಒತ್ತಡ ಹೇರಿದರು. ವಿಶ್ವಸಂಸ್ಥೆ ಕಾರ್ಯದರ್ಶಿ ಜನರಲ್ ಆಂಟೋನಿಯೊ ಗುಟೆರೆಸ್ ಟರ್ಕಿ. ನಂತರ ಮಾಸ್ಕೋ ಮತ್ತು ಕೀವ್‌ಗೆ ಪ್ರಯಾಣಿಸಲಿದ್ದಾರೆ. ಗುಟೆರಸ್ ಉಕ್ರೇನ್‌ಗಿಂತ ಮೊದಲು ರಷ್ಯಾಕ್ಕೆ ಭೇಟಿ ನೀಡಿದ್ದು ತಪ್ಪು ಎಂದು ಝೆಲೆನ್ಸ್ಕಿ ಹೇಳಿದ್ದಾರೆ.

ಭಾರತದ 10, ಪಾಕಿಸ್ತಾನದ 6 ಯೂಟ್ಯೂಬ್ ಚಾನೆಲ್‌ಗಳು ಬ್ಯಾನ್

ನವದೆಹಲಿ, ಏ. 25– ಭಾರತ ದೇಶದ ಬಗ್ಗೆ ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡುತ್ತಿದ್ದ 16 ಯೂಟ್ಯೂಬ್ ಚ್ಯಾನೆಲ್‌ಗಳನ್ನು ಸೋಮವಾರ ಬ್ಯಾನ್ ಮಾಡಿದೆ. ಭಾರತ ಬ್ಯಾನ್ ಮಾಡಿರುವ 16 ಯೂಟ್ಯೂಬ್ ಚಾನೆಲ್‌ಗಳ ಪೈಕಿ 10 ಭಾರತದ ಹಾಗೂ 6 ಪಾಕಿಸ್ತಾನದ ಚ್ಯಾನೆಲ್‌ಗಳು ಸೇರಿವೆ. ಈ ತಿಂಗಳ ಪ್ರಾರಂಭದಲ್ಲಿ ಮಾಹಿತಿ ಹಾಗೂ ಪ್ರಸಾರ ಇಲಾಖೆ 22 ಯೂಟ್ಯೂಬ್ ಚಾನೆಲ್‌ಗಳನ್ನು ಬ್ಯಾನ್ ಮಾಡಿತ್ತು. ಅವುಗಳಲ್ಲಿ 18 ಭಾರತೀಯ ಹಾಗೂ 4 ಪಾಕಿಸ್ತಾನದ ಚಾನೆಲ್‌ಗಳು ಸೇರಿದ್ದವು. ಇವುಗಳು ಸುಳ್ಳು ಮಾಹಿತಿಗಳನ್ನು ಪ್ರಸಾರ ಮಾಡುತ್ತಿದ್ದ ಹಿನ್ನೆಲೆಯಲ್ಲಿ ಬ್ಯಾನ್ ಮಾಡಲಾಗಿದೆ.

ಯೂಟ್ಯೂಬ್ ಚಾನೆಲ್‌ಗಳ ನಿಷೇಧದ ಬಗ್ಗೆ ಪತ್ರಿಕಾ ಮಾಹಿತಿ ಬ್ಯುರೋ(ಪಿಐಬಿ), ರಾಷ್ಟ್ರೀಯ ಭದ್ರತೆ, ಭಾರತದ ವಿದೇಶಿ ಸಂಬಂಧಗಳು, ದೇಶದ ಕೋಮು ಸೌಹಾರ್ದತೆ ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳ ಕುರಿತು ಸುಳ್ಳು ಸುದ್ದಿಗಳನ್ನು ಹರಡಲು ಈ ಚಾನೆಲ್‌ಗಳನ್ನು ಬಳಸಲಾಗಿತ್ತು ಎಂದಿದೆ. ಬ್ಯಾನ್ ಆಗಿರುವ ಭಾರತೀಯ ಮೂಲದ ಯೂಟ್ಯೂಬ್ ಚ್ಯಾನೆಲ್‌ಗಳು ಭಯೋತ್ಪಾದನೆ, ಧಾರ್ಮಿಕ ಸಮುದಾಯಗಳ ನಡುವೆ ದ್ವೇಷ, ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವ ಕೆಲಸಕ್ಕೆ ಕೈ ಹಾಕಿದೆ. ಪರಿಶೀಲಿಸಲಾದ ಕೆಲವು ಸುದ್ದಿಗಳು ಸಮಾಜದ ವಿವಿಧ ವರ್ಗಗಳನ್ನು ಭಯಭೀತಗೊಳಿಸುವ ಸಾಮರ್ಥ್ಯ ಹೊಂದಿವೆ ಎಂದು ಕೇಂದ್ರ ತಿಳಿಸಿದೆ.

ಒಂದನೇ ಪುಟದಿಂದ

ಭಾರೀ ಅಕ್ರಮ

ಒಟ್ಟಾರೆ ಪರಿಶೀಲನಾ ಕಾರ್ಯವನ್ನು ಆದಷ್ಟು ಬೇಗ ಮುಗಿಸಿ ಯಾವ ಮಟ್ಟದಲ್ಲಿ ಅಕ್ರಮ ನಡೆದಿದೆ ಎಂಬ ಮಾಹಿತಿ ತಿಳಿದ ನಂತರ ತನಿಖೆ ಮಾಡಿಸಲಾಗುವುದು. ವರದಿ ಬಂದ ನಂತರ ಅದರಲ್ಲಿ ಭಾಗಿಯಾಗಿರುವ ಅಧಿಕಾರಿ, ಸಿಬ್ಬಂದಿ, ಮಧ್ಯವರ್ತಿಗಳು ಯಾರೇ ಇರಲಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಐವರು ವಿಶೇಷ ತಹಸೀಲ್ದಾರ್, ಓರ್ವ ಸಹಾಯಕ ಕಾರ್ಯದರ್ಶಿ, ಇಬ್ಬರು ಡೇಟಾ ಎಂಟ್ರಿ ಆಪರೇಟರ್‌ಗಳು ಹಾಗೂ ಇಬ್ಬರು 'ಡಿ' ಗ್ರೂಪ್ ನೌಕರರನ್ನೊಳಗೊಂಡ ತಂಡವು ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದು, ಕಾರ್ಯದರ್ಶಿ ವೆಂಕಟರಾಜು ಅದರ ನೇತೃತ್ವ ವಹಿಸಿಕೊಂಡಿದ್ದಾರೆ ಎಂದರು.

ವಿವಿಧ ಬಡಾವಣೆಗಳಲ್ಲಿನ ನಿವೇಶನ ಹಂಚಿಕೆ ಸಂಬಂಧ ನಿರ್ವಹಿಸಲಾದ ಲೆಡ್ಜರ್‌ಗಳಲ್ಲಿ ಹರಾಜಾದ ನಿವೇಶನಗಳ ಮಾಹಿತಿ ನಮೂದಾಗಿದ್ದು, ಭೂಮಿ ಕಳೆದುಕೊಂಡವರಿಗೆ ನೀಡಲಾದ ಪ್ರೋತ್ಸಾಹದಾಯಕ ನಿವೇಶನಗಳ ಮಾಹಿತಿ ಇರುವುದೂ ಪರಿಶೀಲನೆ ವೇಳೆ ಕಂಡು ಬಂದಿದೆ. ಕೆಲವು ಕಡತಗಳಲ್ಲಿ ಯಾವುದೇ ಮಾಹಿತಿಯೂ ಇಲ್ಲದೇ ಖಾಲಿ ಬಿಟ್ಟಿದ್ದು, ಲಭ್ಯವೇ ಇಲ್ಲದ ಕಡತಗಳನ್ನು ಅಭಿಲೇಖಾಲಯದಿಂದ ಪಡೆದು ಅವುಗಳ ನೈಜತೆ ಮತ್ತು ವಿವರಗಳನ್ನು ಬೇರೆ ಕಡತದಲ್ಲಿ ನಮೂದಿಸಿರುವುದೂ ತಿಳಿದುಬಂದಿದೆ ಎಂದು ರಾಜೀವ್ ಹೇಳಿದರು. ಮುಡಾ ಮತ್ತು ಸಿಐಟಿಬಿಯಿಂದ ಈವರೆಗೆ 96,000 ನಿವೇಶನಗಳ ಹಂಚಿಕೆ ಮಾಡಲಾಗಿದ್ದು, ಆ ಪೈಕಿ ನಕಲಿ ದಾಖಲೆ ಸೃಷ್ಟಿಸಿ ಕೆಲವು ನಿವೇಶನಗಳನ್ನು ಪರಭಾರೆ ಮಾಡಿದ್ದು, ಹೀಗೆ ಖರೀದಿಸಿದವರು ಬೇರೆಯವರಿಗೆ ಮಾರಾಟ ಮಾಡಿರುವ ಪ್ರಕರಣಗಳೂ ಇವೆ. ಕೆಲವರು ಮನೆ ಕಟ್ಟಿ ಮಾರಿದ್ದಾರೆ. ಆದರೆ ಖರೀದಿಸಿದವರಿಗೆ ತೊಂದರೆಯಾಗುತ್ತಿದೆ ಎಂದು ನುಡಿದರು. ಮುಡಾ ಕಾರ್ಯದರ್ಶಿ ವೆಂಕಟರಾಜು, ಸದಸ್ಯರಾದ ಲಕ್ಷ್ಮೀದೇವಿ, ಮಾದೇಶ್, ನವೀನ್‌ಕುಮಾರ್, ನಿಂಗಣ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಳ್ಳರ ಕೈವಾಡವೇ ಹೆಚ್ಚಿದೆ!

ಯಾವ ಅವಧಿಯಲ್ಲಿ ಯಾರ್ಯಾರು ಈ ದಾಖಲೆಗಳನ್ನು ನೋಡಿಕೊಳ್ಳುತ್ತಿದ್ದರು? ಆ ವೇಳೆ ಎಷ್ಟೆಷ್ಟು ನಿವೇಶನಗಳು ಪರಭಾರೆಯಾಗಿವೆ ಎಂಬುದರ ಬಗ್ಗೆ ವಿಶೇಷ ತಂಡವು ಪರಿಶೀಲನೆ ನಡೆಸುತ್ತಿದ್ದು, ಸಮಗ್ರ ವರದಿ ಬಂದ ಮೇಲೆ ತಪ್ಪಿತಸ್ಥರು ಯಾರು ಎಂಬುದು ತಿಳಿಯುತ್ತದೆ ಎಂದು ಹೇಳಿದರು. ಪರಿಶೀಲನೆಯನ್ನು ತರಾತುರಿಯಾಗಿ ಮಾಡಲಾಗದು. ಪ್ರತಿಯೊಂದು ಲೆಡ್ಜರ್, ಕಡತಗಳಲ್ಲಿನ ಪ್ರತಿ ಹಾಳೆಗಳ ಪುಟಗಳನ್ನೂ ನೋಡಿ ಸ್ಕ್ಯಾನ್ ಮಾಡಿ ಅದರ ಮಾಹಿತಿಯನ್ನು ಪ್ರತ್ಯೇಕವಾಗಿ ದಾಖಲಿಸುತ್ತಿರುವುದರಿಂದ ಪ್ರಕ್ರಿಯೆ ವಿಳಂಬವಾಗುತ್ತದೆ. ಮೂಲ ಕಡತಗಳೊಂದಿಗೆ ತಾಳೆ ಮಾಡಿ ಕಂಡು ಬರುವ ಲೋಪದೋಷಗಳನ್ನು ಪಟ್ಟಿ ಮಾಡಲಾಗುತ್ತದೆ. ದಾಖಲೆಗಳಿಗೆ ಸಹಿ ಮಾಡಿರುವ ಅಧಿಕಾರಿ, ಕೇಸ್ ವರ್ಕರ್‌ಗಳಾರು ಎಂಬುದನ್ನೂ ಪತ್ತೆ ಮಾಡಲಾಗುತ್ತದೆ ಎಂದ ಅವರು, ಈ ಹಗರಣದಲ್ಲಿ ಹೊರಗಿನವರಿಗಿಂತ ಮುಡಾ ಕಚೇರಿ ಒಳಗಿನ ಕಳ್ಳರ ಕೈವಾಡವೇ ಪ್ರಧಾನವಾಗಿದೆ ಎಂದರು.

ಮಾನ್ಯತೆ ಹಿಂಪಡೆದ ಶಾಲೆಗಳಿಗೆ ರಿಲೀಫ್

ಮಾನ್ಯತೆ ಹಿಂಪಡೆಯಲಾಗಿರುವ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ವಿ ಳಿಗೆ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ಆಯಾ ಶಾಲೆಗಳ ಹೆಸರು ನಮೂದಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಿದೆ. ವಿವೇಕನಗರದ ಶಾಂತಿ ನಿಕೇತನ ಪ್ರೌಢಶಾಲೆ ಸೇರಿ 8 ಶಾಲೆಗಳು, ಶಾಶ್ವತ ಮಾನ್ಯತೆ ಇದ್ದರೂ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಶಾಲೆಗಳ ಮಾನ್ಯತೆ ಹಿಂಪಡೆದಿವೆ ಎಂದು ಆಕ್ಷೇಪಿಸಿ ಈ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ. ಕೃಷ್ಣ ಭಟ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಎಸ್‌ಎಸ್‌ಎಲ್‌ಸಿ ಬೋರ್ಡ್‌ಗೆ ನ್ಯಾಯಾಲಯ ನಿರ್ದೇಶನ: ಅರ್ಜಿದಾರ ಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಫಲಿತಾಂಶ ಪಟ್ಟಿಯಲ್ಲಿ ಆಯಾ ಶಾಲೆಗಳ ಹೆಸರು ನಮೂದಿಸುವಂತೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಹಾಗೂ ನಿರ್ದೇಶಕರು, ಎಸ್‌ಎಸ್‌ಎಲ್‌ಸಿ ಬೋರ್ಡ್‌ಗೆ ನ್ಯಾಯಾಲಯ ನಿರ್ದೇಶನ ನೀಡಿದೆ.

ಮೃಗಾಲಯಕ್ಕೆ ಮತ್ತೆರಡು ಬ್ಯಾಟರಿ ಚಾಲಿತ ವಾಹನ

ಕೆಎಸ್‌ಐಐಡಿಸಿ ಸಿಎಸ್‌ಆರ್ ನಿಧಿಯಿಂದ ಕೊಡುಗೆ



ಮೈಸೂರು,ಏ.25(ಎಸ್‌ಬಿಡಿ)– ಮೈಸೂರು ಚಾಮರಾಜೇಂದ್ರ ಮೃಗಾಲಯ ವೀಕ್ಷಣೆಗೆ ಮತ್ತೆರಡು ಬ್ಯಾಟರಿ ಚಾಲಿತ ವಾಹನಗಳು ಇಂದಿನಿಂದ ಸೇವೆ ಆರಂಭಿಸಿವೆ.

ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ(ಕೆಎಸ್‌ಐಐಡಿಸಿ), ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಲಿಟಿ (ಉದ್ಯಮ ಕ್ಷೇತ್ರದ ಸಾಮಾಜಿಕ ಹೊಣೆಗಾರಿಕೆ –ಸಿಎಸ್‌ಆರ್) ನಿಧಿಯಡಿ ಒಟ್ಟು 10 ಲಕ್ಷ ರೂ. ವೆಚ್ಚದ 2 ಬ್ಯಾಟರಿ ಚಾಲಿತ ವಾಹನ ಗಳನ್ನು ಮೃಗಾಲಯಕ್ಕೆ ನೀಡಿದ್ದು, ನಿಗಮದ ಅಧ್ಯಕ್ಷ ಡಾ.ಶೈಲೇಂದ್ರ ಕೆ.ಬೆಲ್ದಾಳೆ ವಾಹನಗಳ ಕೀಯನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ ಅವರಿಗೆ ಹಸ್ತಾಂತರಿಸಿದರು.


ಈ ವೇಳೆ ಡಾ.ಶೈಲೇಂದ್ರ ಕೆ.ಬೆಲ್ದಾಳೆ ಮಾತನಾಡಿ, ಮೃಗಾಲಯ ವೀಕ್ಷಣೆಗೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಬ್ಯಾಟರಿ ಚಾಲಿತ ವಾಹನಗಳನ್ನು ಕಲ್ಪಿಸುವಂತೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರು, ನಮ್ಮ ನಿಗಮಕ್ಕೆ ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ನಿಗಮದ ಸಿಎಸ್‌ಆರ್ ನಿಧಿಯಲ್ಲಿ ವಾಹನಗಳನ್ನು ಮೃಗಾಲಯಕ್ಕೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅನುದಾನ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಕಲ್ಯಾಣ ಕರ್ನಾಟಕ ಭಾಗದಲ್ಲಿಯೂ ಮೃಗಾಲಯ ಸ್ಥಾಪಿಸುವಂತೆ ಅಧ್ಯಕ್ಷರಲ್ಲಿ ಮನವಿ ಮಾಡಲಾಗಿದ್ದು, ಅದಕ್ಕಾಗಿ ನಮ್ಮ ನಿಗಮವೂ ಸಹಕಾರ ನೀಡಲು ಸಿದ್ಧವಿದೆ ಎಂದು ಭರವಸೆ ನೀಡಿದರು.

ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಮೃಗಾಲಯದ ಅಭಿವೃದ್ಧಿಗಾಗಿ ಸರ್ಕಾರದ ಹಲವು ನಿಗಮ ಮಂಡಳಿಗಳು ಸೇರಿದಂತೆ ಕೈಗಾರಿಕೆಗಳಿಂದ ಸಿಎಸ್‌ಆರ್ ಅನುದಾನ ನೀಡುವಂತೆ ಮನವಿ ಮಾಡಲಾಗಿದ್ದು, ಉತ್ತಮ ಸ್ಪಂದನೆ ಸಿಕ್ಕಿದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದಿಂದ ಮೊದಲ ಹಂತದಲ್ಲಿ 10 ಲಕ್ಷ ರೂ. ಅನುದಾನ ನೀಡಿದ್ದು, ಇನ್ನೂ 50 ಲಕ್ಷ ರೂ. ಅನುದಾನ ನೀಡುವಂತೆ ಕೋರಲಾಗಿದೆ ಎಂದು ತಿಳಿಸಿದರು.

ಪ್ರವಾಸಿಗರ ಅನುಕೂಲಕ್ಕಾಗಿ ಈಗಾಗಲೇ 14 ಬ್ಯಾಟರಿ ಚಾಲಿತ ವಾಹನಗಳಿದ್ದು, ಈಗ ಹೊಸದಾಗಿ ಎರಡು ವಾಹನಗಳು ಸೇರ್ಪಡೆಯಾಗಿವೆ. ಇಲ್ಲಿನ ಪ್ರಾಣಿ–ಪಕ್ಷಿಗಳಿಗೆ ಕಿರಿಕಿರಿ ಉಂಟು ಮಾಡದ ಹಾಗೂ ಪರಿಸರ ಸ್ನೇಹಿ ವಾಹನಗಳ ಸೇವೆಯಿಂದ ಪ್ರವಾಸಿಗರಿಗೂ ತುಂಬಾ ಅನುಕೂಲವಾಗಲಿದೆ. ಹಿರಿಯ ನಾಗರಿಕರು, ಮಕ್ಕಳು ಸೇರಿದಂತೆ ಅಗತ್ಯವಿದ್ದವರು ವಾಹನಗಳ ಸೇವೆ ಪಡೆಯಬಹುದು ಎಂದು ಹೇಳಿದರು.

ಈ ವೇಳೆ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ. ಆರ್.ರವಿ, ನಿರ್ದೇಶಕ ಎಸ್.ಮಹದೇವ ಸ್ವಾಮಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿಜಯ್‌ಕುಮಾರ್ ಗೋಗಿ, ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ಉಪಸ್ಥಿತರಿದ್ದರು. ಬ್ಯಾಟರಿ ಚಾಲಿತ ವಾಹನಗಳಲ್ಲಿ ಮೃಗಾಲಯ ವೀಕ್ಷಿಸಲು ಮಕ್ಕಳು ಹಾಗೂ ಹಿರಿಯ ನಾಗರಿಕರಿಗೆ ತಲಾ 90 ರೂ. ಮತ್ತು ವಯಸ್ಕರರಿಗೆ ತಲಾ 150 ರೂ. ನಿಗದಿಪಡಿಸಲಾಗಿದೆ.

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಹೆಸರು ನಾಮಕರಣಕ್ಕೆ ಆಗ್ರಹ



ಮೈಸೂರು, ಏ.25– ಶಿವಮೊಗ್ಗದ ವಿಮಾನ ನಿಲ್ದಾಣಕ್ಕೆ ರಾಷ್ಟಕವಿ ಕುವೆಂಪು ಅವರ ಹೆಸರನ್ನು ನಾಮಕರಣ ಮಾಡುವಂತೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ ಒತ್ತಾಯಿಸಿದ್ದಾರೆ

"ಜಯ ಭಾರತ ಜನನಿಯ ತನುಜಾತೆ...."

ಎಲ್ಲಾದರು ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು.....

ಓ ನನ್ನ ಚೇತನ ಆಗು ನೀ ಅನಿಕೇತನ.....

ಹೀಗೆ ರಾಷ್ಟ್ರಕವಿ ಕುವೆಂಪು ಅವರ ಹಲವಾರು ಕವನಗಳು ಕನ್ನಡಿಗರ ಮನೆಮಾತಾಗಿ, ಕನ್ನಡದ ಕಂಪನ್ನು ಸಾರಿದ್ದಾರೆ. ಕನ್ನಡ ನಾಡಿನಲ್ಲಿ ಕನ್ನಡಿಗರೇ ಸಾರ್ವಭೌಮರು ಎಂದು ಬಯಸುವ ಕರ್ನಾಟಕದ ಜನತೆಯ ಭಾವನೆಯಂತೆ ಇವರ ಹೆಸರನ್ನು ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡುವ ಮೂಲಕ ಕನ್ನಡಿಗರ ಅಭಿಮಾನ ಪೂರ್ವಕ ಬೇಡಿಕೆಗೆ ಮನ್ನಣೆ ನೀಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಮನವಿ ಮಾಡಿದ್ದಾರೆ.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಮಧುರ ಗಾನ ಕಲಾವೃಂದದ ವತಿಯಿಂದ ಸೋಮವಾರ ನಡೆದ '15ನೇ ಎರಡು ನಕ್ಷತ್ರಗಳ ರಸ ಸಂಜೆ' ಕಾರ್ಯಕ್ರಮದಲ್ಲಿ 'ಎರಡು ನಕ್ಷತ್ರಗಳು' ವಿಶೇಷ ಸಂಚಿಕೆ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಮೇಲುಕೋಟೆಯ ವೆಂಗೀಪುರ ಮಠದ ಇಳೈಆಳ್ವಾರ್ ಸ್ವಾಮೀಜಿ, ನಾಡೋಜ ಟಿ.ವಿ.ವೆಂಕಟಾಚಲಶಾಸ್ತ್ರಿ, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಿ.ಎಸ್.ಗಣೇಶ್ ಮತ್ತಿತರರಿದ್ದರು.



ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಸೋಮವಾರ ಕುಟುಂಬ ಸಮೇತ ಕಬಿನಿ ವನ್ಯಜೀವಿ ಧಾಮದಲ್ಲಿ ವಿಹರಿಸಿದರು. ಮೈಸೂರು ಎಸ್‌ಪಿ ಚೇತನ್, ಡಿಸಿಎಫ್ ಮಹೇಶ್, ಡಿಎಸ್‌ಪಿ ಸುಮೀತ್, ಹುಣಸೂರು ಉಪವಿಭಾಗದ ಎಸಿ ವರ್ಣಿತ್ ನೇಗಿ ಮತ್ತಿತರರಿದ್ದರು.

ದೇಶಭಕ್ತಿ ಗೀತೆ ಸ್ಪರ್ಧೆ ಪೋಸ್ಟರ್ ಬಿಡುಗಡೆ



ಮೈಸೂರು, ಏ.25(ಎಸ್‌ಬಿಡಿ)– ಬಿಜೆಪಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಯುವ ಮೋರ್ಚಾ ವತಿಯಿಂದ ಭಗತ್ ಸಿಂಗ್ ಹಾಗೂ ಸ್ವಾಮಿ ವಿವೇಕಾನಂದರ ಸ್ಮರಣಾರ್ಥ ದೇಶಭಕ್ತಿ ಗೀತೆ ಸ್ಪರ್ಧೆ ಏರ್ಪಡಿಸಿದ್ದು, ಇದರ ಪೋಸ್ಟರ್ ಅನ್ನು ಬಿಜೆಪಿ ಯುವ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಸಂದೀಪ್ ಕುಮಾರ್ ಹಾಗೂ ಮೈಸೂರು ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಸೋಮವಾರ ಬಿಡುಗಡೆ ಮಾಡಿದರು.

ಈ ವೇಳೆ ಡಾ.ಸಂದೀಪ್ ಕುಮಾರ್ ಮಾತನಾಡಿ, ಭಗತ್ ಸಿಂಗ್ ಹಾಗೂ ಸ್ವಾಮಿ ವಿವೇಕಾನಂದರ ಸಾಧನೆ ಹಾಗೂ ಅವರ ಆದರ್ಶವನ್ನು ಯುವ ಪೀಳಿಗೆಗೆ ಮನವರಿಕೆ ಮಾಡುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಮಕ್ಕಳಿಗೆ ದೇಶಭಕ್ತಿ ಗೀತೆ ಸ್ಪರ್ಧೆ ನಡೆಸುತ್ತಿರುವುದು ಶ್ಲಾಘನೀಯ. ದೇಶಭಕ್ತಿ ಹಾಡುಗಳು ಎಂದಿಗೂ ನಮ್ಮ ನೈತಿಕತೆಯನ್ನು ಕಾಪಾಡುವುದರ ಜೊತೆಗೆ ರಾಷ್ಟ್ರಭಕ್ತಿ ಹಾಗೂ ರಾಷ್ಟ್ರಪ್ರೀತಿಯನ್ನು ಜಾಗೃತಗೊಳಿಸುತ್ತವೆ ಎಂದು ಅಭಿಪ್ರಾಯಿಸಿದರು.

ಈ ಸಂದರ್ಭದಲ್ಲಿ ರಾಮಜನ್ಮಭೂಮಿ ಟ್ರಸ್ಟ್ ರಾಜ್ಯಾಧ್ಯಕ್ಷ ವೆಂಕಟರಾಮು, ಬಿಜೆಪಿ ರಾಜ್ಯ ಯುವಮೋರ್ಚಾ ಉಪಾಧ್ಯಕ್ಷರಾದ ಧೀರಜ್ ಪ್ರಸಾದ್ ಹಾಗೂ ಜಯಶಂಕರ್, ಮೈಸೂರು ನಗರ ಯುವಮೋರ್ಚಾ ಅಧ್ಯಕ್ಷ ಕಿರಣ್ ಗೌಡ, ಉಪಾಧ್ಯಕ್ಷ ಕೆ.ಎಂ.ನಿಶಾಂತ್, ನರಸಿಂಹರಾಜ ಕ್ಷೇತ್ರದ ಅಧ್ಯಕ್ಷ ಡಿ.ಲೋಹಿತ್, ಪ್ರಧಾನ ಕಾರ್ಯದರ್ಶಿಗಳಾದ ಧನರಾಜ್ ಹಾಗೂ ನವೀನ್ ಶೆಟ್ಟಿ, ಮುಖಂಡರಾದ ರಾಜು, ಮಧುರಾಜ್, ಶ್ರೀಕಂಠ, ಸಚಿನ್, ಮಧು ಮತ್ತಿತರರು ಉಪಸ್ಥಿತರಿದ್ದರು.

ಸ್ಪರ್ಧೆ ಬಗ್ಗೆ: ದೇಶಭಕ್ತಿ ಗೀತೆ ಸ್ಪರ್ಧೆಯಲ್ಲಿ 18 ವರ್ಷದ ಒಳಪಟ್ಟ ಮಕ್ಕಳು ಭಾಗ ವಹಿಸಬಹುದಾಗಿದ್ದು, ಹಾಡಿನ 3 ನಿಮಿಷದ ವಿಡಿಯೋ ತುಣುಕನ್ನು ಮೊ.ಸಂ. 8105078070ಗೆ ವಾಟ್ಸಾಪ್ ಮಾಡಬೇಕು. ಆಯ್ಕೆಯಾದ ಮೊದಲ ಮೂವರಿಗೆ ಕ್ರಮವಾಗಿ 3, 2 ಹಾಗೂ 1 ಸಾವಿರ ರೂ. ನಗದು ಬಹುಮಾನ ಮತ್ತು ಭಾಗವಹಿಸಿದ ಎಲ್ಲರಿಗೂ ನೆನಪಿನ ಕಾಣಿಕೆ ಮತ್ತು ಪ್ರಮಾಣ ಪತ್ರ ವಿತರಿಸಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.



ಡಾ.ರಾಜ್ ಚಿತ್ರಕಲೆ ಸಾರ್ವಜನಿಕ ವೀಕ್ಷಣೆಗೆ



ಮೈಸೂರು,ಏ.25(ಎಸ್‌ಬಿಡಿ)– ಸ್ವ–ಹಸ್ತಾಕ್ಷರವಿರುವ ಡಾ.ರಾಜ್‌ಕುಮಾರ್ ಅವರ ಚಿತ್ರವನ್ನು ಮೈಸೂರಿನ ಚಾಮರಾಜ ವೃತ್ತದ ಬಳಿಯ ಡಾ.ರಾಜ್‌ಕುಮಾರ್ ಉದ್ಯಾನದಲ್ಲಿ ಸಾರ್ವಜನಿಕರ ವೀಕ್ಷಣೆಗೆ ಇಡಲಾಗಿದೆ. ಮೈಸೂರಿನ ಖ್ಯಾತ ವ್ಯಂಗ್ಯಚಿತ್ರಕಾರ ನಾಗೇಂದ್ರ ಬಾಬು ರಚಿಸಿದ ಡಾ.ರಾಜ್‌ಕುಮಾರ್ ಚಿತ್ರಕ್ಕೆ 2000ನೇ ಇಸವಿಯಲ್ಲಿ ಡಾ.ರಾಜ್‌ಕುಮಾರ್ ಅವರೇ ಹಸ್ತಾಕ್ಷರ ಹಾಕಿದ್ದಾರೆ. ಡಾ.ರಾಜ್‌ಕುಮಾರ್ 94ನೇ ಜಯಂತಿ ಸಂದರ್ಭದಲ್ಲಿ ಈ ಅಪರೂಪದ ಚಿತ್ರವನ್ನು ನಾಗೇಂದ್ರ ಬಾಬು, ಡಾ.ರಾಜ್ ಅಭಿಮಾನಿ ಬಳಗಕ್ಕೆ ಹಸ್ತಾಂತರಿಸಿದರು. ಈ ವೇಳೆ ಧಾರ್ಮಿಕ ಮುಖಂಡ ಯೋಗಾನರಸಿಂಹ(ಮುರಳಿ), ವಿಕ್ರಂ ಅಯ್ಯಂಗಾರ್, ಜಯಸಿಂಹ, ಶ್ರೀಧರ್, ಮೈಸೂರು ಜಿಲ್ಲಾ ಡಾ ರಾಜ್ ಅಭಿಮಾನಿ ಬಳಗದ ಮಹದೇವ ಸ್ವಾಮಿ, ರಮೇಶ್, ಸುಚೀಂದ್ರ, ಚಕ್ರಪಾಣಿ ಮತ್ತಿತರರು ಉಪಸ್ಥಿತರಿದ್ದರು.

ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಜಿ: ಏ.30 ಕಡೆಯ ದಿನ

ಮೈಸೂರು, ಏ.25– ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಮೈಸೂರು ತಾಲೂಕಿನ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದ್ದು ಅರ್ಜಿಯನ್ನು ಏಪ್ರಿಲ್ 30ರೊಳಗಾಗಿ ಸಲ್ಲಿಸಲು ತಿಳಿಸಿದೆ.

ವಿದ್ಯಾರ್ಥಿಗಳು ಅವರ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸುವ ಮೂಲಕ ಅರ್ಜಿಯನ್ನು ಇಲಾಖೆಯ ssp.postmatric.karnataka.gov.in ವೆಬ್‌ಸೈಟ್ ಮೂಲಕ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಡಾ.ಬಾಬು ಜಗಜೀವನ್‌ರಾಮ್ ಕಟ್ಟಡ, ಆದಿಪಂಪ ರಸ್ತೆ, ಒಂಟಿಕೊಪ್ಪಲು ಪೂರ್ವ ಬಡಾವಣೆ, ಪಡುವಾರಹಳ್ಳಿ ಮೈಸೂರು–12 ಅಥವಾ ದೂ.ಸಂ:0821–2520910 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಗಮೆಚ್ಚಿದ ಮಗ ಡಾ.ಪುನೀತ್ ರಾಜಕುಮಾರ್ ಕನ್ನಡಿಗರಲ್ಲಿ ಚಿರಸ್ಥಾಯಿ

ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರು, ಏ. 25– ಪ್ರತಿಯೊಬ್ಬರ ಹೃದಯದಲ್ಲೂ ನೆಲೆನಿಂತು ಜಗಮೆಚ್ಚಿದ ಮಗನಾಗಿ ತಮ್ಮ ಬಣ್ಣದ ಬದುಕಿನ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿ ಕನ್ನಡ ಚಿತ್ರರಂಗಕ್ಕೊಂದು ಹೊಸ ಭಾಷ್ಯ ಬರೆದು ಹೋಗಿರುವ ಖ್ಯಾತ ಚಲನಚಿತ್ರ ನಟ ಪುನೀತ್ ರಾಜಕುಮಾರ್ ಅವರು ಕನ್ನಡವಿರುವ ತನಕವೂ ಶಾಶ್ವತವಾಗಿ ಕನ್ನಡಿಗರ ಮನದಲ್ಲಿ ಇದ್ದೇ ಇರುತ್ತಾರೆ ಎಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ನಗರದ ಪಿ.ಆರ್.ಕೆ. ಡ್ಯಾನ್ಸ್ ಸ್ಟುಡಿಯೋ ಮತ್ತು ಅರಿವಿನ ಮನೆ ಮಹಿಳಾ ಬಳಗದ ಸಂಯುಕ್ತ ಆಶ್ರಯದಲ್ಲಿ ಕುವೆಂಪು ನಗರದ ಜ್ಞಾನಭಾರತಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಅಪ್ಪು ನೆನಪುಗಳ ಜೊತೆ ಕರ್ನಾಟಕ ರತ್ನ ಡಾ.ಪುನೀತ್ ರಾಜಕುಮಾರ್ ಡ್ಯಾನ್ಸ್ ಶೋ' ಎಂಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು,ಪದ್ಮಭೂಷಣ ಡಾ. ರಾಜಕುಮಾರ್ ಅವರು ಕನ್ನಡಕ್ಕೊಬ್ಬರೇ ರಾಜಕುಮಾರ್ ಆಗಿದ್ದರೆ ಅವರ ಸುಪುತ್ರ ಪುನೀತ್ ರಾಜಕುಮಾರ್ ಎಂದರು.

ಅಕ್ಷರಶಃ ತಂದೆಗೆ ತಕ್ಕ ಮಗನಾಗಿ, ತಂದೆಯನ್ನೂ ಮೀರಿಸಿದ ಅಪ್ರತಿಮ ಪ್ರತಿಭಾವಂತ ಸುಪುತ್ರನಾಗಿ ಕರ್ನಾಟಕ ಮಾತ್ರವಲ್ಲದೆ ಭಾರತದಿಂದಾಚೆಗೂ ಸಮಾಜಮುಖಿ ಕಲಾವಿದನಾಗಿ ವಿಶ್ವವ್ಯಾಪಿ ಕೀರ್ತಿಗಳಿಸಿದ್ದ ಪುನೀತ್ ರಾಜಕುಮಾರ್ ತನ್ಮೂಲಕ ಕನ್ನಡದ ಹಿರಿಮೆಯನ್ನು ವಿಶ್ವದೆತ್ತರಕ್ಕೂ ಕೊಂಡೊಯ್ದಿದ್ದರು ಎಂದರು.

ಅರಿವಿನ ಮನೆ ಮಹಿಳಾ ಬಳಗದ ಧನ್ಯಾ ಸತ್ಯೇಂದ್ರಮೂರ್ತಿ ಮಾತಾಡಿ, ಮಹಾನಟ ಡಾ.ರಾಜಕುಮಾರ್ ಅವರು ನಾಡಿಗೆ ಕೊಟ್ಟ ಬಹುದೊಡ್ಡ ಕೊಡುಗೆ ಪುನೀತ್ ರಾಜಕುಮಾರ್ ಎಂದು ಹೇಳಿ ಅಪ್ಪು ಅವರನ್ನು ಕುರಿತು ಎರಡು ಅದ್ಭುತವಾದ ಕವಿತೆಗಳನ್ನು ವಾಚಿಸಿ, ಗಮನಸೆಳೆದರು. ಬಿಜೆಪಿ ಮುಖಂಡ ಆರ್.ಸೋಮಶೇಖರ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಮಾತನಾಡಿ ಪುನೀತ್ ರಾಜಕುಮಾರ್ ರಂಥ ಮೇರು ವ್ಯಕ್ತಿತ್ವದ ಹೆಸರಿನಲ್ಲಿ ಇಂತಹ ಅದ್ಭುತವಾದ ಕಾರ್ಯಕ್ರಮ ಆಯೋಜಿಸಿರುವುದು ಅತ್ಯಂತ ಸಾರ್ಥಕವೆಂದು ಶ್ಲಾಘಿಸಿದರು.

ಡ್ಯಾನ್ಸ್ ಕೊರಿಯೋಗ್ರಾಫರ್ ಸಂತೋಷ್ ಸಾರಥ್ಯದಲ್ಲಿ ಪಿ.ಆರ್.ಕೆ. ಡ್ಯಾನ್ಸ್ ಸ್ಟುಡಿಯೋ ಸಂಸ್ಥೆಯ ಮಕ್ಕಳು ಪುನೀತ್ ರಾಜ್ ಕುಮಾರ್ ಚಿತ್ರಗಳ ಹಾಡುಗಳಿಗೆ ಹೆಜ್ಜೆ ಹಾಕಿ ನರ್ತಿಸುವುದರ ಮೂಲಕ ನೆರೆದಿದ್ದವರನ್ನು ರಂಜಿಸಿದರು. ಜೆ.ಪಿ. ನಗರದ ಬಸವ ಫೌಂಡೇಶನ್‌ನ ಅಧ್ಯಕ್ಷ ಯಡಹಳ್ಳಿ ಶಿವ ಪಾದಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಸೇವಕ ರವಿ, ಸಚ್ಚಿದಾನಂದ ಯಡಹಳ್ಳಿ,ಅರಿವಿನಮನೆ ಮಹಿಳಾ ಬಳಗದ ಮಂಜುಳಾ ರವಿ, ಕೊರಿಯೋಗ್ರಾಫರ್ ಸಂತೋಷ್, ಫೋಟೋಗ್ರಾಫರ್ ಮಂಜು, ಆನಂದ ಅರಸನಕೆರೆ, ಬೆಂಗಳೂರಿನ ಸ್ಟೆಪ್ ಅಪ್ ಡ್ಯಾನ್ಸ್ ಫಿಟ್ನೆಸ್ ಅಕಾಡೆಮಿಯ ವರ್ಷಿತಾ (ವರ್ಷ) ಮುಂತಾದವರು ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ವಕೀಲರ ಸಂಘದ ಆಶ್ರಯದಲ್ಲಿ ಹಿರಿಯ ವಕೀಲ ಹಾಗೂ ರಾಷ್ಟ್ರೀಯ ಕಬಡ್ಡಿ ಆಟಗಾರ ಸಿ.ಬಸವರಾಜು ನಿರ್ಮಿಸಿರುವ 'ಆರೋಗ್ಯವೇ ಭಾಗ್ಯ' ಡಿವಿಡಿಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎನ್. ರಘುನಾಥ್ ಬಿಡುಗಡೆ ಮಾಡಿದರು. ಈ ವೇಳೆ ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಉಮೇಶ್, ಕರ್ನಾಟಕ ರಾಜ್ಯ ಪರಿಷತ್ ಉಪಾಧ್ಯಕ್ಷ ಆರ್.ಚಂದ್ರಮೌಳಿ ಸೇರಿದಂತೆ ಹಿರಿಯ ವಕೀಲರು ಉಪಸ್ಥಿತರಿದ್ದರು.

ದೇವಮ್ಮ ನಿಧನ



ಮೈಸೂರು,ಏ.25– ಮೈಸೂರಿನ ಕೆ.ಜಿ.ಕೊಪ್ಪಲಿನ ಲೇಟ್ ಗಂಗೆ ಮರಿಯಪ್ಪ ಅವರ ಪತ್ನಿ ದೇವಮ್ಮ(ಚಿಕ್ಕೋಳಮ್ಮ–83) ಅವರು ಸೋಮವಾರ ಸಂಜೆ ನಿಧನರಾದರು.

ಇವರು ಐವರು ಪುತ್ರರು, ಐವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ ಬೆಳಗ್ಗೆ 11.30ಕ್ಕೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀರಂಗಪಟ್ಟಣದಲ್ಲಿ ಯಶಸ್ವಿ ಆರೋಗ್ಯ ಮೇಳ



ಶ್ರೀರಂಗಪಟ್ಟಣ,ಏ.25(ವಿನಯ್ ಕಾರೇಕುರ)– ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಪಟ್ಟಣದಲ್ಲಿ ತಾಲೂಕು ಮಟ್ಟದ ಬೃಹತ್ ಆರೋಗ್ಯ ಮೇಳ ಯಶಸ್ವಿಯಾಗಿ ನಡೆಯಿತು.

ಪಟ್ಟಣದ ಗಂಜಾಂ ರಸ್ತೆಯಲ್ಲಿನ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಲಾಗಿದ್ದ ಮೇಳವನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಉಚಿತ ಶ್ರವಣ ಉಪಕರಣಗಳನ್ನು ಅರ್ಹ ಫಲಾನುಭವಿಗಳಿಗೆ ವಿತರಣೆ ಮಾಡಿ ಮಾತನಾಡಿದ ಶಾಸಕ ರವೀಂದ್ರ ಶ್ರೀಕಂಠಯ್ಯ, ಸರ್ಕಾರದ ಯೋಜನೆಯನ್ನು ಪ್ರತಿಯೊಬ್ಬರೂ ಸದ್ಬಳಕೆ ಮಾಡಿಕೊಳ್ಳಬೇಕು. ಉಚಿತವಾಗಿ ದೊರೆಯುವ ಔಷಧೋಪಚಾರಗಳನ್ನು ಬಳಸಿಕೊಂಡು ತಮ್ಮ ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳಬೇಕು ಎಂದರು. ಇದೇ ವೇಳೆ ಕೊರೊನಾ ಸಮಯದಲ್ಲಿ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸಿದ ವೈದ್ಯರ ತಂಡ ಹಾಗೂ ಸಿಬ್ಬಂದಿಗೆ ಅಭಿನಂದನೆ ಸಲ್ಲಿಸಿದರು.

ಆರೋಗ್ಯ ಮೇಳದಲ್ಲಿ ಮಕ್ಕಳ ಆರೋಗ್ಯ ತಪಾಸಣೆ, ಕಿವಿ, ಮೂಗು, ಗಂಟಲು ಪರೀಕ್ಷೆ, ಮೂಳೆ ಮತ್ತು ಕೀಲು ಪರೀಕ್ಷೆ ಚರ್ಮರೋಗ ಪರೀಕ್ಷೆ, ದಂತ ಪರೀಕ್ಷೆ, ಕಣ್ಣಿನ ಪರೀಕ್ಷೆ, ಆಯುಷ್ ಸೇವೆ, ಹೃದಯ ಪರೀಕ್ಷೆ, ಸ್ತ್ರೀ ಆರೋಗ್ಯ ತಪಾಸಣೆ, ಸಕ್ಕರೆ ಕಾಯಿಲೆ, ರಕ್ತದೊತ್ತಡ, ಮೂತ್ರ ಹೆಚ್‌ಐವಿ, ಪರೀಕ್ಷೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್‌ಗಳ ಉಚಿತ ಸೌಲಭ್ಯ ಹಾಗೂ ಕೋವಿಡ್ ಲಸಿಕೆ, ಯೋಗ ಶಿಬಿರ, ಆಹಾರ ಸುರಕ್ಷತೆ ಬಗ್ಗೆ ಪ್ರಾತ್ಯಕ್ಷತೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವತಿಯಿಂದ ಪೌಷ್ಟಿಕ ಆಹಾರ ಪ್ರಾತ್ಯಕ್ಷತೆ ಏರ್ಪಡಿಸಲಾಗಿತ್ತು. ಸಾರ್ವಜನಿಕರಿಗೆ ಅಗತ್ಯ ಔಷಧಿಗಳನ್ನು ಉಚಿತವಾಗಿ ವಿತರಿಸಲಾಯಿತು.

ಮೇಳದಲ್ಲಿ 4430 ಜನ ತಪಾಸಣೆಗೊಳಪಟ್ಟು, 2680 ಜನ ಅಸಾಂಕ್ರಾಮಿಕ ರೋಗಗಳ ತಪಾಸಣೆಗೊಳಪಟ್ಟರು. 310 ಜನ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್‌ಗಳ ಉಚಿತ ಸೌಲಭ್ಯ ಪಡೆದರು, 160 ಜನ ಡಿಜಿಟಲ್ ಆರೋಗ್ಯ ಕಾರ್ಡ್ ಸೌಲಭ್ಯ ಪಡೆದರು. ಇದೇ ವೇಳೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿ, ಕರಪತ್ರ ವಿತರಿಸಲಾಯಿತು. ಜೊತೆಗೆ ಜಾನಪದ ಕಲಾ ತಂಡದ ಮೂಲಕ ಮನರಂಜನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಜಿಲ್ಲಾಧಿಕಾರಿ ಎಸ್.ಅಶ್ವತಿ, ಸಿಇಒ ದಿವ್ಯ ಪ್ರಭು, ತಹಸೀಲ್ದಾರ್ ಶ್ವೇತಾ ಎನ್. ರವೀಂದ್ರ, ತಾ.ಪಂ ಪ್ರಭಾರ ಇಒ ನಿಶಾಚಿತ್ ಕೀಲಾರ, ತಾಲೂಕು ಆರೋಗ್ಯಾಧಿಕಾರಿ ಡಾ. ಎನ್.ಕೆ ವೆಂಕಟೇಶ್, ಮುಖ್ಯ ವೈದ್ಯಾಧಿಕಾರಿ ಡಾ.ಮಾರುತಿ, ಪುರಸಭೆ ಅಧ್ಯಕ್ಷೆ ನಿರ್ಮಲಾ, ಉಪಾಧ್ಯಕ್ಷ ಕೃಷ್ಣಪ್ಪ, ಮುಖ್ಯಾಧಿಕಾರಿ ಮಹದೇವಯ್ಯ, ಸ್ಥಳೀಯ ಜನಪ್ರತಿನಿಧಿಗಳು, ಜಿಲ್ಲಾ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಜಲ ಜೀವನ್ ಮಿಷನ್ ಯಶಸ್ಸಿಗೆ ಸಹಕಾರ ಅಗತ್ಯ



ಮಂಡ್ಯ,ಏ.25(ಮೋಹನ್‌ರಾಜ್)– ಗ್ರಾಮೀಣ ಪ್ರದೇಶದ ಪ್ರತಿಯೊಬ್ಬರಿಗೂ ಪ್ರತಿದಿನ 55 ಲೀಟರ್ ನೀರು ಒದಗಿಸುವ ಮಹತ್ವಾಕಾಂಕ್ಷೆಯಿಂದ ಅನುಷ್ಠಾನಗೊಳಿಸುತ್ತಿರುವ ಜಲ ಜೀವನ್ ಮಿಷನ್ ಯಶಸ್ಸಿಗೆ ಸಮುದಾಯದ ಸಹಕಾರ ಬೇಕು ಎಂದು ಜಿಲ್ಲಾ ಪಂಚಾಯತ್ ಸಿಇಒ ಜಿ.ಆರ್.ಜೆ. ದಿವ್ಯಾ ಪ್ರಭು ಹೇಳಿದರು.

ನಗರದ ಹೊರವಲಯದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಜಲ ಜೀವನ್ ಮಿಷನ್ ಯೋಜನೆ ಅನುಷ್ಠಾನ ಹಂತದಲ್ಲಿನ ತಾಂತ್ರಿಕ ಅಂಶಗಳ ಕುರಿತು ತಾಂತ್ರಿಕ ಸಿಬ್ಬಂದಿಗಳಿಗೆ ಆಯೋಜಿಸಿದ್ದ ಎರಡು ದಿನಗಳ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮಕ್ಕೆ ಏನು ಬೇಕು ಎಂಬುದನ್ನು ಪರಿಗಣಿಸಿ ಸಮಗ್ರ ಯೋಜನಾ ವರದಿ (ಡಿಪಿಆರ್) ಅನ್ನು ಒಳಗೊಂಡ ಗ್ರಾಮಕ್ರಿಯಾ ಯೋಜನೆ ಸಿದ್ಧಪಡಿಸಬೇಕು ಹಾಗೂ ಕಾಮಗಾರಿ ಅನುಷ್ಠಾನದ ಪ್ರತಿ ಹಂತದಲ್ಲೂ ಗುಣಮಟ್ಟ ಕುರಿತು ಎಚ್ಚರಿಕೆ ವಹಿಸಬೇಕು ಎಂದು ತಾಂತ್ರಿಕ ಸಿಬ್ಬಂದಿಗಳಿಗೆ ಸಲಹೆ ನೀಡಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮೈಸೂರು ವೃತ್ತದ ಅಧೀಕ್ಷಕ ಎಂಜಿನಿಯರ್ ಎಂ.ಎನ್. ಕೃಷ್ಣಮೂರ್ತಿ ಮಾತನಾಡಿ, ತಾಂತ್ರಿಕ ಕೌಶಲ್ಯಗಳ ಬಗ್ಗೆ, ಕಾಮಗಾರಿಗಳಲ್ಲಿ ಗುಟಮಟ್ಟ ಕಾಯ್ದುಕೊಳ್ಳುವ ಬಗ್ಗೆ ತರಬೇತಿ ನೀಡಲು ಈ ಕಾರ್ಯಾಗಾರ ಆಯೋಜಿಸಿದ್ದು ತಾಂತ್ರಿಕ ಸಿಬ್ಬಂದಿಗಳು ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಬೆಂಗಳೂರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧೀಕ್ಷಕ ಅಭಿಯಂತರರು ನರಸಿಂಹರಾಜು ಎನ್ ಮಾತನಾಡಿ, ಕೇವಲ ಇಂಜಿನಿಯರ್‌ಗಳಾಗಿ ಕಾಮಗಾರಿಗಳನ್ನು ನಿರ್ವಹಿಸುವುದನ್ನು ಬಿಟ್ಟು ಸಮುದಾಯದೊಂದಿಗೆ ಬೆರೆತು ಅವರಿಗೆ ಅವಶ್ಯಕತೆಗಳಿಗನುಗುಣವಾಗಿ ಕಾಮಗಾರಿ ನಿರ್ವಹಿಸಿ ಸೋಷಿಯಲ್ ಇಂಜಿನಿಯರ್‌ಗಳಾಗಿ ಎಂದು ತಾಂತ್ರಿಕ ಸಿಬ್ಬಂದಿಗಳಿಗೆ ಕಿವಿಮಾತು ಹೇಳಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಚಂದ್ರಶೇಖರ ಮಸಗುಪ್ಪಿ, ನಿವೃತ್ತ ಅಧೀಕ್ಷಕ ಅಭಿಯಂತರ ರಂಗನಾಥ್, ಕಾರ್ಯಪಾಲಕ ಎಂಜಿನಿಯರ್ ತಮ್ಮಣ್ಣ, ಯೋಗೇಶ್, ಕುಮಾರ್ ಇತರರು ಹಾಜರಿದ್ದರು.

ರಾಗಿ ಖರೀದಿ ಕೇಂದ್ರ ತೆರೆಯಲು ಆಗ್ರಹ



ಮದ್ದೂರು,ಏ.25– ಮದ್ದೂರಿನಲ್ಲಿ ರಾಗಿ ಖರೀದಿ ಕೇಂದ್ರವನ್ನು ತೆರೆಯುವಂತೆ ಒತ್ತಾಯಿಸಿ ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ರೈತರು ಪ್ರತಿಭಟನೆ ನಡೆಸಿದರು.

ರಾಗಿ ಖರೀದಿ ಕೇಂದ್ರ ಆರಂಭ ಮಾಡದ ತಾಲೂಕು ಹಾಗೂ ಜಿಲ್ಲಾ ಆಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಮುಖಂಡ ಹಾಗೂ ವಕೀಲರ ಸಂಘದ ಅಧ್ಯಕ್ಷ ಗೊಲ್ಲರದೊಡ್ಡಿ ಸತ್ಯ ಮಾತನಾಡಿ, ರಾಗಿ ಖರೀದಿ ಕೇಂದ್ರವನ್ನು ಅಧಿಕಾರಿಗಳು ತಾಂತ್ರಿಕ ದೋಷದ ನೆಪ ಹೇಳಿ ಆರಂಭ ಮಾಡದೆ ಮಧ್ಯವರ್ತಿಗಳಿಗೆ ಪರೋಕ್ಷವಾಗಿ ಬೆಂಬಲ ನೀಡುತ್ತಿದ್ದಾರೆ ಎಂದು ದೂರಿದರು. ಜಿಲ್ಲಾಧಿಕಾರಿಗಳು ಈಗಾಗಲೇ ಖರೀದಿ ಕೇಂದ್ರ ತೆರೆಯುವಂತೆ ಹೇಳಿಕೆ ನೀಡಿದ್ದರೂ ಸಹ ತಾಲೂಕು ಆಡಳಿತ ಸಮರ್ಪಕವಾಗಿ ಖರೀದಿ ಕೇಂದ್ರ ತೆರೆಯದೆ ದಲ್ಲಾಳಿಗಳ ಪರವಾಗಿ ಕರ್ತವ್ಯ ನಿರ್ವಹಿಸುವ ಮೂಲಕ ರೈತರಿಗೆ ಮೋಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸ್ಥಳಕ್ಕೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ವ್ಯವಸ್ಥಾಪಕಿ ಶೈಲಜಾ ಆಗಮಿಸಿ ರೈತರ ಜತೆ ಮಾತನಾಡಿ, ತಾಂತ್ರಿಕ ದೋಷ ಇರುವುದರಿಂದ ರಾಗಿ ಖರೀದಿ ಕೇಂದ್ರ ತೆರೆದಿರಲಿಲ್ಲ. ಶೀಘ್ರವಾಗಿ ಸರಿಪಡಿಸಿದ ನಂತರ ಖರೀದಿ ಕೇಂದ್ರ ಆರಂಭ ಮಾಡಿ ರೈತರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಮನವಿ ಪತ್ರವನ್ನು ಗ್ರೇಡ್–2 ತಹಸೀಲ್ದಾರ್ ಸೋಮಶೇಖರ್ ಅವರಿಗೆ ನೀಡಿದರು. ರೈತ ಮುಖಂಡರಾದ ಯೋಗಾನಂದ್ ಮರಳಿಗ, ಕೋಡಿಹಳ್ಳಿ ರಮೇಶ್, ವಾಸು, ಸತೀಶ್, ತಮ್ಮಯ್ಯ, ಲೋಕೇಶ್, ಚಂದ್ರಹಾಸ್ ಹಾಗೂ ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ರೈತರು ಪ್ರತಿಭಟನೆಯಲ್ಲಿ ಇದ್ದರು.

ಎಸ್.ನಾಗರಾಜು ನಿಧನ



ಪಾಂಡವಪುರ, ಏ.25– ಟೇಲರ್ಸ್ ನಾಗಣ್ಣ ಎಂದೇ ಖ್ಯಾತರಾಗಿದ್ದ ತಾಲೂಕಿನ ಕೆನ್ನಾಳು ಗ್ರಾಮದ ಎಸ್. ನಾಗರಾಜು(83) ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಹೆಣ್ಣು ಮಕ್ಕಳು, ಓರ್ವ ಮಗ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ ಪಾಂಡವಪುರ ರೈಲ್ವೆ ನಿಲ್ದಾಣದ ಬಳಿ ಅಂತ್ಯಕ್ರಿಯೆ ನೆರವೇರಿತು.

ಬಲಮುರಿಯಲ್ಲಿ ಬೆಂಗಳೂರಿನ ವ್ಯಕ್ತಿ ನೀರುಪಾಲು

ಶ್ರೀರಂಗಪಟ್ಟಣ,ಏ25(ವಿನಯ್‌ಕಾರೇಕುರ)– ತಾಲೂಕಿನ ಬೆಳಗೊಳ ಗ್ರಾಮದ ಬಳಿಯ ಬಲಮುರಿ ಪ್ರವಾಸಿ ತಾಣದಲ್ಲಿನ ಕಾವೇರಿ ನದಿಯಲ್ಲಿ ಮುಳುಗಿ ಬೆಂಗಳೂರು ಬನ್ನೇರುಘಟ್ಟ ರಸ್ತೆಯ ನಿವಾಸಿ ಪುನೀತ್‌ಕುಮಾರ್ (33) ಸಾವನಪ್ಪಿರುವ ಘಟನೆ ಭಾನುವಾರ ಸಂಜೆ ನಡೆದಿದೆ.

ಪುನೀತ್‌ಕುಮಾರ್ ಆಟೋ ಚಾಲಕನಾಗಿದ್ದು, ಭಾನುವಾರ ತನ್ನ ಸ್ನೇಹಿತರ ಜೊತೆಯಲ್ಲಿ ಬಲಮುರಿಗೆ ಪ್ರವಾಸಕ್ಕೆ ಬಂದಿದ್ದ. ಈ ವೇಳೆ ನದಿಯಲ್ಲಿ ಈಜಾಡುತ್ತಿದ್ದಾಗ ಮುಳುಗಿ ಸಾವನ್ನಪ್ಪಿದ್ದಾರೆ.

ಮೃತನ ಜೊತೆ ಬಂದಿದ್ದ ಸ್ನೇಹಿತರು ನೀಡಿದ್ದ ದೂರಿನ ಮೇರೆಗೆ ಕೆ.ಆರ್.ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಸಬ್‌ಇನ್‌ಸ್ಪೆಕ್ಟರ್ ಲಿಂಗರಾಜು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು.

ಸೋಮವಾರ ಮೈಸೂರು ಕೆ.ಆರ್. ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ, ದೇಹವನ್ನು ವಾರಸುದಾರರಿಗೆ ನೀಡಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಗಣಿಗಾರಿಕೆ ವಿರುದ್ಧ ರೈತರ ಪ್ರತಿಭಟನೆ



ಪಾಂಡವಪುರ, ಏ.25– ಗಣಿಗಾರಿಕೆಯಿಂದ ರೈತರ ಬದುಕು ಸಂಕಷ್ಟಕ್ಕೆ ಸಿಲುಕಿದ್ದು, ತಕ್ಷಣ ಗಣಿಗಾರಿಕೆಯನ್ನು ಶಾಶ್ವತವಾಗಿ ನಿಷೇಧಿಸಬೇಕು ಎಂದು ಆಗ್ರಹಿಸಿ ತಾಲೂಕಿನ ಕನಗನಮರಡಿ ಗ್ರಾಮಸ್ಥರು ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಗ್ರಾಮದಿಂದ 12 ಕಿ.ಮೀ ಪಾದಯಾತ್ರೆ ಮೂಲಕ ತಾಲೂಕು ಕಚೇರಿ ತಲುಪಿದ ಪ್ರತಿಭಟನಾಕಾರರು ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಗಣಿ ಮಾಲೀಕರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕೆಪಿಸಿಸಿ ಕಾರ್ಯದರ್ಶಿ ಡಾ.ಎಚ್.ಎನ್.ರವೀಂದ್ರ ಮಾತನಾಡಿ, ಗಣಿಗಾರಿಕೆಗೆ ಅನುಮತಿ ನೀಡುವ ವಿಚಾರದಲ್ಲಿ ಅಧಿಕಾರಿಗಳು ಗಣಿ ಮಾಲೀಕರೊಂದಿಗೆ ಶಾಮೀಲಾಗಿದ್ದಾರೆ. ಗಣಿಗಾರಿಕೆಯಿಂದ ಇಲ್ಲಿನ ವಿಶ್ವೇಶ್ವರಯ್ಯ ಉಪ ನಾಲೆಗಳು, ಕುರಹಟ್ಟಿ ಅಕ್ವಡೆಕ್ (ಮೇಲ್ಗಾಲುವೆ), ಹುಲಿಕೆರೆ ಸುರಂಗ ಕಾಲುವೆ, ಸೇತುವೆ ಇತ್ಯಾದಿಗಳಿಗೆ ಅಪಾಯ ಎದುರಾಗಿದೆ. ಆದ್ದರಿಂದ ಗಣಿಗಾರಿಕೆಗೆ ಅನುಮತಿ ನೀಡಬಾರದು ಎಂದು ನೀರಾವರಿ ಇಲಾಖೆ ಅಧಿಕಾರಿಗಳು ಪತ್ರ ಬರೆದಿದ್ದಾರೆ. ಗಣಿಗಾರಿಕೆಯಿಂದ ಏನಾದರೂ ಅಪಾಯ ಸಂಭವಿಸಿದರೆ 1.75 ಲಕ್ಷ ಎಕರೆ ಪ್ರದೇಶದ ಭೂಮಿ ಬರಡಾಗಲಿದೆ ಅರಣ್ಯ ಇಲಾಖೆಯ ಮುಖ್ಯಸ್ಥರು ಗಣಿಗಾರಿಕೆಯಿಂದ ಅರಣ್ಯದಲ್ಲಿನ ಚಿರತೆ, ಕೃಷ್ಣಮೃಗ ಸೇರಿದಂತೆ ಇತರೆ ವನ್ಯಜೀವಿಗಳಿಗೆ ಅಪಾಯವಿದೆ ಎಂದಿದ್ದಾರೆ. ಆದರೂ, ಎಲ್ಲವನ್ನು ಮೀರಿ ಅಧಿಕಾರಿಗಳು ಗಣಿಗಾರಿಕೆಗೆ ಅನುಮತಿ ನೀಡಿದ್ದಾರೆ ಎಂದು ಆರೋಪಿಸಿದರು.

ಅಧಿಕಾರ ವಿಕೇಂದ್ರೀಕರಣದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವಿದೆ. ಸ್ಥಳೀಯ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಗಣಿಗಾರಿಕೆ ಸ್ಥಗಿತಗೊಳಿಸುವಂತೆ ನಿರ್ಣಯ ಕೈಗೊಂಡಿದ್ದ ವಿದ್ಯುತ್ ಸಂಪರ್ಕ ಪಡೆಯಲು ಪಂಚಾಯಿತಿಯಿಂದ ಎನ್‌ಒಸಿ ನೀಡಿಲ್ಲ. ಆದರೂ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಎಂದರಲ್ಲದೇ, ಪಾಪದ ಹಣ ಪಡೆದಿರುವ ಅಧಿಕಾರಿಗಳು ಇದಕ್ಕೆ ಪ್ರಾಯಶ್ಚಿತ ಪಡಬೇಕಾಗುತ್ತದೆ. ಪಾದಯಾತ್ರೆ ಸಂದರ್ಭದಲ್ಲಿ ಟ್ರಾಫಿಕ್ ನಿಯಂತ್ರಿಸಲು ಪೊಲೀಸರನ್ನು ನಿಯೋಜನೆ ಮಾಡಿರಲಿಲ್ಲ. ಒಂದು ವೇಳೆ ಪ್ರತಿಭಟನಾಕಾರರು ಮತ್ತು ಸಾರ್ವಜನಿಕರ ನಡುವೆ ಗಲಾಟೆ ಸಂಭವಿಸಿದರೆ ಪ್ರತಿಭಟನಾಕಾರರ ವಿರುದ್ಧ ಪ್ರಕರಣ ದಾಖಲಿಸಿ ಪ್ರತಿಭಟನೆಯನ್ನು ಹತ್ತಿಕ್ಕಬಹುದು ಎಂಬ ಉದ್ದೇಶದಿಂದಲೇ ಪೊಲೀಸರು ಈ ರೀತಿ ಮಾಡಿದ್ದಾರೆ ಎಂದು ದೂರಿದರು.

ಬಳಿಕ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಹಾಗೂ ತಹಸೀಲ್ದಾರ್ ಎಸ್.ಎಲ್.ನಯನಾ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ತಮ್ಮಣ್ಣ, ನಾಗರಾಜು, ಜಯರಾಮೇಗೌಡ, ಕೃಷ್ಣಮೂರ್ತಿ, ಬಸವರಾಜು, ರಾಜೇಶ್, ರಾಮಕೃಷ್ಣ, ಮಹದೇವು, ಕುಮಾರ ಇತರರು ಇದ್ದರು.

ವಿದ್ಯಾರ್ಥಿನಿಯರ ಮೇಲೆ ಜೇನುನೊಣ ದಾಳಿ

ನಾಗಮಂಗಲ,ಏ.25– ಶೈಕ್ಷಣಿಕವಾಗಿ ಜಮೀನೊಂದರ ಸರ್ವೆಗೆ ತೆರಳಿದ್ದ ವಿದ್ಯಾರ್ಥಿನಿಯರ ಮೇಲೆ ಜೇನು ನೊಣಗಳು ದಾಳಿ ನಡೆಸಿರುವ ಘಟನೆ ತಾಲೂಕಿನ ಹುಲ್ಲೇನಹಳ್ಳಿ ಗ್ರಾಮದ ಬಳಿ ನಡೆದಿದೆ. ಇಂದು ಬೆಳಗ್ಗೆ ದೇವಲಾಪುರ ಹ್ಯಾಂಡ್ ಪೋಸ್ಟ್ ಬಳಿಯಿರುವ ಡಿಪ್ಲೋಮಾ ಕಾಲೇಜಿನ ಸಿವಿಲ್ ವಿದ್ಯಾರ್ಥಿನಿಯರಾದ ಅನುಶ್ರೀ, ರಕ್ಷಿತಾ, ಬೃಂದಾ, ಅರ್ಚನಾ, ತನುಶ್ರೀ, ಅನುಷಾ, ನೇತ್ರಾ ಸೇರಿದಂತೆ ಎಂಟು ಮಂದಿ ಪ್ರಾಧ್ಯಾಪಕ ಅನಿಲ್ ಜೊತೆಯಲ್ಲಿ ಜಮೀನೊಂದರ ಸರ್ವೆ ಮಾಡಲು ತೆರಳಿದ್ದರು. ಈ ಸಮಯದಲ್ಲಿ ಏಕಾಏಕಿ ಜೇನುನೊಣಗಳು ದಾಳಿ ಮಾಡಿ ಗಾಯಗೊಳಿಸಿದೆ. ನೋವು ತಡೆಯಲಾಗದೇ ವಿದ್ಯಾರ್ಥಿನಿಯರು ಕಿರುಚಿಕೊಂಡಿದ್ದು, ವಿಷಯ ತಿಳಿದ ತಕ್ಷಣವೇ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ನೀಡಲಾಯಿತು.



ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿನಿಯರು

ಎಲ್ಲಾ ಸಮುದಾಯಗಳನ್ನು ಒಗ್ಗೂಡಿಸಿ ಅಭಿವೃದ್ಧಿಯತ್ತ ಸಾಗೋಣ

ಇಫ್ತಿಹಾರ್ ಕೂಟದಲ್ಲಿ ಸಂಸದ ಪ್ರಜ್ವಲ್ ರೇವಣ್ಣ



ಹುಣಸೂರು, ಏ.25(ಕೆಕೆ)– ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸೇರಿದಂತೆ ಎಲ್ಲಾ ಸಮುದಾಯಗಳನ್ನು ಒಗ್ಗೂಡಿಸುವ ಮೂಲಕ ಅಭಿವೃದ್ಧಿ ಪಥದತ್ತ ಸಾಗೋಣ ಎಂದು ಸಂಸದ ಪ್ರಜ್ವಲ್ ರೇವಣ್ಣ ತಿಳಿಸಿದರು.

ನಗರದ ಐ.ಕೆ.ಕಲ್ಯಾಣ ಮಂಟಪದಲ್ಲಿ ಜೆಡಿಎಸ್ ಪಕ್ಷದಿಂದ ಸರ್ವ ಧರ್ಮಗಳನ್ನು ಒಳಗೊಂಡಂತೆ ಏರ್ಪಡಿಸಿದ್ದ ಇಫ್ತಿಹಾರ್ ಕೂಟದಲ್ಲಿ ಮಾತನಾಡಿದ ಅವರು, ಎಲ್ಲಾ ಧರ್ಮಗಳು ಮತ್ತು ಸಮುದಾಯಗಳ ಬಾಂಧವರೊಂದಿಗೆ ಸಾಮರಸ್ಯ ಸಾರಲು ನಾವೆಲ್ಲಾ ಒಂದಾಗಬೇಕಿದೆ ಎಂದರು.

ಇಂದು ಎಲ್ಲಾ ಧರ್ಮದ ಮುಖಂಡರು ಒಂದೆಡೆ ಸೇರಿರುವುದು ನನಗೆ ಸಂತೋಷವಾಗಿದೆ. ಅದೇ ರೀತಿ ಎಲ್ಲರೂ ಸ್ನೇಹ, ಶಾಂತಿ ಸೌಹಾರ್ದತೆಯಿಂದ ಒಂದೆಡೆ ಸೇರಿ ಎಲ್ಲಾ ಸಮಾಜವನ್ನು ಒಟ್ಟಾಗಿಸುವ ಮೂಲಕ ರಾಜ್ಯದ ಅಭಿವೃದ್ಧಿ ರಥ ಎಳೆಯೋಣ ಎಂದರು. ಈ ಹಿಂದೆ ಪಿರಿಯಾಪಟ್ಟಣ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ತಂಬಾಕು ಬೆಲೆ ಕುಸಿತಗೊಂಡಾಗ ರೈತರೊಡಗೂಡಿ ತಂಬಾಕಿಗೆ ಸೂಕ್ತ ಬೆಂಬಲ ಬೆಲೆ ನೀಡುವಂತೆ ಧರಣಿ ಕುಳಿತಾಗ ಅಧಿಕಾರಿಗಳು ತಂಬಾಕಿಗೆ ಸೂಕ್ತ ಬೆಲೆ ಘೋಷಿಸಿದರು. ನಮ್ಮ ತಾತ ಹೆಚ್.ಡಿ.ದೇವೇಗೌಡರು ತಂಬಾಕು ಬೆಳೆಯುವ ರೈತರ ಪರ ನಿಂತ ಪರಿಣಾಮ ಸಾಕಷ್ಟು ಸುಧಾರಣೆಯೊಂದಿಗೆ ತಂಬಾಕು ಬೆಳೆಗಾರರು ಇನ್ನೂ ಉಳಿದಿದ್ದಾರೆ. ಇಲ್ಲದಿದ್ದಲ್ಲಿ ಸಾಕಷ್ಟು ರೈತರು ಪರ್ಯಾಯ ಬೆಳೆಗೆ ಹೋಗುತ್ತಿದ್ದರು ಎಂದ ಅವರು, ಕಳೆದ ಬಾರಿ 120 ಮಿಲಿಯನ್ ಮೆಟ್ರಿಕ್ ಟನ್ ತಂಬಾಕು ಉತ್ಪಾದನೆಗೆ ಅವಕಾಶ ನೀಡಿ ಈ ಬಾರಿ 90 ಮಿಲಿಯನ್ ಮೆಟ್ರಿಕ್ ಟನ್‌ಗೆ ಇಳಿಸಿದ್ದಾರೆ. ರೈತರು ಹೆಚ್ಚಿಗೆ ತಂಬಾಕು ಬೆಳೆದರೂ ದಂಡ ಹಾಕುತ್ತಾರೆ. ಕಡಿಮೆ ಬೆಳೆದರೂ ದಂಡ ಹಾಕುತ್ತಾರೆ. ಯಾವ ರೀತಿ ತಂಬಾಕು ಬೆಳೆಗಾರರು ಜೀವನ ನಡೆಸಬೇಕು ಎಂಬುದು ತಿಳಿಯದಾಗಿದೆ ಎಂದರು.

ನಾನು ಸಂಸದನಾಗಿ ಆಯ್ಕೆಯಾದಾಗಿನಿಂದ ನಮ್ಮ ತಾತ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರೊಂದಿಗೆ ಸೇರಿ ನಮ್ಮ ನೆಲ, ಜಲ, ನಾಡಿನ ಅಭಿವೃದ್ಧಿಗಾಗಿ ಹೋರಾಡುತ್ತಿದ್ದೇನೆ. ಕನ್ನಡ ನಾಡನ್ನು ಸಂಮೃದ್ಧಿಯ ಹಸಿರು ನಾಡಾಗಿ ಪರಿವರ್ತಿಸಲು ನಾವೆಲ್ಲ ಒಟ್ಟಾಗಿ ಹೋರಾಡಬೇಕಿದೆ ಎಂದರು.

ಚರ್ಚ್ ಪಾದ್ರಿ ಜಾರ್ಜ್ ಮ್ಯಾಟೀಸ್ ಮಾತನಾಡಿ, ನಾವೆಲ್ಲರೂ ಶಾಂತಿದೂತರಾಗಿ ಮುನ್ನಡೆದರೆ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಇದಕ್ಕಾಗಿ ಎಲ್ಲರೂ ಸ್ನೇಹ ಪೂರ್ವಕವಾಗಿ ಕೈ ಜೋಡಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ದೇವರಳ್ಳಿ ಸೋಮಶೇಖರ್, ಉಪಾಧ್ಯಕ್ಷ ದೇವರಾಜ ಒಡೆಯರ್, ಜಿಪಂ ಮಾಜಿ ಸದಸ್ಯ ಹೆಚ್.ಎಂ.ಫಜುಲುಲ್ಲಾ, ನಗರಸಭಾ ಸದಸ್ಯರಾದ ಕೃಷ್ಣರಾಜಗುಪ್ತ, ಸರವಣ, ಸಿ.ದೇವರಾಜು, ಶ್ರೀನಾಥ್, ರಾಣಿ ಪೆರುಮಾಳ್, ಸರ್ದಾರ್, ಆಂಡಿ ಅಸ್ಲಾಮ್, ಬಿಕೆಪಿ ಬಳಗದ ಅಧ್ಯಕ್ಷ ಸಂದೇಶ್, ಮಾಜಿ ಪುರಸಭಾಧ್ಯಕ್ಷ ಹೆಚ್.ಎನ್. ಚಂದ್ರಶೇಖರ್, ಅಣ್ಣಯ್ಯ, ಜಯರಾಂ, ಗಣೇಶ್‌ಗೌಡ, ಡೇವಿಡ್, ಜಾರ್ಜ್, ಎಆರ್‌ಎಸ್ ಕಮಿಟಿ ಸದಸ್ಯ ಪ್ರಭಾಕರ್, ಸತೀಶ್, ಪಾಪಣ್ಣ ದಯಾನಂದ, ರಾಜೇಗೌಡ, ರಮೇಶ್ ಇತರರಿದ್ದರು.

ಮಧುವನಹಳ್ಳಿಯಲ್ಲಿ ಕಂತಮ್ಮ ದೇವಸ್ಥಾನ ಉದ್ಘಾಟನೆ



ಕೆ.ಆರ್.ನಗರ, ಏ.25(ಕೆಟಿಆರ್)– ಪಟ್ಟಣದಿಂದ ಮಧುವನಹಳ್ಳಿ ಮೂಲಕ ಹಾದು ಹೋಗುವ ರಾಜ್ಯ ಹೆದ್ದಾರಿಯ ಅಗಲೀಕರಣಕ್ಕಾಗಿ ಸರ್ಕಾರಕ್ಕೆ 4 ಕೋಟಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಶೀಘ್ರದಲ್ಲಿಯೇ ಮಂಜೂರಾಗಲಿದೆ ಎಂದು ಶಾಸಕ ಸಾ.ರಾ. ಮಹೇಶ್ ಮನವಿ ಮಾಡಿದರು.

ಪಟ್ಟಣದ ಮಧುವನಹಳ್ಳಿ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಕಂತಮ್ಮ ದೇವಸ್ಥಾನ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ರಸ್ತೆಗಳು ಕಿರಿದಾಗಿ ಸಂಚಾರಕ್ಕೆ ತೊಂದರೆಯಾಗಿದ್ದು, ಸಾಲಿಗ್ರಾಮ ಪಟ್ಟಣ ಮತ್ತು ಹನಸೋಗೆ, ನಾಟನಹಳ್ಳಿ ಗ್ರಾಮಗಳಲ್ಲಿ ತೆರವು ಕಾರ್ಯಾಚರಣೆ ಮಾಡಿ ರಸ್ತೆ ಅಗಲೀಕರಣ ಮಾಡಲಾಗುತ್ತಿದೆ. ಆದರೆ ಇದೊಂದು ರಸ್ತೆ ಬಾಕಿ ಇದ್ದು, ಆ ಕೆಲಸವನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಶೀಘ್ರದಲ್ಲೇ ಸಭೆ ಕರೆದು ಸ್ಥಳೀಯರ ಒಪ್ಪಿಗೆ ಪಡೆದು, ರಸ್ತೆ ಅಗಲೀಕರಣದ ಸಂದರ್ಭದಲ್ಲಿ ಮನೆ ಮತ್ತು ಜಾಗ ಕಳೆದುಕೊಳ್ಳುವವರಿಗೆ ಮಾರುಕಟ್ಟೆ ಬೆಲೆಗಿಂತ 4 ಪಟ್ಟು ಪರಿಹಾರ ಕೊಡಿಸಲಾಗುವುದು ಎಂದು ಭರವಸೆ ನೀಡಿದ ಶಾಸಕರು, ಈ ಕಂತಮ್ಮ ದೇವಸ್ಥಾನದ ನಿರ್ಮಾಣಕ್ಕೆ 5 ಲಕ್ಷ ರೂ ಅನುದಾನ ನೀಡಿದ್ದು, ವೈಯಕ್ತಿಕವಾಗಿ 1 ಲಕ್ಷ ರೂ. ನೀಡಲಾಗುವುದು. ಅಲ್ಲದೇ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಈಗಾಗಲೇ 10 ಲಕ್ಷ ಅನುದಾನ ನೀಡಿದ್ದು, ಮುಂದೆ ಮತ್ತಷ್ಟು ಅನುದಾನ ಕೊಡುವುದಾಗಿ ಹೇಳಿದರು.

ಕೇವಲ ದೇವಸ್ಥಾನಗಳನ್ನು ಕಟ್ಟಿ ದೇವರನ್ನು ಪೂಜಿಸಿದರೆ ಸಾಲದು ಮಕ್ಕಳು ಪೋಷಕರನ್ನು ಹಾಗೂ ಹಿರಿಯರನ್ನು ಗೌರವಿಸಿ ಅವರ ಸೇವೆ ಮಾಡಬೇಕು. ಮನುಷ್ಯತ್ವದ ಮೂಲಕ ನಾವು ದೇವರನ್ನು ಕಾಣಬೇಕು. ಚಲನ ಚಿತ್ರಗಳಲ್ಲಿ ಮತ್ತು ಧಾರಾವಾಹಿಗಳಲ್ಲಿನ ಕಷ್ಟ ಹಾಗೂ ದುಃಖದ ಸನ್ನಿವೇಶಗಳನ್ನು ನೋಡಿ ಮರುಗುವ ಮಂದಿ ನಿಜ ಜೀವನದಲ್ಲಿ ತಮ್ಮ ಮನೆಗಳಲ್ಲೇ ಸಂಕಷ್ಟಕ್ಕೆ ಸಂದಿಸದೇ ಸುಮ್ಮನಿರುವುದು ಸರಿಯೇ ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ದೇವಸ್ಥಾನಕ್ಕೆ ಜಾಗವನ್ನು ದಾನನೀಡಿದ ಸುಬ್ಬಮ್ಮ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಪುರಸಭಾ ಸದಸ್ಯರಾದ ನಟರಾಜ್, ಪಲ್ಲವಿ, ಮಾಜಿ ಅಧ್ಯಕ್ಷರಾದ ಡಿ.ಕಾಂತರಾಜ್, ಪಾರ್ವತಿ, ಮುಖಂಡರಾದ ಶಿವಣ್ಣ ಕೇಶವ್, ಕನಕಕುಮಾರ್, ಲಾರಿ ಪ್ರಕಾಶ್, ಸ್ವಾಮಿ ನಾಯಕ, ಚಕ್ರಪಾಣಿ, ರಾಜು ಹಾಜರಿದ್ದರು.

ರಸ್ತೆ ಅಭಿವೃದ್ಧಿಗೆ ಅಡ್ಡಿಯಾಗಿದ್ದ ವಾಣಿಜ್ಯ ಮಳಿಗೆಗಳ ತೆರವು



ನಂಜನಗೂಡು, ಏ.25(ಸುದರ್ಶನ್)– ನಗರದ ದೇವಿರಮ್ಮನಹಳ್ಳಿ ಹೊಸ ಬಡಾವಣೆಗೆ ಸಂಪರ್ಕ ಕಲ್ಪಿಸುವ 1.3 ಕೋಟಿ ರೂ. ವೆಚ್ಚದ 60 ಅಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಡ್ಡಿಯಾಗಿದ್ದ 2 ಖಾಸಗಿ ವಾಣಿಜ್ಯ ಮಳಿಗೆಗಳನ್ನು ಸೋಮವಾರ ನಗರಸಭೆ ಅಧಿಕಾರಿಗಳು ನಡೆಸಿ ತೆರವುಗೊಳಿಸಿದರು.

ನಗರದ ಸಿಟಿಜನ್ ಶಾಲೆ ಸಮೀಪ 2 ವಾಣಿಜ್ಯ ಸಂಕೀರ್ಣಗಳು ಒತ್ತುವರಿ ಮಾಡಿದ್ದ ಜಾಗವನ್ನು ಜೆಸಿಬಿ ಯಂತ್ರ ಬಳಸಿ ತೆರವುಗೊಳಿಸಲಾಯಿತು.

ಈ ವೇಳೆ ಮಾತನಾಡಿದ ನಗರಸಭೆ ಆಯುಕ್ತ ರಾಜಣ್ಣ, 2 ವಾಣಿಜ್ಯ ಮಳಿಗೆಗಳ ಮಾಲೀಕರು ಈ ಹಿಂದೆ ಜೆಸಿಬಿ ಯಂತ್ರದಿಂದ ತೆರವು ಕಾರ್ಯ ನಡೆಸಿದರೆ ಕಟ್ಟಡಕ್ಕೆ ಹಾನಿಯಾಗುತ್ತದೆ. ನಾವೇ ಕಾಂಕ್ರಿಟ್ ಕಟ್ಟಿಂಗ್ ಮೆಷಿನ್ ಬಳಸಿ ತೆರವು ಮಾಡುತ್ತೇವೆ ಎಂದು ಮನವಿ ಮಾಡಿದ್ದರಿಂದ ಕಾಲಾವಕಾಶ ನೀಡಲಾಗಿತ್ತು. ಆದರೆ ತೆರವು ಮಾಡದಿದ್ದರಿಂದ ಅನಿವಾರ್ಯವಾಗಿ ನಗರಸಭೆ ಸಿಬ್ಬಂದಿ ಬಳಸಿ ಕಟ್ಟಡ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ. ನಗರದ ಹುಲ್ಲಹಳ್ಳಿ ರಸ್ತೆಯಿಂದ 700 ಮೀಟರ್‌ವರೆಗೆ 60 ಅಡಿ ರಸ್ತೆ ನಿರ್ಮಾಣಕ್ಕೆ ಉಂಟಾಗಿದ್ದ ಅಡಚಣೆ ನಿವಾರಿಸಲಾಗಿದೆ. ಉತ್ತಮ ರಸ್ತೆ ನಿರ್ಮಾಣ ಕಾರ್ಯ ಶೀಘ್ರ ನಡೆಯಲಿದೆ ಎಂದರು. ಕಾರ್ಯಾಚರಣೆಗೆ ಅಡ್ಡಿಯಾಗದಂತೆ ಸಿಪಿಐ ಲಕ್ಷ್ಮಿಕಾಂತ್ ತಳವಾರ್ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಈ ವೇಳೆ ತಹಸೀಲ್ದಾರ್ ಶಿವಮೂರ್ತಿ, ನಗರಸಭೆ ಎಇಇ ಶ್ರೀನಿವಾಸ್ ಉಪಸ್ಥಿತರಿದ್ದರು.

ತಿ.ನರಸೀಪುರದಲ್ಲಿ ಡಾ.ರಾಜ್ ಹುಟ್ಟುಹಬ್ಬ ಆಚರಣೆ



ತಿ.ನರಸೀಪುರ, ಏ.25(ಎಸ್‌ಕೆ)– ಡಾ.ರಾಜ್‌ಕುಮಾರ್ ಕನ್ನಡಿಗರ ಹೃದಯದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪುಟ್ಟಸ್ವಾಮಿ ತಿಳಿಸಿದರು.

ಪಟ್ಟಣದ ಕಸಾಪ ಕಚೇರಿಯಲ್ಲಿ ನಡೆದ ವರನಟ ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ರಾಜಕುಮಾರ್ ಅವರು ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಅಭಿನಯ ಸೇರಿದಂತೆ ಸದಭಿರುಚಿಯ ಚಿತ್ರಗಳನ್ನು ಕೊಟ್ಟ ಮಹಾನ್ ನಟ ಎಂದರು. ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಸಿನಿಮಾಗಳ ಸಾರ್ವಕಾಲಿಕ ರಾಯಭಾರಿ ನಮ್ಮ ಅಣ್ಣಾವ್ರು. ಕನ್ನಡ ಚಿತ್ರರಂಗದ ಅಸ್ಮಿತೆಯನ್ನು ದೇಶಕ್ಕೆ ಸಾರಿದ ಸರಳತೆಯ ಸಾರ್ವಭೌಮನನ್ನು ಅವರ ಜನ್ಮೋತ್ಸವದಂದು ನೆನೆಯುತ್ತಿದ್ದೇವೆ. ಕನ್ನಡ ಶಾಲೆ ಉಳಿದರೆ ಕನ್ನಡ ಉಳಿಯುತ್ತದೆ. ಕನ್ನಡ ಉಳಿದರೆ ಕನ್ನಡಿಗರು ಉಳಿಯುತ್ತಾರೆ ಕನ್ನಡಿಗರು ಉಳಿದರೆ ಕರ್ನಾಟಕ ಉಳಿಯುತ್ತದೆ ಎಂದರು.

ಈ ವೇಳೆ ಎಸ್ಸಿ ಎಸ್ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಕೆ.ಮಲ್ಲು, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ವಕೀಲರ ಸಂಘದ ಅಧ್ಯಕ್ಷ ಪಾಲಾಕ್ಷಮೂರ್ತಿ, ಹಿರಿಯ ವೈದ್ಯ ಡಾ.ನವೀನ್, ಮಹದೇವಪ್ಪ, ಉಪನ್ಯಾಸಕ ಕುಮಾರಸ್ವಾಮಿ, ವಕೀಲ ಜ್ಞಾನೇಂದ್ರಮೂರ್ತಿ, ಹಾಲಿನ ಸತ್ಯನಾರಾಯಣ, ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ಮುಖಂಡರಾದ ಗುರು, ಕುಮಾರ್, ಸೋಮು, ಮಲ್ಲಣ್ಣ, ಪುಟ್ಟಮಾದು, ನಾಗರತ್ನ ಇತರರಿದ್ದರು.



ಬನ್ನೂರಿನ ಸಮೀಪದ ಬೇವಿನಹಳ್ಳಿಯಲ್ಲಿ ಡಾ.ರಾಜ್‌ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ ಗ್ರಾಮದ ಹಿರಿಯ ನಾಗರಿಕರಾದ ತಾಯಮ್ಮ, ಜವನಮ್ಮ, ನಂಜಮ್ಮ, ಸಿಣಕಪ್ಪ, ಪಾಪಣ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮಹದೇವು, ಬಿ.ಎಲ್.ರಾಮಚಂದ್ರ, ರಂಗಸ್ವಾಮಿ ಸೇರಿದಂತೆ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.



ರಾಜ್ಯ ಸಹಕಾರ ಮಹಾ ಮಂಡಳ ರಾಜ್ಯಾಧ್ಯಕ್ಷರಾದ ಮಾಜಿ ಸಚಿವ ಜಿ.ಟಿ.ದೇವೇಗೌಡ ಅವರನ್ನು ಹನಗೋಡು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರವಿಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ಜೆಡಿಎಸ್ ಮುಖಂಡ ಬಿ.ಟಿ.ಶ್ರೀನಿವಾಸ್, ಕೃಷಿಕ ಸಮಾಜದ ಉಪಾಧ್ಯಕ್ಷ ಹೆಚ್.ಪಿ.ರಾಜೇಗೌಡ ಸನ್ಮಾನಿಸಿದರು.

ಮಹಿಳಾ ಸ್ವಸಹಾಯ ಸಂಘದ ಸಭೆ



ಕಂಪಲಾಪುರ, ಏ.25(ಸದಾ)–ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಂಪಲಾಪುರ ವಲಯದ ಮಹಿಳಾ ಸ್ವಸಹಾಯ ಸಂಘದ ಸಭೆ ಶ್ರೀಕರಕಂಠೇಶ್ವರ ಭವನದಲ್ಲಿ ನಡೆಯಿತು. ಕಿರುನೆಲ್ಲಿ 'ಎ' ಒಕ್ಕೂಟದ ಅಧ್ಯಕ್ಷೆ ಆಶಾ ಅವರ ಧ್ಯೇಯಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭಿಸಲಾಯಿತು. ತಾಲೂಕು ಯೋಜನಾಧಿಕಾರಿ ಸುರೇಶ್‌ಶೆಟ್ಟಿ ಮಾತನಾಡಿ, ಸಾಲ ಪಡೆದ ಮೇಲೆ ವಿನಿಯೋಗ ಮಾಡುವುದರ ಮೂಲಕ ಸಂಘದ ಗ್ರೇಡ್ ಅನ್ನು ಉಳಿಸಿಕೊಳ್ಳಿ. ಒಕ್ಕೂಟವನ್ನು ಕಂತು ಬಾಕಿ ಮುಕ್ತ ಒಕ್ಕೂಟವನ್ನಾಗಿ ಮಾಡಿಕೊಳ್ಳಿ. ಕೆರೆ ಅಭಿವೃದ್ಧಿ, ಶಿಕ್ಷಣ ಇವುಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿ ಎಂದರು. ವಲಯ ಮೇಲ್ವಿಚಾರಕಿ ರವಿಕಲಾಶೆಟ್ಟಿ, ಸೇವಾಪ್ರತಿನಿಧಿ ಆನಂದ್.ಕೆ ಸೇರಿದಂತೆ ಒಕ್ಕೂಟದ ಸದಸ್ಯರು ಹಾಜರಿದ್ದರು.

ಪೈಸಾರಿ ಭೂಮಿಯಲ್ಲಿ ಕಾಫಿ ಬೆಳೆದಿದ್ದರೆ ಆ ಭೂಮಿ ಸದರಿಯವರಿಗೆ 30 ವರ್ಷಕ್ಕೆ ಗುತ್ತಿಗೆ

ಸರ್ಕಾರದ ಚಿಂತನೆ

ಪೊನ್ನಂಪೇಟೆ,ಏ. 25– ಹಲವು ವರ್ಷಗಳಿಂದ ಪೈಸಾರಿ ಭೂಮಿಯಲ್ಲಿ ಕಾಫಿ ಬೆಳೆಯುತ್ತಿರುವ ಬೆಳೆಗಾರರಿಗೆ ಆ ಭೂಮಿಯನ್ನು 30 ವರ್ಷಗಳ ಕಾಲ ಗುತ್ತಿಗೆ ನೀಡಲು ಸರ್ಕಾರ ಚಿಂತನೆ ನಡೆಸಿದೆ ಎಂದು ರಾಜ್ಯ ಸರ್ಕಾರಿ ಜಮೀನು ಸಂರಕ್ಷಣಾ ಸಮಿತಿ ಅಧ್ಯಕ್ಷರೂ ಆದ ಶಾಸಕ ಕೆ.ಜಿ. ಬೋಪಯ್ಯ ತಿಳಿಸಿದರು.

ಪೊನ್ನಂಪೇಟೆಯಲ್ಲಿರುವ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಈಗಾಗಲೇ ಹಲವು ಬೆಳೆಗಾರರು ಪೈಸಾರಿ ಭೂಮಿಯಲ್ಲಿ ಅತಿಕ್ರಮಿಸಿ ಕಾಫಿ ತೋಟ ಮಾಡಿದ್ದಾರೆ. ಸದರಿ ಭೂಮಿ ಸಕ್ರಮಕ್ಕಾಗಿ ನಮೂನೆ 53, 50, 57ರಲ್ಲಿ ಅರ್ಜಿ ಸಲ್ಲಿಸಿದಾಗ ಕೆಲವು ತಾಂತ್ರಿಕ ಸಮಸ್ಯೆಗಳಿಂದ ಅರ್ಜಿಗಳು ತಿರಸ್ಕೃತವಾಗುತ್ತಿವೆ ಎಂದರು.

ಬೆಳೆಗಾರರ ಈ ಸಮಸ್ಯೆಗೆ ಸ್ವಲ್ಪ ಮಟ್ಟಿಗಾದರೂ ಪರಿಹಾರ ಕಲ್ಪಿಸಬೇಕೆಂಬ ನಿಟ್ಟಿನಲ್ಲಿ 10 ಎಕರೆಗೊಳಪಟ್ಟ ಪೈಸಾರಿ ಜಾಗದಲ್ಲಿ ಕಾಫಿ ತೋಟ ಮಾಡಿದ್ದರೆ, ಆ ಭೂಮಿಯನ್ನು ಸದರಿ ಬೆಳೆಗಾರರಿಗೆ 30 ವರ್ಷ ಗುತ್ತಿಗೆಗೆ ನೀಡಲು ಚಿಂತನೆ ನಡೆಸಿದೆ. ಬೆಳೆಗಾರರು ಎಕರೆಗೆ ವಾರ್ಷಿಕ ಮೂರು ಸಾವಿರ ರೂ. ತೆರಿಗೆ ಪಾವತಿಸಬೇಕಾಗುತ್ತದೆ ಎಂದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಬೆಳೆಗಾರರ ಮನವಿಗೆ ಸ್ಪಂದಿಸುತ್ತಿದ್ದು, ಈಗಾಗಲೇ **10 ಹೆಚ್‌ಪಿವರೆಗಿನ ಕಾಫಿ ತೋಟಗಳ** ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಿದ್ದಾರೆ. ಇದೀಗ ಪೈಸಾರಿ ಜಾಗದಲ್ಲಿ ಕಾಫಿ ಬೆಳೆದಿರುವ ಬೆಳೆಗಾರರಿಗೆ ಆ ಭೂಮಿಯನ್ನು 30 ವರ್ಷಗಳ ಗುತ್ತಿಗೆಗೆ ನೀಡಲು ಕ್ರಮ ಕೈಗೊಳ್ಳುತ್ತಿದ್ದಾರೆ ಎಂದರು.

ಮಡಿಕೇರಿಯ ಕ್ರಿಸ್ಟಲ್ ಹಾಲ್‌ನಲ್ಲಿ ಮೇ 12 ರಂದು ಬೆಳೆಗಾರರ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಬೆಳೆಗಾರರ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮತ್ತು ಬೆಳೆಗಾರರು ಈ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲು ಅವಕಾಶ ಕಲ್ಪಿಸಲಾಗುತ್ತದೆ ಎಂದರು.

ಗೋಷ್ಠಿಯಲ್ಲಿ ತಾಲೂಕು ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷ ಕಾಡ್ಯಮಾಡ ಗಿರೀಶ್‌ಗಣಪತಿ, ಸದಸ್ಯ ತೀತಿಮಾಡ ಲಾಲಾ ಭೀಮಯ್ಯ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಕುಂಞಂಗಡ ಅರುಣ್ ಭೀಮಯ್ಯ, ಮಹಿಳಾ ಮೋರ್ಚಾ ಅಧ್ಯಕ್ಷೆ ಚೋಡುಮಾಡ ಶರಿನ್ ಸುಬ್ಬಯ್ಯ ಉಪಸ್ಥಿತರಿದ್ದರು.

ಕೊಡಗಿನಲ್ಲಿ ಸ್ವಾತಂತ್ರ್ಯ ಚಳವಳಿ ಒಂದು ನೆನಪು ಕಾರ್ಯಕ್ರಮ

ಗೋಣಿಕೊಪ್ಪ,ಏ.25– ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕೊಡಗಿನ ವೀರರ ಹೆಸರು ದಾಖಲಾಗಬೇಕು ಎಂದು ಸಾಹಿತಿ ಕಾಳೇಗೌಡ ನಾಗವಾರ ಅಭಿಪ್ರಾಯಪಟ್ಟರು.

ಭಾರತೀಯ ಸ್ವಾತಂತ್ರ್ಯ ಹೋರಾಟ ಸ್ಮಾರಕ ಲಿಟರರಿ ಮತ್ತು ಚಾರಿಟೆಬಲ್ ಟ್ರಸ್ಟ್‌ನಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪಟ್ಟಣದ ಸ್ವಾತಂತ್ರ್ಯ ಹೋರಾಟಗಾರರ ಭವನದಲ್ಲಿ ಸೋಮವಾರ ಆಯೋಜಿಸಿದ್ದ ಕೊಡಗಿನಲ್ಲಿ ಸ್ವಾತಂತ್ರ್ಯ ಚಳವಳಿ ಒಂದು ನೆನಪು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಪೂರ್ವ ಅವಧಿಯಲ್ಲಿ ಕೊಡಗಿನ ಸಾಕಷ್ಟು ವೀರರು ಹೋರಾಟದಲ್ಲಿ ಭಾಗಿಯಾಗಿದ್ದಾರೆ. ಮಹಿಳೆಯರು ಕೂಡ ಜೈಲುವಾಸ ಅನುಭವಿಸಿದ್ದಾರೆ. ಮಹಾತ್ಮ ಗಾಂಧಿ ಕೂಡ ಕೊಡಗಿನವರ ಹೋರಾಟದ ಕಿಚ್ಚು, ವೀರತ್ವದ ಬಗ್ಗೆ ಸಾಕಷ್ಟು ಕಡೆಗಳಲ್ಲಿ ಹೇಳಿಕೊಂಡಿದ್ದಾರೆ. ಆದರೆ ಇದು ದಾಖಲೀಕರಣವಾಗಿಸಲು ಪ್ರಯತ್ನ ನಡೆಯದಿರುವುದು ವಿಷಾದನೀಯ ಎಂದರು. ಬ್ರಿಟಿಷರ ವಿರುದ್ಧ ಕೊಡಗಿನ ಜನತೆ ಹೋರಾಡಿದ್ದಲ್ಲದೆ, ಬದುಕಿಗೆ ಬೇಕಾದ ಒಂದಷ್ಟು ವಿಚಾರಗಳನ್ನು ಕೂಡ ಕಲಿತರು. ಇದು ಜಿಲ್ಲೆಯ ಜನರ ವಿಶೇಷತೆ ಎಂದರು.



ಗೋಣಿಕೊಪ್ಪದಲ್ಲಿ 'ಕೊಡಗಿನಲ್ಲಿ ಸ್ವಾತಂತ್ರ್ಯ ಚಳವಳಿ ಒಂದು ನೆನಪು' ಕಾರ್ಯಕ್ರಮವನ್ನು ಸಾಹಿತಿ ಕಾಳೇಗೌಡ ನಾಗವಾರ ಉದ್ಘಾಟಿಸಿದರು.

ನಿವೃತ್ತ ಪ್ರಾಂಶುಪಾಲ ಇಟ್ಟೀರ ಕೆ.ಬಿದ್ದಪ್ಪ ಸ್ವಾತಂತ್ರ್ಯ ಹೋರಾಟದ ಬಗ್ಗೆ ವಿಚಾರ ಮಂಡನೆ ಮಾಡಿ, ಸ್ವಾತಂತ್ರ್ಯ ಪೂರ್ವ ಹೋರಾಟದಲ್ಲಿ ಜಿಲ್ಲೆಯ ಸಾಕಷ್ಟು ಜನರು ಹೋರಾಟ ನಡೆಸಿದ್ದಾರೆ. ದೇಶಕ್ಕಾಗಿ ನಡೆದ ಯುದ್ಧದಲ್ಲಿ ಭಾಗವಹಿಸಿದ್ದಾರೆ. 1834ರಲ್ಲಿ ಬ್ರಿಟಿಷರು ಜಿಲ್ಲೆಯ ಉತ್ತರ ಭಾಗದಿಂದ ನುಸುಳುವ ಸಂದರ್ಭ ಮಾತಂಡ ಅಪ್ಪಚ್ಚು ನೇತೃತ್ವದಲ್ಲಿ ಹಾರಂಗಿಯಲ್ಲಿ ಬ್ರಿಟಿಷ್ ಸೈನ್ಯವನ್ನು ತಡೆಯುವ ಪ್ರಯತ್ನ ನಡೆದಿದೆ. ಇದು ಹೋರಾಟದ ಕ್ರಾಂತಿಯಾಗಿದ್ದು, ಇದು ದಾಖಲೆಯಾಗಿಲ್ಲ. ಕೋಳೇರ ಕಾವೇರಿ ಮಹಿಳೆಯಾಗಿ ಪ್ರಾಣ ತೆತ್ತಿದ್ದಾಳೆ. ರಾಷ್ಟ್ರೀಯತೆಯ ಕಿಚ್ಚು ಜಿಲ್ಲೆಯ ಜನರಲ್ಲಿರುವುದರಿಂದ ಮಾತ್ರ ಇಂತಹ ಹೋರಾಟ ಕಾಣಲು ಸಾಧ್ಯವಾಗಿದೆ. ಇದರ ದಾಖಲೀಕರಣವಾಗಲಿ ಎಂದು ಒತ್ತಾಯಿಸಿದರು.

ಹಿರಿಯರಾದ ಮೂಕಳೇರ ಕುಶಾಲಪ್ಪ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದವರು ಹೆಸರು ಪ್ರಕಟಿಸಿ ನೆನಪಿಸಿಕೊಂಡರು.

ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಡಾ.ಅಮ್ಮಾಟಂಡ ಪಾರ್ವತಿ ಅಪ್ಪಯ್ಯ, ಭಾರತೀಯ ಸ್ವಾತಂತ್ರ್ಯ ಹೋರಾಟ ಸ್ಮಾರಕ ಲಿಟರರಿ ಮತ್ತು ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಚೆಪ್ಪುಡೀರ ಪಿ. ಬೆಳ್ಯಪ್ಪ, ಕಾರ್ಯಕ್ರಮ ಸಂಚಾಲಕರಾದ ಕೊಳ್ಳಿಮಾಡ ಅಜಿತ್, ಡಾ.ಜೆ.ಸೋಮಣ್ಣ, ಹಿರಿಯರಾದ ಕಾಕಮಾಡ ಚಂಗಪ್ಪ, ಅಜ್ಜಿಕುಟ್ಟೀರ ಶಾಂತು ಪೂಣಚ್ಚ ಇದ್ದರು.

ವಿರಾಜಪೇಟೆ ಭದ್ರಕಾಳಿ ದೇಗುಲದಲ್ಲಿ ಬೋಡ್ ನಮ್ಮೆ



ಮಡಿಕೇರಿ,ಏ.25–ವಿರಾಜಪೇಟೆ ತಾಲೂಕಿನ ಭದ್ರಕಾಳಿ ದೇವರ ಹಬ್ಬದ ಆಚರಣೆಯಲ್ಲೊಂದಾದ ಬೋಡ್ ನಮ್ಮೆ ಶ್ರದ್ಧಾಭಕ್ತಿಯಿಂದ ಜರುಗಿತು.

ಸಂಪ್ರದಾಯದಂತೆ ಹರಕೆ ಹೊತ್ತವರು ವಿವಿಧ ವೇಷ–ಭೂಷಣ ಧರಿಸಿ ಎಲ್ಲರನ್ನು ರಂಜಿಸಿದರು. ದೇವಾಲಯದ ಸಾಂಪ್ರದಾಯಿಕ ಆಚರಣೆಯಂತೆ ಏ.14ರಿಂದ ಪ್ರಾರಂಭವಾದ ಹಬ್ಬ ವಾರ ಕಾಲ ಶ್ರದ್ಧಾಭಕ್ತಿಯಿಂದ ಜರುಗಿತು. ಏ.22ರಂದು ಪಟ್ಟಣಿ ಹಬ್ಬದ ಪ್ರಯುಕ್ತ ಮಕ್ಕಳು ಪೀಲಿಯಾಟ್ ಆಡಿದರು. ಪೊದಕೇರಿ, ಪೊದಕೋಟೆ ಹಾಗೂ ನಡಿಕೇರಿ ಮೂರು ಕೇರಿಗಳ ಬಿದಿರಿನ ಕೃತಕ ಕುದುರೆಯನ್ನು ದೇವಾಲಯಕ್ಕೆ ಸಾಂಪ್ರದಾಯ ಬದ್ಧವಾಗಿ ತಂದು ದೇವರಿಗೆ ಸಮರ್ಪಿಸಲಾಯಿತು.

ಏ.23ರಂದು ರಾತ್ರಿ ಊರಿನವರೆಲ್ಲ ಸೇರಿ ಸಾಂಪ್ರದಾಯದ ವೇಷ ಧರಿಸಿ ಊರಿನ ಪ್ರತಿಯೊಂದು ಮನೆ–ಮನೆಗಳಿಗೆ ತೆರಳಿ ಮನೆಯವರ ಸತ್ಕಾರ ಸ್ವೀಕರಿಸಿದರು. ಏ.24ರಂದ ಸಂಜೆ 4 ಗಂಟೆಗೆ ಹರಕೆ ಹೊತ್ತವರೆಲ್ಲ ತುಡೋಪ ತಂಡವಾಗಿ ಹುಲಿ ವೇಷಧಾರಿಗಳಾಗಿ ಕೆಸರನೆಲ್ಲ ಮೈಗೆ ಹಚ್ಚಿಕೊಂಡ ಬಂಡ್ ಕಳಿ, ಹುಲ್ಲನ್ನೆಲ್ಲ ಹೊದ್ದುಕೊಂಡ ಭೂತದ ವೇಷದವರೆಲ್ಲ ದೇವನೆಲೆಯಲ್ಲಿ ಸೇರಿ ಡೋಲಿನ ಶಬ್ಧಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ದೇವನೆಲೆಗೆ ತಲುಪಿದರು. ಬಳಿಕ ದೇವನೆಲೆಯ ಸುತ್ತಲು ಕುಣಿದು ಕೊಡಗಿನ ವಿಶಿಷ್ಟ ಬೋಡ್ ಹಬ್ಬವನ್ನು ಸಾಂಪ್ರದಾಯಿಕವಾಗಿ ಆಚರಿಸಿದರು.

ಸುಮಾರು 850 ವರ್ಷಗಳ ಇತಿಹಾಸ ಹೊಂದಿರುವ ವಿರಾಜಪೇಟೆ ತಾಲೂಕು ಚೆಂಬೆಬೆಳ್ಳೂರು ಗ್ರಾಮದ ಶಕ್ತಿದೇವತೆ ಭದ್ರಕಾಳಿ ಹಿಂದೆ ಅಜ್ಜಿಯ ರೂಪದಲ್ಲಿ ಗ್ರಾಮಕ್ಕೆ ಬಂದಾಗ ಚೇಂದಂಡ ಕುಟುಂಬಸ್ಥರು ನೆಲೆ ನೀಡಿದರೆಂಬ ಪ್ರತೀತಿಯೂ ಇದೆ.



ವಿರಾಜಪೇಟೆ ಸಮೀಪದ 2ನೇ ಬಿಳುಗುಂದ ಗ್ರಾಮದ 'ಹರುಣ್ ಸೌಖತ್ ಮ್ಯೂನ್ಷನ್'ನಲ್ಲಿ ಮೈಸೂರು ಉದ್ಯಮಿ ಇಮ್ರಾನ್ ಸಿದ್ಧಿಖಿ ಇಫ್ತಾರ್ ಸೌಹಾರ್ದ ಕೂಟ ಆಯೋಜಿಸಿದ್ದರು. ಈ ಕೂಟದಲ್ಲಿ ನೂರಾರು ಮಂದಿ ಭಾಗವಹಿಸಿದ್ದರು.

ದೇವಸ್ಥಾನದ ಹುಂಡಿ ಕದ್ದ ಖದೀಮನ ಬಂಧನ



ವಿರಾಜಪೇಟೆ, ಏ.25–ಸೆರೆಮನೆವಾಸ ಅನುಭವಿಸಿ ಹೊರ ಬಂದ ವಾರದಲ್ಲೇ ದೇವಸ್ಥಾನದ ಹುಂಡಿ ಕದ್ದು ಪರಾರಿಯಾಗಲು ಯತ್ನಿಸಿದ ಖದೀಮನೋರ್ವನನ್ನು ಸ್ಥಳೀಯ ನಿವಾಸಿಗಳೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಅರಸುನಗರದ ನಿವಾಸಿ ಕಾರ್ತಿಕ್ ಬಂಧಿತ ಖದೀಮನಾಗಿದ್ದು, ವಿರಾಜಪೇಟೆ ಪಟ್ಟಣ ವ್ಯಾಪ್ತಿಯ ಅರಸು ನಗರದ ಶ್ರೀ ಮುತ್ತಪ್ಪ ದೇವಸ್ಥಾನದಲ್ಲಿ ಭಾನುವಾರ ತಡರಾತ್ರಿ ಕಬ್ಬಿಣದ ರಾಡಿನಿಂದ ದೇವರ ಭಂಡಾರದ ಬೀಗ ಮುರಿದು ಹಣ ಕದ್ದು ಪರಾರಿಯಾಗುತ್ತಿದ್ದ. ಇದನ್ನರಿತ ಸ್ಥಳೀಯ ನಿವಾಸಿಗಳು ಖದೀಮನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ದೇವಸ್ಥಾನ ಸಮಿತಿಯ ಪ್ರದೀಪ್ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿದ ಪೊಲೀಸರು, ಸ್ಥಳ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಹಿಂದೆಯೂ ಆರೋಪಿ ಕಾರ್ತಿಕ್ ವಿರುದ್ಧ ಅನೇಕ ಪ್ರಕರಣಗಳು ದಾಖಲಾಗಿವೆ.

ಮಡಿಕೇರಿ ಆಕಾಶವಾಣಿ ವಿರುದ್ಧ ಪ್ರತಿಭಟನೆ

ಮಡಿಕೇರಿ,ಏ.25–ಮಡಿಕೇರಿ ಆಕಾಶವಾಣಿ ಕೇಂದ್ರದ ಕಾರ್ಯವೈಖರಿ ವಿರುದ್ಧ ಆಮ್ ಆದ್ಮಿ ಪಾರ್ಟಿ ಹಾಗೂ ಅಲ್ಲಾರಂಡ ರಂಗ ಚಾವಡಿ ಸಂಘಟನೆ ಪ್ರತ್ಯೇಕವಾಗಿ ಪ್ರತಿಭಟನೆ ನಡೆಸಿದವು.

ಆಕಾಶವಾಣಿ ಕೇಂದ್ರದ ಎದುರು ಘೋಷಣೆಗಳನ್ನು ಕೂಗಿ ಅಸಮಾಧಾನ ವ್ಯಕ್ತಪಡಿಸಿದ ಪ್ರಮುಖರು ಜನಾಭಿಪ್ರಾಯಕ್ಕೆ ಮನ್ನಣೆ ನೀಡಬೇಕು ಎಂದು ಒತ್ತಾಯಿಸಿದರು.

ಆಕಾಶವಾಣಿ ಮೂಲಕ ನಿಧನ ಸುದ್ದಿಯನ್ನು ಬೆಳಗ್ಗೆ ಮಾತ್ರ ಪ್ರಸಾರ ಮಾಡಲಾಗುತ್ತಿದ್ದು, ಈ ಹಿಂದಿನಂತೆ ಸಂಜೆ ಕೂಡ ಪ್ರಸಾರ ಮಾಡಬೇಕು ಎಂದು ಆಗ್ರಹಿಸಿದ ಪ್ರತಿಭಟನಾಕಾರರು, ಕೊಡಗಿನ ಕೇಳುಗರಿಗೆ ಆಕಾಶವಾಣಿ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದರು.



ಈ ಸಂದರ್ಭ ಸ್ಥಳಕ್ಕೆ ಆಗಮಿಸಿದ ಆಕಾಶವಾಣಿ ಕೇಂದ್ರದ ಕಾರ್ಯಕ್ರಮ ನಿರ್ವಾಹಕರು, ಕೇಂದ್ರ ಕಚೇರಿಯ ಆದೇಶದಂತೆ ನಾವು ಕಾರ್ಯ ನಿರ್ವಹಿಸಬೇಕಾಗುತ್ತದೆ. ಹಿಂದಿನಂತೆ ಸಂಜೆ ಕೂಡ ನಿಧನ ಸುದ್ದಿ ಪ್ರಸಾರ ಮಾಡಲು ಸಾಧ್ಯವಿಲ್ಲ. ತಮ್ಮ ಬೇಡಿಕೆಯನ್ನು ಮೇಲಾಧಿಕಾರಿಗಳಿಗೆ ತಲುಪಿಸಲಾಗುವುದು ಎಂದು ಸ್ಪಷ್ಟಪಡಿಸಿದರು. ಇದೇ ಸಂದರ್ಭ ಆಮ್ ಆದ್ಮಿ ಪಾರ್ಟಿಯ ಪ್ರಮುಖರು ಕಾನೂನು ಹೋರಾಟ ನಡೆಸುವ ಎಚ್ಚರಿಕೆ ನೀಡಿದರು.

ಪಕ್ಷದ ಕೊಡಗು ಉಸ್ತುವಾರಿ ಎಸ್.ಬಿ. ಉದಯ್ ಕುಮಾರ್, ಕೋಳಿಬೈಲು ಚಿಣ್ಣಪ್ಪ ವೆಂಕಟೇಶ್, ಜಿಲ್ಲಾ ಸಂಚಾಲಕ ಹೆಚ್.ಜಿ.ಬಾಲಸುಬ್ರಮಣ್ಯ, ಜಿ.ಬಿ.ಪೃಥ್ವಿ, ವಕೀಲರಾದ ಬಾಲಸುಬ್ರಮಣ್ಯ ಕಂಜರ್ಪಣೆ, ಅಬೂಬಕ್ಕರ್, ಅಲ್ಲಾರಂಡ ರಂಗ ಚಾವಡಿಯ ಸಂಚಾಲಕ ಅಲ್ಲಾರಂಡ ವಿಠಲ ನಂಜಪ್ಪ ಮತ್ತಿತರ ಪ್ರಮುಖರು ಪ್ರತಿಭಟನೆಯಲ್ಲಿದ್ದರು.

ಕಿಗ್ಗಟ್ಟ್ ನಾಡ್ ಹಿರಿಯ ನಾಗರಿಕ ವೇದಿಕೆ ಪದಾಧಿಕಾರಿಗಳ ಆಯ್ಕೆ

ಪೊನ್ನಂಪೇಟೆ,ಏ.25–ಇಲ್ಲಿನ ಕಿಗ್ಗಟ್ಟ್ ನಾಡ್ ಹಿರಿಯ ನಾಗರಿಕ ವೇದಿಕೆ ಮಹಾಸಭೆ ಇತ್ತೀಚೆಗೆ ನಡೆದಿದ್ದು, ಆಡಳಿತ ಮಂಡಳಿ ಸದಸ್ಯರನ್ನು ಈ ಕೆಳಕಂಡಂತೆ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಕಾಟಿಮಾಡ ಜಿಮ್ಮಿ ಅಣ್ಣಯ್ಯ(ಜೀವನ ಪ್ರಸ್ತುತ ಸ್ಥಾಪಕ ಅಧ್ಯಕ್ಷರು), ಕೊಟ್ಟುಕತ್ತೀರ ಪಿ.ಸೋಮಣ್ಣ (ಹಾಲಿ ಅಧ್ಯಕ್ಷರು), ಮಂಡೇಚಂಡ ಪಿ.ಗಣೇಶ್ ಗಣಪತಿ (ಉಪಾಧ್ಯಕ್ಷರು), ಕಾಳಿಮಾಡ ಎಂ.ಮೋಟಯ್ಯ (ಕಾರ್ಯದರ್ಶಿ), ಚೇಂದಿರ ಎಮ್. ಬೋಪಣ್ಣ (ಜಂಟಿ ಕಾರ್ಯದರ್ಶಿ), ಕಳ್ಳಿಚಂಡ ಡಿ.ಕಟ್ಟಿ ಪೂಣಚ್ಚ (ಖಜಾಂಚಿ), ಬೊಳ್ಳಿಯಂಗಡ ಬಾದು ಪೂವಯ್ಯ (ಆಂತರಿಕ ಲೆಕ್ಕ ಪರಿಶೋಧಕರು), ಶ್ರೀಮತಿ ವಾಚಿವಾಡ ಲೌಲಿ ಸೋಮಯ್ಯ (ಮಹಿಳಾ ಸದಸ್ಯೆ), ಶ್ರೀಮತಿ ಹೆಚ್.ಬಿ. ಬೋಜಮ್ಮ (ಮಹಿಳಾ ಸದಸ್ಯೆ), ಶ್ರೀಮತಿ ಕೇಚಟೀರ ಕಾಮಣಿ ಪೂಣಚ್ಚ (ಮಹಿಳಾ ಸದಸ್ಯೆ), ಕಳ್ಳಿಚಂಡ ಎನ್. ಶಂಭು ಪೂವಯ್ಯ (ಸದಸ್ಯರು), ಮದ್ರೀರ ಸಿ. ಕರುಂಬಯ್ಯ (ಸದಸ್ಯರು), ತೀತೀರ ಬಿ. ಜಯ ಅಯ್ಯಪ್ಪ (ಸದಸ್ಯರು), ಕಾಟಿಮಾಡ ಕೆ.ಡಿಕ್ಕಿ ಅಣ್ಣಯ್ಯ (ಸದಸ್ಯರು) ಮತ್ತು ಐನಂಡ ಕೆ.ಮಂದಣ್ಣ (ಕಾನೂನು ಸಲಹೆಗಾರರು).

ವಿಶೇಷಚೇತನರ ಯುಡಿಐಡಿ ಕಾರ್ಡ್ ತ್ವರಿತ ವಿತರಣೆಗೆ ಸೂಚನೆ

ಚಾಮರಾಜನಗರ, ಏ.25– ವಿಶೇಷ ಚೇತನರಿಗೆ ಅನುಕೂಲವಾಗುವಂತೆ ಆಯಾ ತಾಲೂಕು ಹಾಗೂ ಹೋಬಳಿಗಳಲ್ಲಿ ಶಿಬಿರಗಳನ್ನು ಏರ್ಪಡಿಸಿ ಯುಡಿಐಡಿ ಕಾರ್ಡ್‌ಗಳನ್ನು ತ್ವರಿತಗತಿಯಲ್ಲಿ ವಿತರಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಳೇ ಕೆಡಿಪಿ ಸಭಾಂಗಣದಲ್ಲಿ ಸೋಮವಾರ ನಡೆದ ವಿಶೇಷಚೇತನರ ಕುಂದು ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರ್ಕಾರದ ಯೋಜನೆಗಳು ವಿಶೇಷಚೇತನರಿಗೆ ಪಾರದರ್ಶಕವಾಗಿ ತಲುಪಿಸಲು ಯುಡಿಐಡಿ ಕಾರ್ಡ್‌ಗಳು ಅವಶ್ಯಕವಾಗಿದ್ದು, ಜಿಲ್ಲೆಯಲ್ಲಿ ಬಾಕಿ ಉಳಿದಿರುವ ಕಾರ್ಡ್‌ಗಳನ್ನು ಸ್ಥಳೀಯ ಮಟ್ಟದಲ್ಲಿ ವಿಶೇಷ ಶಿಬಿರಗಳನ್ನು ಏರ್ಪಡಿಸಿ ಶೀಘ್ರವಾಗಿ ತಲುಪಿಸುವ ಕೆಲಸ ಆಗಬೇಕು. ಇದಕ್ಕಾಗಿ ವಿಶೇಷಚೇತನರನ್ನು ಕಚೇರಿಗಳಿಗೆ ಅಲೆದಾಡಿಸಬಾರದು ಎಂದು ಅಧಿಕಾರಿಗಳಿಗೆ ಸೂಚಿಸಿದರು.



ಸರ್ಕಾರಿ ಕಚೇರಿಗಳಲ್ಲಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಕೋರ್ಟ್‌ಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ವಿಶೇಷಚೇತನರಿಗೆ ಅನುಕೂಲವಾಗುವಂತೆ ವಿಶೇಷ ಶೌಚಾಲಯ ವ್ಯವಸ್ಥೆ ಕಲ್ಪಿಸಿ ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಶೌಚಾಲಯಗಳ ಸ್ವಚ್ಛತೆ ಕಾಪಾಡಬೇಕು. ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ವಿಶೇಷ ಚೇತನರಿಗೆ ರ‍್ಯಾಂಪ್‌ಗಳ ವ್ಯವಸ್ಥೆ ಮಾಡಬೇಕು ಎಂದರು. ಆರೋಗ್ಯ ಕೇಂದ್ರಗಳಲ್ಲಿ ಅಂಗವೈಕಲ್ಯತೆಯ ಪತ್ತೆ ಹಚ್ಚುವಿಕೆ ಹಾಗೂ ಶೇಕಡವಾರು ಪ್ರಮಾಣವನ್ನು ಪ್ರಮಾಣೀಕರಿಸುವಲ್ಲಿ ವೈದ್ಯರು ಪಾರದರ್ಶಕವಾಗಿ ಕಾರ್ಯ ನಿರ್ವಹಿಸಬೇಕು. ಮಧ್ಯವರ್ತಿಗಳ ಹಾವಳಿಗೆ ಸಿಲುಕದಂತೆ ನೋಡಿಕೊಳ್ಳಬೇಕು. ನಕಲಿ ಅಂಗವೈಕಲ್ಯತೆಯ ಪ್ರಕರಣಗಳಿದ್ದಲ್ಲಿ ತಕ್ಷಣವೇ ರದ್ದುಗೊಳಿಸಬೇಕು. ಅಂತಹ ನಕಲಿ ಪ್ರಮಾಣ ಪತ್ರ ನೀಡುವ ವೈದ್ಯಾಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಸೂಚಿಸಿದರು.

ಯಳಂದೂರು ತಾಲೂಕಿನ ಬೂದಿತಿಟ್ಟು ಗ್ರಾಮದ ವಿಕಲಚೇತನರಾದ ಬಸವಣ್ಣ ಮಾತನಾಡಿ, 2016ರ ವಿಶೇಷಚೇತನರ ಕಾಯ್ದೆ ಅನುಸಾರ ದೂರುಗಳ ಶೀಘ್ರ ಇತ್ಯರ್ಥಕ್ಕಾಗಿ ವಿಶೇಷಚೇತನರಿಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಇದರಿಂದ ಜಿಲ್ಲೆಯ ಎಲ್ಲಾ ವಿಶೇಷಚೇತನರಿಗೆ ಅನುಕೂಲವಾಗಲಿದೆ ಎಂದು ಮನವಿ ಮಾಡಿದರು. ಈ ಸಂಬಂಧ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಈ ಬಗ್ಗೆ ಸೂಕ್ತ ಕ್ರಮ ವಹಿಸಲಾಗುವುದು ಎಂದರು. ಜಿಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಮಹಿಳಾ ಸ್ವ ಸಹಾಯ ಸಂಘಗಳು ಸರ್ಕಾರ ಹಾಗೂ ಬ್ಯಾಂಕ್‌ಗಳಿಂದ ಸಹಾಯಧನ ಸಾಲ ಪಡೆದು ಸ್ವಯಂ ಉದ್ಯೋಗಿಗಳಾಗಿದ್ದಾರೆ. ಅದೇ ರೀತಿ ವಿಕಲಚೇತನರು ಕೂಡ ಸಂಘ ರಚಿಸಿಕೊಂಡು ಸಾಲ ಸೌಲಭ್ಯ ಪಡೆದುಕೊಳ್ಳಬೇಕು ಎಂದರು.

> **6** ಸರ್ಕಾರದ ಹಲವಾರು ಯೋಜನೆಗಳಲ್ಲಿ ವಿಶೇಷಚೇತನರ ಶ್ರೇಯೋಭಿವೃದ್ಧಿಗಾಗಿ ಮೀಸಲಿರುವ ಶೇ. 5ರಷ್ಟು ಅನುದಾನವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ವಿಶೇಷಚೇತನರಿಗೆ ಅಗತ್ಯವಾಗಿರುವ ಸಾಧನ ಸಲಕರಣೆಗಳನ್ನು ಹೊಣೆಗಾರಿಕೆಯಿಂದ ತಲುಪಿಸುವ ಕಾರ್ಯ ಚುರುಕುಗೊಳ್ಳಬೇಕು. ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿಯೂ ಸಹ ಶೇ.5ರಷ್ಟು ಅನುದಾನ ಸದ್ಬಳಕೆಯಾಗಲು ಪರಿಣಾಮಕಾರಿಯಾಗಿ ಜಾರಿಯಾಗಬೇಕು.
>
> –ಚಾರುಲತಾ ಸೋಮಲ್, ಜಿಲ್ಲಾಧಿಕಾರಿ

ಅಂಗವಿಕಲರ ಸಂಘದ ಅಧ್ಯಕ್ಷ ರಮೇಶ್, ಜಿಲ್ಲಾ ಸರ್ಜನ್ ಡಾ.ಶ್ರೀನಿವಾಸ್, ಅಂಗವಿಕಲರ ಇಲಾಖೆಯ ಸಂಜೀವ್ ದಾಸ್, ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿ ಮಹಮ್ಮದ್ ಅಕ್ಬರ್ ಇತರರು ಸಭೆಯಲ್ಲಿ ಹಾಜರಿದ್ದರು. ಸಭೆಯ ಬಳಿಕ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಜಿಲ್ಲಾಡಳಿತ, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ವಿಲಚೇತನರಿಗಾಗಿ ಆಯೋಜಿಸಲಾಗಿದ್ದ ಉದ್ಯೋಗ ಮೇಳಕ್ಕೆ ಭೇಟಿ ನೀಡಿ ಅಧಿಕಾರಿಗಳೊಡನೆ ಚರ್ಚಿಸಿ ಪರಿಶೀಲಿಸಿದರು. ಉದ್ಯೋಗ ತರಬೇತಿ ಪಡೆಯಲಿಚ್ಛಿಸುವ ಆಸಕ್ತ ಅಭ್ಯರ್ಥಿಗಳಿಗಾಗಿ ಕಾರ್ಯಾಗಾರ ಏರ್ಪಡಿಸುವಂತೆ ನಿರ್ದೇಶನ ನೀಡಿದರು.

ಬೇಗೂರಲ್ಲಿ ಅಂಬೇಡ್ಕರ್ ಜಯಂತಿ



ಬೇಗೂರು, ಏ.25(ಕಿರಣ್)– ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮ ದಿನವನ್ನು ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮದ ನಾಡ ಕಚೇರಿಯಲ್ಲಿ ಆಚರಿಸಲಾಯಿತು. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಉಪ ತಹಸೀಲ್ದಾರ್ ಉಮಾ ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ವಿಶ್ವ ಕಂಡ ಒಬ್ಬ ಮಹಾನ್ ಚೇತನ. ದೇಶಕ್ಕೆ ಇವರ ಕೊಡುಗೆ ಅಪಾರವಾದದ್ದು ಎಂದರು.

ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ಇಂದು ನಮ್ಮ ದೇಶದಲ್ಲಿ ಶಾಂತಿ, ಸುವ್ಯವಸ್ಥೆ, ಸಮಾನತೆ ಕಾಣುತ್ತಿದ್ದೇವೆ. ಜನತೆ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಇದಕ್ಕೆ ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಕಾರಣವಾಗಿದೆ. ಇಡೀ ಪ್ರಪಂಚದಲ್ಲೇ ಅತಿದೊಡ್ಡ ಸಂವಿಧಾನ ನಮ್ಮ ದೇಶದ ಸಂವಿಧಾನ ಎಂದು ಹೇಳಿಕೊಳ್ಳಲು ಹೆಮ್ಮೆಯಾಗುತ್ತದೆ. ಇಂತಹ ಒಂದು ದೊಡ್ಡ ಕೊಡುಗೆ ನೀಡಿದ ಅಂಬೇಡ್ಕರ್ ಅವರ ಆದರ್ಶಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ರಾಜಸ್ವ ನಿರೀಕ್ಷಕ ರವಿ, ಗ್ರಾಮ ಲೆಕ್ಕಿಗರಾದ ಮಹದೇವಪ್ಪ, ಮಂಜು, ಜಯಣ್ಣ, ಅಶೋಕ್, ಮಾದೇಶ್, ಗ್ರಾಮ ಸಹಾಯಕರಾದ ರಾಜು, ಪರಶಿವ, ಮಹದೇವ ಹಾಜರಿದ್ದರು.

ಇಂದು ಅಂಬೇಡ್ಕರ್ ಜಯಂತಿ

ಚಾಮರಾಜನಗರ, ಏ.25– ಮೈಸೂರು ವಿಶ್ವವಿದ್ಯಾನಿಲಯ ಹಾಗೂ ನಗರದ ಸುವರ್ಣ ಗಂಗೋತ್ರಿಯ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ ಸಹಯೋಗದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆ ಹಾಗೂ ಸುವರ್ಣದೀಪ್ತಿ–ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮವನ್ನು ಏ.26ರಂದು ಬೆಳಗ್ಗೆ 10 ಗಂಟೆಗೆ ಸುವರ್ಣ ಗಂಗೋತ್ರಿ ಆವರಣದಲ್ಲಿ ಆಯೋಜಿಸಲಾಗಿದೆ.

ಸಂಸದ ವಿ.ಶ್ರೀನಿವಾಸಪ್ರಸಾದ್ ಕಾರ್ಯಕ್ರಮ ಉದ್ಘಾಟಿಸುವರು. ಸುವರ್ಣ ಗಂಗೋತ್ರಿ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.ಆರ್.ಮಹೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಇಂದು ಬಿಜೆಪಿಗೆ ಆಲೂರು ಮಲ್ಲು ಸೇರ್ಪಡೆ



ಚಾಮರಾಜನಗರ,ಏ.25– ಭಾರತೀಯ ಪರಿವರ್ತನಾ ಸಂಘದ ಜಿಲ್ಲಾಧ್ಯಕ್ಷ ಆಲೂರು ಮಲ್ಲು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಬಿಜೆಪಿಗೆ ಸೇರುವುದಾಗಿ ಘೋಷಿಸಿದರು. ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆಲೂರು ಮಲ್ಲು ಮಾತನಾಡಿ, ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಾಳೆ (ಮಂಗಳವಾರ) ಶಾಸಕ ಎನ್.ಮಹೇಶ್ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಿಜೆಪಿ ಸೇರ್ಪಡೆಯಾಗಲಿದ್ದೇನೆ. ನನ್ನ ಜೊತೆ ಕೊಳ್ಳೇಗಾಲ, ಹನೂರು, ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು ತಾಲೂಕುಗಳಿಂದ ನೂರಾರು ಸಂಖ್ಯೆಯಲ್ಲಿ ಅಭಿಮಾನಿಗಳು ಬಿಜೆಪಿ ಸೇರ್ಪಡೆಯಾಗುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಸದಸ್ಯರಾದ ಜಯಶಂಕರ್, ಕಾವುದವಾಡಿ ಮಹದೇವಸ್ವಾಮಿ, ಶಿವಕುಮಾರ್, ಅಂಬಳೆ ಮಹದೇವು ಹಾಜರಿದ್ದರು.

ವಿಶ್ವ ಮಲೇರಿಯಾ ದಿನ: ಜಾಗೃತಿ ಜಾಥಾಕ್ಕೆ ಶಾಸಕರಿಂದ ಚಾಲನೆ



ಚಾಮರಾಜನಗರ, ಏ.25– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿಶ್ವ ಮಲೇರಿಯ ದಿನಾಚರಣೆ ಅಂಗವಾಗಿ ನಗರದಲ್ಲಿ ಸೋಮವಾರ ನಡೆದ ಜಾಗೃತಿ ಜಾಥಾಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಇದೇ ವೇಳೆ ಮಾತನಾಡಿದ ಅವರು, ಮಲೇರಿಯಾ ಸೇರಿದಂತೆ ಇತರೆ ರೋಗಗಳನ್ನು ಮುಂಜಾಗ್ರತೆಯಿಂದ ತಡೆಗಟ್ಟುವುದು ಅಗತ್ಯವಾಗಿದೆ. ಮಲೇರಿಯಾ ಹರಡುವ ಸೊಳ್ಳೆಗಳು ಕೊಳಚೆ ಪ್ರದೇಶಗಳಲ್ಲಿ ಉತ್ಪತ್ತಿಯಾಗುವುದರಿಂದ ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಜಾಥಾ ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಮಲೇರಿಯಾ ಹರಡುವಿಕೆ ಹಾಗೂ ತಡೆಗಟ್ಟುವ ಬಗ್ಗೆ ಎಚ್ಚೆತ್ತುಕೊಳ್ಳಬೇಕು ಎಂದು ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಿಂದ ಹೊರಟ ಜಾಥಾವು 'ನವೀನ ವಿಧಾನಗಳನ್ನು ಬಳಸೋಣ–ಮಲೇರಿಯಾ ಕಡಿಮೆ ಮಾಡಿ ಜೀವ ಉಳಿಸೋಣ' ಎಂಬ ಘೋಷವಾಕ್ಯದೊಂದಿಗೆ ಹೊರಟು ಹೌಸಿಂಗ್ ಬೋರ್ಡ್‌ನ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನದಲ್ಲಿ ಮುಕ್ತಾಯಗೊಂಡಿತು.

ಜಾಥಾದಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಎನ್.ಕಾಂತರಾಜು, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಚಂದ್ರಶೇಖರ್, ತಾಲೂಕು ಆರೋಗ್ಯ ಅಧಿಕಾರಿ ಡಾ.ಶ್ರೀನಿವಾಸ್ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿ, ಸಿಬ್ಬಂದಿ, ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಾಳೆಯಿಂದ ಕನಕಗಿರಿಯಲ್ಲಿ ಅತಿಶಯ ಮಹೋತ್ಸವ

• ಏ.29ಕ್ಕೆ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಪಟ್ಟಾಭಿಷೇಕ ರಜತ ಮಹೋತ್ಸವ • ಮೇ 1ರಂದು ಶ್ರೀ ಬಾಹುಬಲಿ ಸ್ವಾಮಿಗೆ ಮಸ್ತಕಾಭಿಷೇಕ



ಅತಿಶಯ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಕನಕಗಿರಿಗೆ ಆಗಮಿಸಿದ ಮುನಿಶ್ರೀ ಅಮೋಘಕೀರ್ತಿ ಮತ್ತು ಅಮರಕೀರ್ತಿ ಮಹಾರಾಜ ಅವರನ್ನು ಪೂರ್ಣಕುಂಭ, ವಾದ್ಯಗೋಷ್ಠಿ ಜೊತೆ ಕ್ಷೇತ್ರದ ಭುವನಕೀರ್ತಿ ಭಟ್ಟಾರಕಸ್ವಾಮೀಜಿ ಅದ್ಧೂರಿಯಾಗಿ ಸ್ವಾಗತಿಸಿ ಬರಮಾಡಿಕೊಂಡರು. ಈ ವೇಳೆ ಕನಕಗಿರಿ ಅತಿಶಯ ಮಹೋತ್ಸವ ಸಮಿತಿ ಪದಾಧಿಕಾರಿಗಳು ಭಾಗವಹಿಸಿದ್ದರು.

ಮಹೋತ್ಸವಕ್ಕೆ ವೀರೇಂದ್ರ ಹೆಗ್ಗಡೆ ಚಾಲನೆ

ಕನಕಗಿರಿ ಅತಿಶಯ ಮಹೋತ್ಸವ ಏ.27ರಿಂದಲೇ ಪ್ರಾರಂಭವಾದರೂ ಅಧಿಕೃತವಾಗಿ ಮಹೋತ್ಸವ ಉದ್ಘಾಟನೆ ಮತ್ತು ಗ್ರಂಥ ಲೋಕಾರ್ಪಣೆ ಸಮಾರಂಭಕ್ಕೆ ಏ. 30ರಂದು ಪದ್ಮವಿಭೂಷಣ ರಾಜರ್ಷಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಚಾಲನೆ ನೀಡಲಿದ್ದಾರೆ ಎಂದು ಮಹೋತ್ಸವ ಸಮಿತಿಯ ಆಶಾಪ್ರಭು ತಿಳಿಸಿದರು.

ಗುರುಭವನವನ್ನು ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಉದ್ಘಾಟಿಸಲಿದ್ದಾರೆ. ಧ್ಯಾನ ಮಂದಿರವನ್ನು ಪ್ರವಾಸೋದ್ಯಮ ಸಚಿವ ಆನಂದ್‌ಸಿಂಗ್ ಲೋಕಾರ್ಪಣೆಗೊಳಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ, ಸಂಸದ ವಿ.ಶ್ರೀನಿವಾಸಪ್ರಸಾದ್, ಶಾಸಕರಾದ ಪುಟ್ಟರಂಗಶೆಟ್ಟಿ, ಸಿ.ಎಸ್.ನಿರಂಜನ್‌ಕುಮಾರ್, ರಾಮದಾಸ್, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಹಾಗೂ ಮಲೆಯೂರು ಗ್ರಾಪಂಅಧ್ಯಕ್ಷ ಪುಟ್ಟಸ್ವಾಮಿ ಪಾಲ್ಗೊಳ್ಳಲಿದ್ದಾರೆ.

ಚಾಮರಾಜನಗರ, ಏ.25– ತಾಲೂಕಿನ ಮಲೆಯೂರು ಗ್ರಾಮದ ಹೊರ ವಲಯದಲ್ಲಿರುವ ಜೈನರ ಪ್ರಸಿದ್ಧ ಕ್ಷೇತ್ರ ಕನಕಗಿರಿಯಲ್ಲಿ ಏ.27ರಿಂದ ಮೇ 5ರವರೆಗೆ ಕನಕಗಿರಿ ಅತಿಶಯ ಮಹೋತ್ಸವವನ್ನು ಆಯೋಜಿಸಲಾಗಿದೆ ಎಂದು ಮಹೋತ್ಸವ ಸಮಿತಿಯ ಆಶಾಪ್ರಭು ಹಾಗೂ ಅರುಣ್ ಪಂಡಿತ್ ಮಾಹಿತಿ ನೀಡಿದರು. ನಗರದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 9 ದಿನಗಳ ಕಾಲ ಮಹೋತ್ಸವ ನಡೆಯಲಿದ್ದು, ಏ.29ರಂದು ಕನಗಿರಿ ಕ್ಷೇತ್ರದ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಪಟ್ಟಾಭಿಷೇಕ ರಜತ ಮಹೋತ್ಸವ ಹಾಗೂ ಮೇ 1ರಂದು ಶ್ರೀಬಾಹುಬಲಿ ಸ್ವಾಮಿಯ ಮಸ್ತಕಾಭಿಷೇಕ ನಡೆಯಲಿದ್ದು, ಇದು ಮಹೋತ್ಸವದ ಮುಖ್ಯವಾದ ಭಾಗವಾಗಿದೆ ಎಂದು ತಿಳಿಸಿದರು.

ಭುವನಕೀರ್ತಿ ಭಟ್ಟಾರಕರು ಕನಕಗಿರಿ ಮಠದ ಪಟ್ಟಾಭಿಷೇಕ ಪಡೆದ ನಂತರ ನಿರೀಕ್ಷೆಗೂ ಮೀರಿ ಶ್ರೀಕ್ಷೇತ್ರ ಅಭಿವೃದ್ಧಿ ವಿಚಾರದಲ್ಲಿ ದಾಪುಗಾಲು ಇಡುವ ಮೂಲಕ ಪ್ರಮುಖ ಜೈನ ಕ್ಷೇತ್ರಗಳಲ್ಲೊಂದು ಎನಿಸಿದೆ. ಹೀಗಾಗಿ ಅವರ ಪಟ್ಟಾಭಿಷೇಕದ ರಜತ ಮಹೋತ್ಸವದ ಅಂಗವಾಗಿ ಗುರುವಂದನಾ ಕಾರ್ಯ ಕ್ರಮವನ್ನು ಆಯೋಜಿಸಲಾಗಿದ್ದು, ಏ.29 ರಂದು ಬೆಳಗ್ಗೆ 10.30ಕ್ಕೆ ಆರಂಭಗೊಳ್ಳುವ ಸಮಾರಂಭದಲ್ಲಿ ಅಮೋಘ ಕೀರ್ತಿ ಮುನಿಮಹಾರಾಜರು, ಅಮರ ಕೀರ್ತಿ ಮುನಿಮಹಾರಾಜರು, ಶ್ರೀಕ್ಷೇತ್ರ ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಉಳಿದಂತೆ ಲಿಂಗಾಯತ, ವೀರಶೈವ ಮಠಗಳ ಹರವೆ ಸರ್ಪಭೂಷಣ ಸ್ವಾಮೀಜಿ, ಸೋಮಹಳ್ಳಿ ಸಿದ್ದಮಲ್ಲ ಸ್ವಾಮೀಜಿ, ದೇವನೂರು ಮಹಾಂತ ಸ್ವಾಮೀಜಿ, ಮರಿಯಾಲದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಚಾ.ನಗರದ ಚನ್ನಬಸವರಾಜ ಸ್ವಾಮೀಜಿ ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಭಾರತೀಯ ಜೈನ್ ಮಿಲನ್ ಅಧ್ಯಕ್ಷ ಡಿ.ಸುರೇಂದ್ರಕುಮಾರ್ ಹಾಗೂ ಜೈನ ಸಮುದಾಯದ ಮುಖಂಡರು ಪಾಲ್ಗೊಳ್ಳುವರು. ಮಹೋತ್ಸವದ ಪ್ರಮುಖ ಅಂಗವಾದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಅವರಿಗೆ ಮಹಾಮಸ್ತಕಾಭಿಷೇಕ ಮೇ 1ರಂದು ಪ್ರಾರಂಭವಾಗಿ ಮೇ 5ರವರೆಗೂ ನೆರವೇರಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿಯ ವೈಶಾಲಿ ಪ್ರಭು, ಶೈಲೇಂದ್ರಕುಮಾರ್, ವಿನೋದ್ ಕುಮಾರ್, ಪ್ರಚಾರ ಸಮಿತಿ ಸಿದ್ಧಾರ್ಥ ಜೈನ್ ಇತರರು ಹಾಜರಿದ್ದರು.

ಒಂದನೇ ಪುಟದಿಂದ

ರಾಜ್ಯ ಪ್ರವೇಶಿಸಿದ 4ನೇ ಅಲೆ

ಮಾಹಿತಿ ಪಡೆದಿದ್ದಲ್ಲದೆ, ತಕ್ಷಣಕ್ಕೆ ಕೆಲ ಮಾರ್ಗಸೂಚಿಗಳನ್ನು ಜಾರಿಗೊಳಿಸಿದೆ.

ಮುಂದಿನ ನಾಲ್ಕೈದು ವಾರಗಳಲ್ಲಿ ಅಲೆ ಪೂರ್ಣ ಪ್ರಮಾಣದಲ್ಲಿ ಹರಡುವ ಸಾಧ್ಯತೆ ಇದೆ. ಈ ಬಗ್ಗೆ ಮುನ್ನೆಚ್ಚರಿಕಾ ಕ್ರಮಕೈಗೊಳ್ಳಲು ಜಿಲ್ಲಾಡಳಿತಕ್ಕೆ ಸಭೆ ಸೂಚನೆ ನೀಡಿದೆ. ಸಭೆಯಲ್ಲಿ ಭಾಗವಹಿಸಿದ ತಾಂತ್ರಿಕ ಸಲಹಾ ಸಮಿತಿಯ ತಜ್ಞರು, ಒಮಿಕ್ರಾನ್ ಉಪತಳಿಯಿಂದಲೇ ಸೋಂಕು ಹೆಚ್ಚಳವಾಗುತ್ತದೆ. ಆದರೆ ಇದರ ತೀವ್ರತೆ ಕಡಿಮೆಯಿದ್ದು, ಆಸ್ಪತ್ರೆಗೆ ದಾಖಲಾಗುವ ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಿದ್ದಾರೆ.

ಆದರೆ ದೀರ್ಘಕಾಲಿಕ ಅನಾರೋಗ್ಯವುಳ್ಳವರು ಎಚ್ಚರ ವಹಿಸಬೇಕು. ಹೃದಯ ಸಮಸ್ಯೆಗೆ ಸಂಬಂಧಿಸಿದಂತೆ, ಶ್ವಾಸಕೋಶ, ಕ್ಯಾನ್ಸರ್, ಅಸ್ತಮಾದಂತಹ ದೀರ್ಘಕಾಲಿನ ಅನಾರೋಗ್ಯ ಸಮಸ್ಯೆಯುಳ್ಳವರು ಎಚ್ಚರ ವಹಿಸಬೇಕು. ದೆಹಲಿಯಲ್ಲಿ ದಿನದಿಂದ ದಿನಕ್ಕೆ ಸೋಂಕಿನ ಪ್ರಮಾಣ ಹೆಚ್ಚಿದೆ. ಆದರೆ ಅಲ್ಲಿ ಎರಡು ಮತ್ತು ಮೂರನೇ ಲಸಿಕೆ ಜನರು ಪಡೆದುಕೊಂಡಿರುವುದರಿಂದ ಯಾರೂ ಆಸ್ಪತ್ರೆಗೆ ದಾಖಲಾಗದೆ ಗುಣಮುಖರಾಗುತ್ತಿದ್ದಾರೆ. ಲಸಿಕೆ ಪಡೆಯದವರ ಮೇಲೆ ಇದರ ಪರಿಣಾಮ ಹೆಚ್ಚಿರುತ್ತದೆ. ಆದ್ದರಿಂದ ಲಸಿಕೆ ಪಡೆಯದವರು ಮೊದಲು ಲಸಿಕೆ ಪಡೆದು, ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ಜನರಲ್ಲಿ ಮತ್ತಷ್ಟು ಮುಂಜಾಗ್ರತಾ ವಹಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಸದಸ್ಯರು ಸಲಹೆ ಮಾಡಿದ್ದಾರೆ. ಯಾವ ರಾಷ್ಟ್ರಗಳಲ್ಲಿ ಪೂರ್ಣವಾಗಿ ಲಸಿಕಾಕರಣವಾಗಿಲ್ಲವೋ ಅಂತಹ ಕಡೆ ರೋಗ ಉಲ್ಬಣಗೊಂಡಿದೆ ಮತ್ತು ಸಮಸ್ಯೆಯೂ ಹೆಚ್ಚಿದೆ. ನಮ್ಮ ರಾಷ್ಟ್ರದಲ್ಲಿ ಲಸಿಕಾಕರಣವಾದ ನಂತರ ಮೂರನೇ ಅಲೆ ಬಂದರೂ ಅದು ಜನರ ಮೇಲೆ ತೀವ್ರವಾದ ಪರಿಣಾಮ ಬೀರಲಿಲ್ಲ. ನಾಲ್ಕನೇ ಅಲೆಯು ಇದರ ಉಪ ತಳಿಯೇ ಆಗಿರುವುದರಿಂದ ಜನ ಆತಂಕಪಡುವ ಅಗತ್ಯವಿಲ್ಲ ಎಂದಿದ್ದಾರೆ.

ನಾಲ್ಕೈದು ವಾರ ಬಾಧಿಸಲಿದೆ

ಮಾಸ್ಕ್ ಧರಿಸಬೇಕು, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು ಮತ್ತು ಮೂರನೇ ಹಂತದ ಲಸಿಕೆಗೆ ಸಜ್ಜಾಗಬೇಕು ಎಂದು ವಿವರಿಸಿದರು. ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿದರೂ ಸದ್ಯಕ್ಕೆ ಮಾಸ್ಕ್ ಹಾಕದವರಿಂದ ದಂಡ ವಸೂಲಿ ಮಾಡಲಾಗುವುದಿಲ್ಲ ಎಂದ ಅವರು, ಜನರಲ್ಲಿ ತಾನಾಗಿಯೇ ಇದರ ಬಗ್ಗೆ ಅರಿವು ಮೂಡಬೇಕು ಎಂದರು. ಬೆಂಗಳೂರಿನಲ್ಲಿ ಕೋವಿಡ್ ಸೋಂಕಿತರ ಪ್ರಮಾಣ ಹೆಚ್ಚಾಗುತ್ತಿದ್ದು, ಶೇಕಡಾ 1.9ರಷ್ಟು ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಸೋಂಕಿತರ ಮೇಲೆ ಹೆಚ್ಚಿನ ನಿಗಾ ವಹಿಸಲು, ಅವರನ್ನು ಟೆಲಿ ಮಾನಿಟರಿಂಗ್ ಮಾಡಲು ಸೂಚಿಸಲಾಗಿದೆ ಎಂದು ಹೇಳಿದರು.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಜಗತ್ತಿನ ವಿವಿಧ ದೇಶಗಳಲ್ಲಿ ಕೋವಿಡ್ ಸೋಂಕಿತರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ಇದಕ್ಕೆ ಲಸಿಕೆ ಕೊಡುವ ವಿಷಯದಲ್ಲಿ ಆಗಿರುವ ವಿಳಂಬವೂ ಕಾರಣವಾಗಿರಬಹುದು ಎಂದು ಸುಧಾಕರ್ ಹೇಳಿದರು.

ದಕ್ಷಿಣ ಕೊರಿಯಾ, ಥೈಲ್ಯಾಂಡ್, ಜಪಾನ್‌ನಂತಹ ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಆ ದೇಶಗಳಿಂದ ಬೆಂಗಳೂರಿಗೆ ವಿಮಾನದಲ್ಲಿ ಬರುವವರ ಮೇಲೆ ನಿಗಾ ಇಡುವುದು, ಅವರ ಸಂಪರ್ಕಿತರ ಮೇಲೆ ನಿಗಾ ಇಡುವುದು ಸರ್ಕಾರದ ಸದ್ಯದ ನಿರ್ಧಾರ ಎಂದು ನುಡಿದರು. ದೆಹಲಿಯಲ್ಲಿ ಕೋವಿಡ್ ಸೋಂಕಿತರ ಪ್ರಮಾಣ ಹೆಚ್ಚಿರುವುದರಿಂದ ಅಲ್ಲಿಂದ ನಾವು ವರದಿ ತರಿಸಿಕೊಂಡಿದ್ದೇವೆ. ಅದರ ಪ್ರಕಾರ ಮೂರನೇ ಅಲೆಯಂತೆ ಇದು ಕೂಡಾ ದುರ್ಬಲವಾಗಿದ್ದು, ಜನ ಆಸ್ಪತ್ರೆಗೆ ದಾಖಲಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿಲ್ಲ.

ಇಷ್ಟಾದರೂ ಜನ ಎಚ್ಚರ ವಹಿಸಬೇಕು, ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು. ಜನಜಂಗುಳಿಯ ಪ್ರದೇಶಗಳಲ್ಲಿ, ಒಳಾಂಗಣ ವೇದಿಕೆಗಳಲ್ಲಿ ಕಟ್ಟೆಚ್ಚರ ವಹಿಸಬೇಕು ಎಂದು ಹೇಳಿದರು.

ಸಾಮಾಜಿಕ ಅಂತರ ಕಡ್ಡಾಯ

ಇಡಲಾಗಿದೆ. ಅವಶ್ಯಕತೆ ಇದ್ದರೆ ಸೋಂಕಿತರಿಗೆ ವಿಶೇಷ ಮೇಲ್ವಿಚಾರಣೆ ಜೊತೆಗೆ ಚಿಕಿತ್ಸೆ ಕೂಡ ನೀಡಲಾಗುವುದು ಎಂದರು. ವಿಶ್ವ ಆರೋಗ್ಯ ಸಂಸ್ಥೆ ಲಸಿಕೆ ತೆಗೆದುಕೊಳ್ಳದೇ ಇರುವುದು ಸೋಂಕು ಉಲ್ಬಣಕ್ಕೆ ಕಾರಣವಾಗಿದೆ ಎಂದು ಹೇಳಿದೆ. ಹೀಗಾಗಿ ಎಲ್ಲರೂ ಲಸಿಕೆ ಪಡೆಯಬೇಕು. 3ನೇ ಡೋಸ್ ಲಸಿಕೆ ಪಡೆಯಲು ಅರ್ಹರಾದವರು ಅದನ್ನು ಪಡೆದುಕೊಳ್ಳಬೇಕು. ಹೆಚ್ಚಿನ ರಕ್ಷಣೆ ಪಡೆದುಕೊಳ್ಳಬೇಕು. ಮಾಧ್ಯಮಗಳು ಕೂಡ ಲಸಿಕಕರಣ, ಮಾಸ್ಕ್ ಧರಿಸುವಿಕೆ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು ಎಂದು ಹೇಳಿದರು. ದಕ್ಷಿಣ ಕೊರಿಯಾ, ಥೈಲೆಂಡ್ ಮತ್ತು ಜಪಾನ್ ದೇಶಗಳಲ್ಲಿ ದಿನದಿಂದ ದಿನಕ್ಕೆ ಪ್ರಕರಣಗಳು ಹೆಚ್ಚುತ್ತಿದೆ. ಹೀಗಾಗಿ ಆ ದೇಶಗಳಿಂದ ಬರುವವರ ಬಗ್ಗೆ ವಿಮಾನ ನಿಲ್ದಾಣಗಳಲ್ಲಿ ನಿಗಾ ಇರಿಸಲಾಗಿದೆ. ಅವರ ಸಂಪರ್ಕಿತರ ಬಗ್ಗೆ ಹಾಗೂ ಪ್ರಯಾಣ ಮಾಡಿದವರ ಬಗ್ಗೆ ಟ್ರ್ಯಾಕ್ ಮಾಡಲಾಗುತ್ತಿದೆ. ಟೆಲಿ ಮಾನಿಟರಿಂಗ್ ಕೂಡ ಮಾಡಲಾಗುತ್ತಿದೆ ಎಂದು ಹೇಳಿದರು.

ಡಾ.ಸೌಮ್ಯ ಬಂಧನ

ಈ ಸಂಬಂಧ ಬೆಂಗಳೂರಿನ ಮಲ್ಲೇಶ್ವರಂ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು. ಮೊಬೈಲ್ ವಾಟ್ಸಾಪ್‌ನಿಂದ ಪ್ರಶ್ನೆಪತ್ರಿಕೆ ಪ್ರತಿ ರವಾನೆಯಾಗಿದೆ ಎಂಬ ಸುಳಿವು ದೊರೆತ ತಕ್ಷಣ ಸೌಮ್ಯರನ್ನು ಬಂಧಿಸಿದ್ದು, ತೀವ್ರ ವಿಚಾರಣೆಗೊಳಪಡಿಸಲಾಗಿದೆ. ಈ ಪ್ರಶ್ನೆಪತ್ರಿಕೆ ನೀಡಿದವರ್ಯಾರು? ಎಷ್ಟು ಮಂದಿಗೆ ರವಾನೆ ಮಾಡಲಾಗಿದೆ? ಪ್ರಶ್ನೆ ಪತ್ರಿಕೆ ಸೋರಿಕೆಯ ಕಿಂಗ್‌ಪಿನ್ ಯಾರು? ಎಂಬುದರ ಮೂಲ ಪತ್ತೆಗೆ ಮುಂದಾಗಿರುವ ಪೊಲೀಸರು, ತಮ್ಮ ವಶದಲ್ಲಿರುವ ಡಾ. ಸೌಮ್ಯರಿಂದ ಅಗತ್ಯ ಮಾಹಿತಿ ಕಲೆ ಹಾಕುತ್ತಿದ್ದಾರೆ. ಆದರೆ ಮೈಸೂರಿನ ಈ ಡಾ. ಸೌಮ್ಯ ಯಾರು, ಎಲ್ಲಿ ನೆಲೆಸಿದ್ದಾರೆ, ಅವರ ಹಿನ್ನೆಲೆ ಏನು ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕಲು ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ.

ವಿಭಾಗದ ಮುಖ್ಯಸ್ಥರಿಗೆ ಪತ್ರ

ಪತ್ರಿಕೆ, ಟಿವಿಗಳಲ್ಲಿ ಸುದ್ದಿ ಪ್ರಕಟವಾದ ನಂತರವಷ್ಟೇ ನಮಗೆ ತಿಳಿಯಿತು. ಪೊಲೀಸರು ಬಂಧಿಸಿದ್ದಾರೆಂದು ತಿಳಿದ ತಕ್ಷಣ ಇಂದು ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥರೊಂದಿಗೆ ಮಾತನಾಡಿ, ಸೌಮ್ಯ ಯಾರು, ಯಾವಾಗ ನೇಮಕಗೊಂಡರು ಎಂಬಿತ್ಯಾದಿ ಮಾಹಿತಿ ನೀಡುವಂತೆ ಪತ್ರ ಮುಖೇನ ಕೋರಿದ್ದೇನೆ ಎಂದರು. ಪೊಲೀಸರಾಗಲೀ, ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳಾ ಗಲೀ ನಮಗೆ ಯಾವುದೇ ಮಾಹಿತಿ ನೀಡಿಲ್ಲ. ವಿಭಾಗದ ಮುಖ್ಯಸ್ಥರಿಂದ ವರದಿ ಬಂದ ಮೇಲೆ ಪರಿಸ್ಥಿತಿ ಏನೆಂಬು ದನ್ನು ಗಮನಿಸಿ ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಎಫ್‌ಐಆರ್ ಆಗಿರುವುದರಿಂದ ಡಾ.ಸೌಮ್ಯ ವಿರುದ್ಧ ನಾವು ಅಗತ್ಯ ಶಿಸ್ತು ಕ್ರಮ ಕೈಗೊಳ್ಳುತ್ತೇವೆ ಎಂದು ಪ್ರೊ. ಶಿವಪ್ಪ ನುಡಿದರು.

ಅರ್ಧ ಗಂಟೆ ಮುನ್ನ ಪ್ರಶ್ನೆ ರವಾನೆ

ವಾಟ್ಸಾಪ್ ನೋಡಿರಲೇ ಇಲ್ಲ. ಪರೀಕ್ಷೆ ಮುಗಿಸಿ, ಮನೆಗೆ ಬಂದು ವಾಟ್ಸಾಪ್ ತೆರೆದಾಗ ತಾನು ಬರೆದು ಬಂದಿದ್ದ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿದ್ದ ಪ್ರಶ್ನೆಗಳೇ ಇವು ಎಂಬುದು ದೃಢಪಟ್ಟಿದ್ದರಿಂದ ಅಂದೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ದೂರು ನೀಡಿದ್ದರು. ಹಾಗಾಗಿ ಅಸಿಸ್ಟೆಂಟ್ ಪ್ರೊಫೆಸರ್‌ಗಳ ನೇಮಕಾತಿ ಪರೀಕ್ಷಾ ಪ್ರಶ್ನೆಪತ್ರಿಕೆ ಬಯಲು ಹಗರಣ ಬೆಳಕಿಗೆ ಬಂದಿದೆ ಎಂದು ತಿಳಿದು ಬಂದಿದೆ.

ಪಿಯು ಉಪನ್ಯಾಸಕರ ಹುದ್ದೆಗಾಗಿ 2020ರಲ್ಲಿ ನಡೆದ ಪರೀಕ್ಷೆಯಲ್ಲಿ ಆತ ಮೊದಲ ರ‍್ಯಾಂಕ್ ಗಳಿಸಿ ಆಯ್ಕೆಯಾಗಿ ಸದ್ಯ ಬಿಡದಿ ಬಳಿಯ ಕಾಲೇಜೊಂದರಲ್ಲಿ ಕೆಲಸ ಮಾಡುತ್ತಿದ್ದು, ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕ ಹುದ್ದೆ ಬಯಸಿ ಈ ಪರೀಕ್ಷೆ ಬರೆದಿದ್ದರು. ಈತ ಪ್ರತಿಭಾನ್ವಿತನಾದ್ದರಿಂದ ತನ್ನ ಭವಿಷ್ಯದ ದೃಷ್ಟಿಯಿಂದ ಕೂಡಲೇ ದೂರು ನೀಡುವ ಧೈರ್ಯ ಮಾಡಿದ್ದಾರೆ. ಡಾ. ಸೌಮ್ಯ, ಮೈಸೂರಿನ ಆಲನಹಳ್ಳಿ ಬಳಿಯ ಗಿರಿದರ್ಶಿನಿ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ತಂದೆ, ತಾಯಿ, ಸಹೋದರನೊಂದಿಗೆ ವಾಸ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ಪ್ರಕರಣ ಸಂಬಂಧ ಮೈಸೂರಲ್ಲಿ ಮತ್ತೋರ್ವ ಅತಿಥಿ ಉಪನ್ಯಾಸಕರು ಸಿಕ್ಕಿ ಬೀಳುವ ಸಾಧ್ಯತೆ ಇದೆ. ಈ ಸಂಬಂಧ ಎರಡು ಮನೆಗಳ ಶೋಧನೆಯಾಗುವ ಸಂಭವವಿದೆ ಎಂದು ಮೂಲಗಳು ತಿಳಿಸಿವೆ. ಪ್ರಕರಣ ದಾಖಲಿಸಿಕೊಂಡಿರುವ ಮಲ್ಲೇಶ್ವರಂ ಠಾಣೆ ಇನ್ಸ್‌ಪೆಕ್ಟರ್ ಚಂದ್ರಶೇಖರ್ ತನಿಖೆ ನಡೆಸುತ್ತಿದ್ದಾರೆ. ಮಲ್ಲೇಶ್ವರಂ ಉಪ ವಿಭಾಗದ ಎಸಿಪಿ ವೆಂಕಟೇಶ್ ನಾಯ್ಡು ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚಿಸಲಾಗಿದೆ.

ಭೂಮಿ ಹಿಂಪಡೆಯಲು ನಿರ್ಧಾರ

ಭೂಮಿಯನ್ನು ರೈತರಿಂದ ವಶಪಡಿಸಿಕೊಂಡು ಇಪ್ಪತ್ತು ವರ್ಷಗಳು ಕಳೆದಿವೆ. ಈಗ ಸದರಿ ಪರಿಹಾರವನ್ನು ನೀಡದಿದ್ದರೆ ಭೂಮಿಯನ್ನು ಮರಳಿ ಸ್ವಾಧೀನಪಡಿಸಿಕೊಂಡು ರೈತರಿಗೆ ನೀಡಲಾಗುವುದು ಎಂದರು. ಬೆಂಗಳೂರು ಜನತೆಗೆ ಈಗ ಇದು ದೊಡ್ಡ ಹೊರೆಯಾಗಿ ಪರಿಣಮಿಸಿದೆ ಎಂದ ಕಂದಾಯ ಸಚಿವರು, ಯೋಜನೆಯಡಿ ಕಾಂಕ್ರೀಟ್ ರೋಡ್ ಆಗಬೇಕಿತ್ತು.ಆದರೆ ಆಗಿಲ್ಲ. ಕ್ರಾಸ್ ರೋಡ್ ಅಗಲ ಮಾಡಬೇಕಾಗಿತ್ತು.ಆದರೆ ಅದರಲ್ಲೂ ನಿಯಮ ಉಲ್ಲಂಘನೆಯಾಗಿದೆ ಎಂದರು.

ಕೆಲವೆಡೆ 20,30,40 ಅಡಿಗಳಷ್ಟು ಉಲ್ಲಂಘನೆಯಾಗಿದೆ ಎಂದ ಅವರು, ಇಷ್ಟೆಲ್ಲದರ ನಡುವೆ ಈ ಹಿಂದೆ ನೈಸ್ ಯೋಜನೆಗೆ ಹೆಚ್ಚುವರಿ 543 ಎಕರೆ ಭೂಮಿಯನ್ನು ಕೊಡಲಾಗಿತ್ತು. ಇದನ್ನು ವಾಪಸ್ ಪಡೆಯಲು ಇಂದು ನಡೆದ ಸಂಪುಟ ಉಪಸಮಿತಿ ಸಭೆ ನಿರ್ಣಯಿಸಿದೆ ಎಂದರು. ಅಕ್ಟೋಬರ್, ನವೆಂಬರ್ ತಿಂಗಳ ಒಳಗಾಗಿ ನೈಸ್ ಸಂಸ್ಥೆಗೆ ನೀಡಲಾಗಿದ್ದ ಹೆಚ್ಚುವರಿ 543 ಎಕರೆ ಭೂಮಿಯನ್ನು ಹಿಂಪಡೆಯಲು ಸಂಪುಟ ಉಪಸಮಿತಿ ಸಭೆ ತೀರ್ಮಾನಿಸಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ವಿಶ್ವ ಮಲೇರಿಯಾ ದಿನ: ಮಹಾಮಾರಿಯ ಬಗ್ಗೆ ಜನ ಜಾಗೃತಿ



ವಿಶ್ವ ಮಲೇರಿಯಾ ದಿನದ ಅಂಗವಾಗಿ ಜಿಲ್ಲಾ ಆರೋಗ್ಯ ಇಲಾಖೆಯಿಂದ ಮೈಸೂರಿನ ಕುರುಬಾರಹಳ್ಳಿ ವೃತ್ತದ ಬಳಿ ಚಾಮುಂಡಿ ಬೆಟ್ಟದ ರಸ್ತೆಯಲ್ಲಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಏರ್ಪಡಿಸಿದ್ದ ಮಲೇರಿಯಾ ಜನಜಾಗೃತಿ ಜಾಥಾಕ್ಕೆ ನಗರಪಾಲಿಕೆ ಸದಸ್ಯೆ ರೂಪಾ ಚಾಲನೆ ನೀಡಿದರು. ಚಿತ್ರದಲ್ಲಿ ನಗರಪಾಲಿಕೆ ಸದಸ್ಯೆ ಛಾಯಾದೇವಿ, ಜಿಲ್ಲಾ ರೋಗವಾಹಕ ಆಶ್ರಿತ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ ಇನ್ನಿತರರನ್ನು ಕಾಣಬಹುದು.

ಸೊಳ್ಳೆಗಳ ನಿಯಂತ್ರಣ ಹೇಗೆ?



■ ಎಲ್ಲಾ ನೀರಿನ ತೊಟ್ಟಿಗಳು, ಡ್ರಮ್‌ಗಳು, ಬ್ಯಾರೆಲ್‌ಗಳು, ಏರ್‌ಕೂಲರ್, ತೊಟ್ಟಿ ಇತ್ಯಾದಿಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಚೆನ್ನಾಗಿ ಉಜ್ಜಿ ತೊಳೆದು ಒಣಗಿಸಿ, ಮತ್ತೆ ಭರ್ತಿ ಮಾಡಬೇಕು. ■ ನೀರನ್ನು ಖಾಲಿ ಮಾಡಲು ಸಾಧ್ಯವಿಲ್ಲದ ವಸ್ತುಗಳಾದ ಟೈರು, ಎಳನೀರು ಚಿಪ್ಪು, ಮರದ ಪೊಟರೆ, ಹೂವಿನ ಕುಂಡಗಳ ತಟ್ಟೆಗಳು, ಒಡೆದ ಬಾಟಲಿ, ಕುಡಿದು ಬಿಸಾಡಿದ ಪ್ಲಾಸ್ಟಿಕ್ ಲೋಟ, ಬಾಟಲ್ ಮುಂತಾದವುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರ ವಹಿಸಿ, ಸೂಕ್ತ ವಿಲೇವಾರಿ ಮಾಡಬೇಕು. ■ ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ನಿರೋಧಕ ಹಾಗೂ ಸೊಳ್ಳೆ ಪರದೆಗಳನ್ನು ಬಳಸಬೇಕು. ಮೈ ತುಂಬಾ ಬಟ್ಟೆ ಧರಿಸಬೇಕು. ■ ಸೊಳ್ಳೆಗಳ ಕಚ್ಚುವಿಕೆಯಿಂದ ರಕ್ಷಣೆ ಪಡೆದುಕೊಳ್ಳಬೇಕು. ■ ಆರೋಗ್ಯ ಇಲಾಖೆ ಹಮ್ಮಿಕೊಂಡ ಸೊಳ್ಳೆ ನಿಯಂತ್ರಣ ಕ್ರಮಗಳಿಗೆ ಸಹಕರಿಸಬೇಕು.

> 2025ಕ್ಕೆ ಮೈಸೂರು ಜಿಲ್ಲೆಯನ್ನು ಮಲೇರಿಯಾ ಮುಕ್ತ ಜಿಲ್ಲೆಯಾಗಿಸಬೇಕಿದ್ದು, ಇದಕ್ಕೆ ಎಲ್ಲಾ ಸಾರ್ವಜನಿಕರು, ಸಮಾಜ ಸೇವಕರು, ನಾಗರಿಕರು, ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು, ಮಾಧ್ಯಮದವರ ಸಹಕಾರ ಅತ್ಯವಶ್ಯಕವಾಗಿದೆ. ಹೀಗಾಗಿ 2025ರ ವೇಳೆಗೆ ಮಲೇರಿಯಾ ನಿರ್ಮೂಲನೆಗೆ ಪಣ ತೊಡೋಣ. ಮಲೇರಿಯಾ ಮುಕ್ತ ಸಮಾಜ ನಿರ್ಮಿಸೋಣ.
>
> - ಡಾ.ಎಸ್.ಚಿದಂಬರ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ

ಮೈಸೂರು, ಏ.25(ಆರ್‌ಕೆಬಿ)– ವಿಶ್ವ ಮಲೇರಿಯಾ ದಿನದ ಅಂಗವಾಗಿ ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಕಚೇರಿ ಆಶ್ರಯದಲ್ಲಿ ಸೋಮವಾರ ಮಲೇರಿಯಾ ಜನ ಜಾಗೃತಿ ಜಾಥಾ ನಡೆಸಲಾಯಿತು.

'ನವೀನ ವಿಧಾನಗಳನ್ನು ಬಳಸೋಣ– ಮಲೇರಿಯಾ ಕಡಿಮೆ ಮಾಡಿ ಜೀವ ಉಳಿಸೋಣ' ಘೋಷ ವಾಕ್ಯದೊಡನೆ ಆರೋಗ್ಯ ಇಲಾಖೆಯ ಸಿಬ್ಬಂದಿ ಮೈಸೂರಿನ ಕುರುಬಾರಹಳ್ಳಿ ವೃತ್ತದ ಬಳಿ ಚಾಮುಂಡಿಬೆಟ್ಟದ ರಸ್ತೆಯಲ್ಲಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸುತ್ತಮುತ್ತಲಿನ ಹಲವು ರಸ್ತೆಗಳಲ್ಲಿ ಜಾಗೃತಿ ಜಾಥಾ ನಡೆಸಿದರು.

ಜಾಥಾಕ್ಕೆ ಚಾಲನೆ ನೀಡಿದ ನಗರಪಾಲಿಕೆ ಸದಸ್ಯೆ ರೂಪಾ ಮಾತನಾಡಿ, ನಗರದ ಸ್ವಚ್ಛತೆ ಮತ್ತು ಆರೋಗ್ಯ ಜವಾಬ್ದಾರಿ ನಗರದ ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ. ನಿಮ್ಮ ನಿಮ್ಮ ಮನೆ, ರಸ್ತೆಗಳಲ್ಲಿ ಚರಂಡಿ ಮತ್ತು ಸುತ್ತಮುತ್ತಲಿನ ಸ್ವಚ್ಛತೆಗೆ ಆದ್ಯತೆ ನೀಡಬೇಕು. ನವೀನ ವಿಧಾನ ಬಳಸಿ, ಮಲೇರಿಯಾ ರೋಗ ಬರದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳಿಗೆ ಆರೋಗ್ಯ ಇಲಾಖೆಯೊಂದಿಗೆ ಎಲ್ಲರೂ ಸಹಕರಿಸಿ, ಜೀವ ಉಳಿಸೋಣ ಎಂದು ತಿಳಿಸಿದರು.


ಈ ಸಂದರ್ಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ, ಸಕ್ರಿಯ ಜ್ವರ ಸಮೀಕ್ಷೆ, ಸ್ಥಿರ ಜ್ವರ ಸಮೀಕ್ಷೆ, ಮಲೇರಿಯಾ ಚಿಕಿತ್ಸಾಲಯ, ರೋಗದ ಶೀಘ್ರ ಪತ್ತೆ ಹಾಗೂ ಸಂಪೂರ್ಣ ಚಿಕಿತ್ಸೆ, ಸೂಕ್ಷ್ಮದರ್ಶಕ ವ್ಯವಸ್ಥೆ ಇರುವ ಕಡೆ ರಕ್ತಲೇಪನ ಸಂಗ್ರಹ, ಪರೀಕ್ಷೆ, ರೋಗ ಖಚಿತತೆ, ಅದೇ ದಿನವೇ ತೀವ್ರ ಚಿಕಿತ್ಸೆ ನೀಡಲಾಗುತ್ತದೆ. ಬೇರೆ ಪ್ರದೇಶಗಳಿಂದ ಕೆಲಸಕ್ಕಾಗಿ ಬಂದಿರುವವರು, ವಲಸೆ ಹೋಗುವ ಜನರಿಗೆ ಪ್ರಾಶಸ್ತ್ಯ ನೀಡಲಾಗುತ್ತದೆ ಎಂದರು.

ಮೈಸೂರು ಜಿಲ್ಲೆಯಲ್ಲಿ 2012ರಲ್ಲಿ 4,22,926 ರಕ್ತಲೇಪನ ಸಂಗ್ರಹ ಮತ್ತು ಪರೀಕ್ಷೆ ಮಾಡಲಾಗಿದ್ದು, ಈ ಪೈಕಿ 72 ಮಲೇರಿಯಾ ಪ್ರಕರಣಗಳು ಕಂಡು ಬಂದಿದ್ದವು. 2013ರಲ್ಲಿ 63, 2014ರಲ್ಲಿ 54, 2015ರಲ್ಲಿ 34, 2016ರಲ್ಲಿ 43 ಮಲೇರಿಯಾ ಪ್ರಕರಣಗಳು ಪತ್ತೆಯಾಗಿದ್ದವು. ಮಾರನೇ ವರ್ಷ, ಅಂದರೆ 2017ರಿಂದ ಇಲ್ಲಿಯವರೆಗೆ ಯಾವುದೇ ಮಲೇರಿಯಾ ಪ್ರಕರಣಗಳು ಪತ್ತೆಯಾಗಿಲ್ಲ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಕಾರ್ಪೊರೇಟರ್ ಛಾಯಾದೇವಿ, ತಾಲೂಕು ಆರೋಗ್ಯಾಧಿಕಾರಿ ರಾಜೇಶ್ವರಿ, ಐಎಂಎ ಮೈಸೂರು ಅಧ್ಯಕ್ಷ ಡಾ.ದೇವಿ ಆನಂದ್, ಕಾರ್ಯದರ್ಶಿ ಡಾ.ಸಿ. ಎಂ.ಜಗದೀಶ್, ಜಿಲ್ಲಾ ಕಾಲರಾ ನಿಯಂತ್ರಣಾಧಿಕಾರಿ ಡಾ.ಉಮೇಶ್, ಆರೋಗ್ಯ ನಿರೀಕ್ಷಕ ಎಂ.ನಂಜುಂಡಯ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪ್ರಾಮಾಣಿಕ ಪರೀಕ್ಷೆ ನಡೆಸಲು ಸರ್ಕಾರ ವಿಫಲ

ಎಂಎಲ್‌ಸಿ ವಿಶ್ವನಾಥ್ ಅಸಮಾಧಾನ



ಮೈಸೂರು, ಏ.25(ಆರ್‌ಕೆಬಿ)– ಪಿಎಸ್‌ಐ ನೇಮಕಾತಿ ಅಕ್ರಮ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರದ ವಿರುದ್ಧ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅಸಮಾಧಾನ ಹೊರ ಹಾಕಿದ್ದಾರೆ.

ಮೈಸೂರಿನಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಾಮಾಣಿಕವಾಗಿ ಪರೀಕ್ಷೆ ನಡೆಸಲು ಸರ್ಕಾರ ವಿಫಲವಾಗಿದೆ. ಪರೀಕ್ಷೆಗಳು ಪಾವಿತ್ರ್ಯತೆ ಕಳೆದುಕೊಂಡಿವೆ. ಎಲ್ಲವೂ ದುಡ್ಡಿನಲ್ಲಿ ಮುಳುಗಿವೆ. ಬಿ.ವೈ.ವಿಜಯೇಂದ್ರ ಅವರ ಕಡೆಯಿಂದ ಗೀತಾ ಅವರನ್ನು ಕೆಪಿಎಸ್‌ಸಿಗೆ ಸೇರಿಸಲಾಗಿದೆ. ಹಿಂದೆ ಇದೇ ರೀತಿ ಮಂಗಳ ಎಂಬುವರನ್ನು ನೇಮಕ ಮಾಡಲಾಗಿತ್ತು. ಅವರು ಹಣ ಪಡೆದು ಸಿಕ್ಕಿ ಹಾಕಿಕೊಂಡರು ಎಂದ ಅವರು, ಕೆಪಿಎಸ್‌ಸಿ ಪದ್ಧತಿಯನ್ನೇ ಹಾಳು ಮಾಡಿದರೆ ಉತ್ತಮ ಆಡಳಿತ ಬಯಸುವುದಾದರು ಹೇಗೆ? ಎಂದು ಪ್ರಶ್ನಿಸಿದರು.

ಯುಪಿಎಸ್‌ಸಿ ನಮಗೆ ಮಾಡೆಲ್: ಯುಪಿಎಸ್‌ಸಿ ಮಾಡೆಲ್ ಅನ್ನು ಇಲ್ಲಿಗೆ ಏಕೆ ತರಲಾಗುತ್ತಿಲ್ಲ ಎಂದು ಪ್ರಶ್ನಿಸಿದ ಅವರು, ನಮಗೆಲ್ಲ ನಾಚಿಕೆ ಆಗಬೇಕು. ಸರ್ಕಾರ ತಕ್ಷಣ ಮಧ್ಯ ಪ್ರವೇಶ ಮಾಡಬೇಕು. ಕೆಪಿಎಸ್‌ಸಿಗೆ ಚಿಕಿತ್ಸೆ ನೀಡಬೇಕು. ಸಹಾಯಕ ಪ್ರಾಧ್ಯಾಪಕ ಹುದ್ದೆಯೂ 30, 40, 50 ಲಕ್ಷಕ್ಕೆ ನಿಂತಿದೆ. ಹೀಗಾದರೆ ನಮ್ಮ ಆಡಳಿತ ಎಲ್ಲಿಗೆ ಹೋಗಿದೆ. ಇದೆಲ್ಲವೂ ಸರಿ ಆಗಬೇಕು ಎಂದು ವಿಶ್ವನಾಥ್ ಆಗ್ರಹಿಸಿದರು.

ರಾಜ್ಯದಲ್ಲಿ ಬುಲ್ಡೋಜರ್ ಪದ್ಧತಿ ಅನುಸರಿಸುವ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಇದು ಸರಿಯಾದ ಕ್ರಮ ಅಲ್ಲ. ಸರ್ಕಾರ ಜನರ ಬದುಕನ್ನು ಕಟ್ಟಬೇಕೇ ಹೊರತು ಬದುಕನ್ನು ಕಸಿದುಕೊಳ್ಳಬಾರದು. ಸರ್ಕಾರದ ಈ ನಡೆ 1976ರ ತುರ್ಕಮನ್ ಗೇಟ್ ಪರಿಸ್ಥಿತಿ ನೆನಪಿಸುತ್ತಿದೆ. ಆಗ ಬುಲ್ಡೋಜರ್ ಬಳಸಿದ ಸಂಜಯ್ ಗಾಂಧಿ ಅವರಿಂದ ಇಂದಿರಾ ಗಾಂಧಿ ದೊಡ್ಡ ಬೆಲೆ ತೆರಬೇಕಾಯಿತು. ಇದೇ ಪರಿಸ್ಥಿತಿ ಮತ್ತೆ ಮರುಕಳಿಸುತ್ತದೆ. ಸರ್ಕಾರ ನಡೆಸುವವರು ಇತಿಹಾಸವನ್ನು ನೆನೆಪಿಸಿಕೊಳ್ಳಬೇಕು. ಇಲ್ಲವಾದರೆ ಸರಿಯಾದ ಬೆಲೆ ತೆರಬೇಕಾಗುತ್ತೆ ಎಂದು ಎಚ್ಚರಿಸಿದರು.

ಪ್ರಮೋದ್ ಮುತಾಲಿಕ್ ಯಾರು?: ರಾಜ್ಯದಲ್ಲಿ ಭಾವನಾತ್ಮಕ ವಿಚಾರಗಳ ಚರ್ಚೆ ನಡೆಯುತ್ತಿರುವ ಹಿನ್ನೆಲೆ ಈ ಕುರಿತು ಮಾತನಾಡಿದ ವಿಶ್ವನಾಥ್, ಬದುಕು ಕೊಡುವ, ಜನಹಿತ ಕಾಪಾಡುವ ಜೀವ ಕೊಡುವ ಸರ್ಕಾರ ಆಗಬೇಕು. ಜೀವ ತೆಗೆಯೋ ಸರ್ಕಾರ ಆಗಬಾರದು. ಯಾರದು ಪ್ರಮೋದ್ ಮುತಾಲಿಕ್. ಪಂಚಾಯ್ತಿ ಮೆಂಬರಾ? ಆತನಿಗೆ ಏನು ಅನುಭವ ಇದೆ. ಸರ್ಕಾರ ಇಂಥವರ ಬಗ್ಗೆ ಕ್ರಮ ಕೈಗೊಳ್ಳೋಕೆ ಆಗಲ್ಲ ಅಂದ್ರೆ ಏನು? ಇದೇನ್ ಮುತಾಲಿಕ್ ದೇಸಾಯಿ ಸರ್ಕಾರನಾ..?. ಆರ್‌ಎಸ್‌ಎಸ್ ಸರ್ಕಾರನಾ, ವಿಹೆಚ್‌ಪಿ ಸರ್ಕಾರವಾ..? ಮುತಾಲಿಕ್ ಸರ್ಕಾರ ನಡೆಸುತ್ತಿದ್ದಾರಾ..?. ಜನತಂತ್ರ ವ್ಯವಸ್ಥೆಯಲ್ಲಿ ಸರ್ಕಾರದ ಬಗ್ಗೆ ಯಾವ ಸಂದೇಶ ಹೋಗುತ್ತದೆ. ಇಂಥವರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೇ ಎಂದು ಕಿಡಿ ಕಾರಿದರು.

ಬಿಎಸ್‌ವೈ ದೊಡ್ಡತನ ಪತ್ರ ಬರೆದಿರೋದು ಒಳ್ಳೆಯ ಬೆಳವಣಿಗೆ: ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ತಮ್ಮ ಹೆಸರು ನಾಮಕರಣ ಮಾಡಬಾರದು ಎಂದು ಹೇಳಿರುವ ಬಿ.ಎಸ್. ಯಡಿಯೂರಪ್ಪ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ಇದು ಬಿಎಸ್‌ವೈ ಅವರ ದೊಡ್ಡತನ, ಪತ್ರ ಬರೆದಿರೋದು ಒಳ್ಳೆಯ ಬೆಳವಣಿಗೆ. ಶಿವಮೊಗ್ಗದಲ್ಲಿ ಎಂತೆಂತಹ ಮಹಾನ್ ನಾಯಕರು ಹುಟ್ಟಿ ಬೆಳೆದಿದ್ದಾರೆ. ರಾಷ್ಟ್ರಕವಿ ಕುವೆಂಪು ಜನ್ಮ ತಾಳಿದ ಊರು ಅದು. ಅಂಥವರ ಹೆಸರನ್ನು ಘೋಷಿಸದೆ ಏನೇನೋ ಮಾಡ್ತಿರಾ..? ಬಿಎಸ್‌ವೈ ಹೆಸರು ಘೋಷಣೆಯಿಂದ ಓಟು ಬರುವುದಿಲ್ಲ. ಗಿಮಿಕ್‌ನಿಂದ ಯಾವ ಮತಗಳೂ ಬರುವುದಿಲ್ಲ ಎಂದರು.



ಮೈಸೂರಿನ ವಾರ್ಡ್ ನಂ.35ರ ಹೆಚ್‌ಪಿಓ ಆರ್‌ಎಂಎಸ್ ಲೇಔಟ್‌ನ ಬಲಮುರಿ ಗಣಪತಿ ದೇವಸ್ಥಾನದ ರಸ್ತೆ ಕಾಮಗಾರಿಗೆ ನಗರ ಪಾಲಿಕೆ ಸದಸ್ಯ ಸಾತ್ವಿಕ್ ಸಂದೇಶ್ ಸ್ವಾಮಿ ಸೋಮವಾರ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರಿಧರ್, ಮುಖಂಡರಾದ ಶ್ರೀಕಂಠಮೂರ್ತಿ, ಮಂಜು ಸಿ.ಗೌಡ, ಮಮತಾ ಚಂದ್ರಶೇಖರ್, ನಾಗೇಶ್, ಸತೀಶ್, ಚೂಡಯ್ಯ, ಅಫ್ತಾಬ್, ಮುನಿಸ್ವಾಮಿ, ಜಗದೀಶ್, ಶಿವು ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರು ಟೆಕ್ ಸಮಿಟ್ ಏರ್ಪಡಿಸಲು ನಿರ್ಧಾರ

ಮುಖ್ಯಮಂತ್ರಿ ಬೊಮ್ಮಾಯಿ ಪ್ರಕಟ

ಬೆಂಗಳೂರು, ಏ.25 (ಕೆಎಂಶಿ)– ಬೆಂಗಳೂರು ಟೆಕ್ ಸಮಿಟ್ 25 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಈ ಬಾರಿಯ ಬೆಂಗಳೂರು ಟೆಕ್ ಸಮಿಟ್ ಅನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

BENGALURU TECH SUMMIT

ಅವರು ಇಂದು ಬೆಂಗಳೂರು ಟೆಕ್ ಸಮಿಟ್ ಕರ್ಟನ್ ರೈಸರ್ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು.

ನವೆಂಬರ್ ಮಾಹೆಯಲ್ಲಿ ಬೆಂಗಳೂರು ಟೆಕ್ ಸಮಿಟ್ ಆಯೋಜಿಸಿರುವ ಪ್ರಯುಕ್ತ ವಿವಿಧ ವಲಯದ ಕೈಗಾರಿಕೋದ್ಯಮಿಗಳೊಂದಿಗೆ ಚರ್ಚೆ ನಡೆಸಲಾಗಿದ್ದು, ಹಲವಾರು ಸಲಹೆಗಳನ್ನು ಪಡೆದುಕೊಳ್ಳಲಾಗಿದೆ. ಕೈಗಾರಿಕೆಗಳಿಗೆ ಪೂರಕವಾದ ನೀತಿಗಳು, ಎಕೋಸಿಸ್ಟಂ ಮೂಲಸೌಕರ್ಯ, ತಾಂತ್ರಿಕತೆಗಳ ಬಗ್ಗೆ ಬಹಳಷ್ಟು ಸಲಹೆಗಳನ್ನು ಕೈಗಾರಿಕೋದ್ಯಮಿಗಳು ನೀಡಿದ್ದು, ಅವುಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದರು.

ಬೆಂಗಳೂರು ಸಮಿಟ್ ತಾಂತ್ರಿಕ ಕ್ಷೇತ್ರಕ್ಕೆ ಹೊಸ ಆಯಾಮ ನೀಡುವಲ್ಲಿ ಇಂದಿನ ಸಭೆ ಫಲಪ್ರದವಾಗಿದೆ. ಮುಂಬರುವ ದಿನಗಳಲ್ಲಿ ವಿವಿಧ ಕೈಗಾರಿಕಾ ವಲಯಗಳಿಗೂ ಸರ್ಕಾರ ಇಂಬು ನೀಡಲಿದೆ. ಬೆಂಗಳೂರನ್ನು ವಿಶ್ವದಲ್ಲಿಯೇ ನಂ.1 ಸಿಲಿಕಾನ್ ಸಿಟಿ ಮಾಡುವ ಚಿಂತನೆ ಸರ್ಕಾರಕ್ಕಿದೆ. ಬೆಂಗಳೂರಿನ ಹೊರವಲಯಗಳಲ್ಲಿಯೂ ಮೂಲಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುತ್ತಿರುವ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಲಾಗಿದೆ ಎಂದರು.

ಕೋವಿಡ್ ಸಭೆ ಇಂದು ಮಧ್ಯಾಹ್ನ ಏರ್ಪಡಿಸಿದ್ದು, ಕೋವಿಡ್ ಸ್ಥಿತಿಗತಿ ಬದಲಾವಣೆ ಕುರಿತು ಚರ್ಚೆ ಕೈಗೊಳ್ಳಲಾಗುವುದು. ಕೋವಿಡ್ ಕುರಿತು ಪ್ರಧಾನಮಂತ್ರಿಗಳು ಏಪ್ರಿಲ್ 27ರಂದು ಸಭೆ ಕರೆದಿದ್ದಾರೆ. ಅದರ ಪೂರ್ವಭಾವಿಯಾಗಿ ರಾಜ್ಯದ ಕೋವಿಡ್ ಸ್ಥಿತಿಗತಿ, ತಜ್ಞರ ಅಭಿಪ್ರಾಯ, ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲು ಇಂದಿನ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು.

'ಉದ್ಯಮಿಯಾಗು ಉದ್ಯೋಗ ನೀಡು' ಕಾರ್ಯಕ್ರಮ

ಮೈಸೂರು, ಏ.25– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ 'ಉದ್ಯಮಿಯಾಗು ಉದ್ಯೋಗ ನೀಡು' ಕಾರ್ಯಕ್ರಮವನ್ನು ಏಪ್ರಿಲ್ 28ರಂದು ಬೆಳಗ್ಗೆ 9.30 ಗಂಟೆಗೆ ಹುಣಸೂರು ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಸ್ವಯಂ ಉದ್ಯೋಗ ಸ್ಥಾಪಿಸುವವರಿಗೆ ಸರ್ಕಾರದ ವತಿಯಿಂದ ಸಿಗುವ ಸೌಲಭ್ಯಗಳು, ಉತ್ಪನ್ನಗಳ ಆಯ್ಕೆ, ಉದ್ಯಮಿಗಳ ಗುಣಲಕ್ಷಣಗಳು ಮುಂತಾದ ವಿಷಯಗಳ ಕುರಿತು ಯಶಸ್ವಿ ಉದ್ದಿಮೆದಾರರ ಅಥವಾ ಸಂಪನ್ಮೂಲ ವ್ಯಕ್ತಿಗಳು ಮಾಹಿತಿಯನ್ನು ನೀಡಲಿದ್ದು, ಸ್ವಯಂ ಉದ್ಯೋಗ ಆಸಕ್ತರು ಹಾಗೂ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ.

ಕಾರ್ಯಕ್ರಮದಲಿ ಭಾಗವಹಿಸುವವರು https://ebiz.karnataka.gov.in/eBiz/Public/EntrepreneurRegistration ವೆಬ್‌ಸೈಟ್‌ನಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ. 27, ರಾಜೀವ್ ತಾರಾನಾಥ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ

ಮೈಸೂರು, ಏ. 25– ಬೆಳಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯವು ಪಂಡಿತ್ ರಾಜೀವ್ ತಾರಾನಾಥ್ ಅವರಿಗೆ ಡಾಕ್ಟರ್ ಆಫ್ ಲೆಟರ್ಸ್ ಗೌರವ ಡಾಕ್ಟರೇಟ್‌ನ್ನು ಏ. 27ರಂದು ರಾಜೀವ್ ತಾರಾನಾಥ್ ಅವರ ಮೈಸೂರಿನ ನಿವಾಸದಲ್ಲಿ ಪ್ರದಾನ ಮಾಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪಂಚಾಯತ್ ರಾಜ್ ವ್ಯವಸ್ಥೆಗೆ ಭೂ ಸುಧಾರಣಾ ಕಾಯಿದೆ ಜಾರಿಗೊಳಿಸುವ ಹಕ್ಕು ನೀಡಬೇಕು

'ಭಾರತದಲ್ಲಿ ಮೂರು ದಶಕಗಳ ಪಂಚಾಯತ್ ರಾಜ್ ಸಂಸ್ಥೆಗಳು' ವಿಚಾರ ಸಂಕಿರಣದಲ್ಲಿ ಪ್ರೊ.ಮುಜಾಫರ್ ಅಸ್ಸಾದಿ ಅಭಿಮತ

ಮೈಸೂರು, ಏ.25(ಆರ್‌ಕೆಬಿ)– ಪಂಚಾಯತ್ ವ್ಯವಸ್ಥೆಗಳಿಗೆ ಭೂ ಸುಧಾರಣಾ ಕಾಯಿದೆಗಳನ್ನು ಜಾರಿಗೊಳಿಸುವ ಹಕ್ಕು ಕೊಡಬೇಕು. ಯಾವುದೇ ಜಾಗತಿಕ ಬಂಡವಾಳ ನಿಮ್ಮೊಂದಿಗೆ ಒಪ್ಪುದದ ಹೆಸರಿನಲ್ಲಿ ಅಥವಾ ಬೀಜ ಸಂಸ್ಕೃತಿ ಹಾಗೂ ಜೈವಿಕ ಸಂಸ್ಕೃತಿಯನ್ನು ನಾಶ ಮಾಡುವ ಹೆಸರಿನಲ್ಲಿ ನಮ್ಮನ್ನು ಮಾರುಕಟ್ಟೆಯೊಳಗೆ ತರುವ ಹೆಸರಿನಲ್ಲಿ ಬರದಂತೆ ನೋಡಿಕೊಳ್ಳುವುದು ಅಗತ್ಯ ಎಂದು ಮೈಸೂರು ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗದ ಪ್ರೊ.ಮುಜಾಫರ್ ಅಸ್ಸಾದಿ ಅಭಿಪ್ರಾಯಪಟ್ಟರು.



ಮೈಸೂರು ವಿವಿ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಸಾರ್ವಜನಿಕ ಅಧ್ಯಯನ ವಿಭಾಗದ ವತಿಯಿಂದ ಏರ್ಪಡಿಸಿದ್ದ 'ಭಾರತದಲ್ಲಿ ಮೂರು ದಶಕಗಳ ಪಂಚಾಯತ್ ರಾಜ್ ಸಂಸ್ಥೆಗಳು' ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಪ್ರೊ.ಮುಜಾಫರ್ ಅಸ್ಸಾದಿ ಮಾತನಾಡಿದರು. ಚಿತ್ರದಲ್ಲಿ ಡಾ.ಸಿ.ಎಸ್.ಚಂದ್ರಿಕಾ, ಪ್ರೊ.ಕೃಷ್ಣ ಹೊಂಬಾಳೆ, ಎಂ.ಬಿ.ಪದ್ಮಶೇಖರ್ ಪಾಂಡೆ, ಪ್ರೊ.ಜಿ.ಟಿ.ರಾಮಚಂದ್ರಪ್ಪ, ಸಿ.ಎಲ್.ಸೋಮಶೇಖರ್ ಅವರನ್ನು ಕಾಣಬಹುದು.

ಮೈಸೂರು ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ ಮತ್ತು ಸಾರ್ವಜನಿಕ ಅಧ್ಯಯನ ವಿಭಾಗದ ವತಿಯಿಂದ ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗದ ಸಭಾಂಗಣದಲ್ಲಿ ಸೋಮವಾರ ಏರ್ಪಡಿಸಿದ್ದ 'ಭಾರತದಲ್ಲಿ ಮೂರು ದಶಕಗಳ ಪಂಚಾಯತ್ ರಾಜ್ ಸಂಸ್ಥೆಗಳು' ಕುರಿತ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ಜಾಗತೀಕರಣ ಮತ್ತು ಆಧುನಿಕತೆಯ ಬದಲಾವಣೆಯ ಸಂದರ್ಭದಲ್ಲಿ ಕೆಲವು ಸಾಂಪ್ರದಾಯಿಕ ಹಕ್ಕುಗಳನ್ನು ಚಲಾಯಿಸಬೇಕಿದೆ. ಜೊತೆಗೆ ನಮ್ಮ ಭೌತಿಕ ಹಕ್ಕನ್ನು ಉಳಿಸಿಕೊಳ್ಳಬೇಕಾಗಿದೆ. ಕೃಷಿ ಭೂಮಿಯ ಬಿಕ್ಕಟ್ಟುಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹೇಗೆ ಬಳಸಬಹುದು ಎಂಬುದು ಚರ್ಚೆಯಾಗಬೇಕಾಗಿದೆ. ಇಂದಿನ ಸಂದರ್ಭದಲ್ಲಿ ನಮಗೆ ಹೊಸ ರೂಪದ ಹೊಸ ತಿದ್ದುಪಡಿಗಳು ಬೇಕು. ಜಾಗತೀಕರಣದ ಸಂದರ್ಭದಲ್ಲಿ ಜಾಗತಿಕ ಜ್ಞಾನವನ್ನು ಗ್ರಾಮೀಣ ಪ್ರದೇಶಕ್ಕೆ ತರಬೇಕಿದೆ ಎಂದು ಹೇಳಿದರು.

ಇಂದು ಗ್ರಾಮೀಣ ಪ್ರದೇಶದ ಸ್ವರೂಪವೇ ಸಂಪೂರ್ಣ ಬದಲಾಗಿದೆ. ಮಾಹಿತಿ ತಂತ್ರಜ್ಞಾನ ಕೇವಲ ನಗರ ಪ್ರದೇಶಗಳಿಗೆ, ಮೇಲ್ವರ್ಗಕ್ಕೆ ಮಾತ್ರ ಸೀಮಿತವಾಗದೇ ಅತ್ಯಂತ ಕೆಳಗಿನ ಪ್ರದೇಶಗಳಿಗೂ ತಲುಪಬೇಕು. ಆ ಮೂಲಕ ನಾವು ಇಡೀ ಗ್ರಾಮೀಣ ಚೌಕಟ್ಟು, ಸಂಬಂಧಗಳು, ಮೌಲ್ಯಗಳನ್ನು ಬದಲಾಯಿಸಬೇಕು ಎಂದು ಅಭಿಪ್ರಾಯಪಟ್ಟರು.

ನಾವಿಂದು ನಮ್ಮ ಸಂಸ್ಕೃತಿಯ ಪ್ರತೀಕವಾದ ಬೀಜ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಬೇವಿನ ಗಿಡದ ಭೌತಿಕ ಹಕ್ಕನ್ನು ಕಸಿದುಕೊಳ್ಳುವ ಮೊದಲು ಅದನ್ನು ತಪ್ಪಿಸಬೇಕಾಗಿದೆ. ಹಾಗಾಗಿ ಅವುಗಳನ್ನು ದಾಖಲೀಕರಣ ಮಾಡುವುದು ಅವಶ್ಯ. ಪಂಚಾಯತ್ ರಾಜ್ ವ್ಯವಸ್ಥೆಗೆ ದಾಖಲೀಕರಣ ಮಾಡುವ ವ್ಯವಸ್ಥೆ ನೀಡದಿದ್ದರೆ ನಾವು ನಮ್ಮತನ, ಸಂಸ್ಕೃತಿ, ಬೀಜ ಸಂಸ್ಕೃತಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಜಂಟಿ ನಿರ್ದೇಶಕ ಎಂ.ಬಿ.ಪದ್ಮಶೇಖರ್ ಪಾಂಡೆ, ಕಾರ್ಯಕ್ರಮ ಕಾರ್ಯನಿರ್ವಾಹಕ ನಿರ್ದೇಶಕ ಪ್ರೊ.ಕೃಷ್ಣ ಹೊಂಬಾಳೆ, ಸಂಯೋಜಕ ಪ್ರೊ.ಜಿ. ಟಿ.ರಾಮಚಂದ್ರಪ್ಪ, ಪ್ರಾಯೋಜಕಿ ಮತ್ತು ಸಂಘಟನಾ ಕಾರ್ಯದರ್ಶಿ ಡಾ.ಸಿ.ಎಸ್.ಚಂದ್ರಿಕಾ, ತಾಂತ್ರಿಕ ಸಂಚಾಲಕ ಸಿ.ಎನ್.ಸೋಮಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ದೇಶದಲ್ಲಿ ಸಂವಿಧಾನ ಜಾರಿಯಿಂದ ಜನ ಜಾಗೃತಿ

ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಲ್ಲಿ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ



ಹೆಚ್.ಡಿ.ಕೋಟೆ, ಏ.25(ಮಂಜು)– ದೇಶದಲ್ಲಿ ಸಂವಿಧಾನ ಜಾರಿಯಾಗಿದ್ದರಿಂದ ಜನರು ಜಾಗೃತರಾಗಿದ್ದಾರೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಆವರಣದಲ್ಲಿ ಸೋಮವಾರ ತಾಲೂಕು ಆದಿ ಕರ್ನಾಟಕ ಮಹಾಸಭಾ ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್ ಅವರ 131ನೇ ಜಯಂತಿಯಲ್ಲಿ ಮಾತನಾಡಿದ ಅವರು, ಎಲ್ಲಿವರೆಗೆ ಜನ ಜಾಗೃತರಾಗುವುದಿಲ್ಲವೋ ಅಲ್ಲಿವರೆಗೆ ದಬ್ಬಾಳಿಕೆಗೆ ಒಳಗಾಗಬೇಕಾಗುತ್ತದೆ. ಅಂಬೇಡ್ಕರ್ ಅವರು ಬದ್ಧತೆ, ಆಳವಾದ ಅಧ್ಯಯನದಿಂದ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಉತ್ತಮ ಸಂವಿಧಾನ ರಚಿಸಿಕೊಟ್ಟಿದ್ದಾರೆ ಎಂದರು.

ಅಂಬೇಡ್ಕರ್ ಅವರ 125ನೇ ಜನ್ಮದಿನವನ್ನು ವಿಶ್ವ ಸಂಸ್ಥೆ ಜ್ಞಾನದ ದಿನವನ್ನಾಗಿ ಆಚರಿಸಿ ಸಮ ಸಮಾಜ ನಿರ್ಮಾಣವಾಗಬೇಕು ಎಂದು ದನಿಗೂಡಿಸಿದೆ ಎಂದ ಅವರು, ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆಯುವವರು ದೇಶದ್ರೋಹಿಗಳು ಹಾಗೂ ಸಂವಿಧಾನ ವಿರೋಧಿಗಳು ಎಂದರು.

ಧರ್ಮ ವ್ಯಕ್ತಿಯ ಐಚ್ಛಿಕ ವಿಷಯವಾಗಿದ್ದು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಸಂವಿಧಾನದಲ್ಲಿ ನೀಡಲಾಗಿದೆ. ಮಹಾನಾಯಕ ಧಾರಾವಾಹಿಯನ್ನು ಎಲ್ಲಾ ಸಮಾಜದವರು ನೋಡುವ ಮೂಲಕ ಅಂಬೇಡ್ಕರ್ ಜೀವನ ಸಾಧನೆಗಳನ್ನು ಒಪ್ಪಿ ಗೌರವ ಸೂಚಿಸಿದ್ದಾರೆ ಎಂದರು.

ಮಾಜಿ ಸಂಸದ ಆರ್.ಧ್ರುವನಾರಾಯಣ್ ಮಾತನಾಡಿ, ಅಂಬೇಡ್ಕರ್ ಅವರನ್ನು ಪ್ರತಿಯೊಬ್ಬರೂ ನಿಜ ಜೀವನದಲ್ಲಿ ಆದರ್ಶ ಪುರುಷರನ್ನಾಗಿ ಇಟ್ಟುಕೊಳ್ಳಬೇಕು. ಅವರ ಜೀವನ ಚರಿತ್ರೆ ತೆರದ ಪುಸ್ತಕವಾಗಿದೆ. ದೇಶದ ಒಳಿತಿಗಾಗಿ ತಮ್ಮ ಜೀವನ ಸಮರ್ಪಿಸುವ ಮೂಲಕ ಮಹಾತ್ಮ ರಾಗಿದ್ದಾರೆ ಎಂದರು.

ಇದೇ ವೇಳೆ ಆದಿ ಕರ್ನಾಟಕ ಮಹಾಸಭಾದಿಂದ ತಾಲೂಕಿನ ಶೇ.75ರಷ್ಟು ಗ್ರಾಮಗಳಲ್ಲಿ ಸ್ಮಶಾನಗಳ ಅವಶ್ಯಕತೆ ಇದೆ. ತಾಲೂಕಿನಲ್ಲಿ ಅಪೂರ್ಣಗೊಂಡಿರುವ ಅಂಬೇಡ್ಕರ್ ಭವನಗಳನ್ನು ಪೂರ್ಣಗೊಳಿಸುವುದು. ಸರಗೂರು ತಾಲೂಕು ಕೇಂದ್ರದಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು ಮಾಡಬೇಕು. ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಮಾಡುವಂತೆ ಶಾಸಕರು ಹಾಗೂ ಗಣ್ಯರಿಗೆ ಮನವಿ ಸಲ್ಲಿಸಲಾಯಿತು. ಕಾರ್ಯಕ್ರಮಕ್ಕೂ ಮೊದಲು ಅಲಂಕೃತ ರಥದಲ್ಲಿ ಅಂಬೇಡ್ಕರ್ ಪುತ್ಥಳಿ ಇಟ್ಟು ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು ನಿವೃತ್ತ ನ್ಯಾಯಾಧೀಶ ನಾಗ ಮೋಹನ್‌ದಾಸ್ ಬರೆದ ಸಂವಿಧಾನ ಓದು ಪುಸ್ತಕವನ್ನು ಗಣ್ಯರಿಗೆ ವಿತರಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ, ಮಾಜಿ ಶಾಸಕ ಚಿಕ್ಕಣ್ಣ, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಮುಖಂಡರಾದ ಹೆಚ್.ಸಿ.ಲಕ್ಷ್ಮಣ್, ಚಾ.ನಂಜುಂಡಮೂರ್ತಿ, ಮಂಚಯ್ಯ, ಬೆಟ್ಟಯ್ಯ, ಪುಟ್ಟಯ್ಯ, ಶಿವಣ್ಣ, ಮಹದೇವ್, ವೆಂಕಟಸ್ವಾಮಿ, ಮೈಮುಲ್ ನಿರ್ದೇಶಕ ಹಿರೇಗೌಡ, ಚಿಕ್ಕವೀರನಾಯಕ, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ, ಭಾಗ್ಯಲಕ್ಷ್ಮಿ, ಪುರಸಭಾ ಉಪಾಧ್ಯಕ್ಷೆ ಗೀತಾ, ಸದಸ್ಯರಾದ ಮಧುಕುಮಾರ್, ನಂಜಪ್ಪ, ಸವಿತಾ, ಶಾಂತಮ್ಮ, ನಾಗಮ್ಮ, ರಾಜು ವಿಶ್ವಕರ್ಮ, ವೆಂಕಟೇಶ್, ರಮೇಶ್, ಶಿವಣ್ಣ, ಕೆ.ಮಂಜು, ಕೆಂಡಗಣ್ಣಸ್ವಾಮಿ, ಶಿವರಾಜು, ಉಮೇಶ್, ಚಾ.ಶಿವಕುಮಾರ್, ಸಣ್ಣಕುಮಾರ್, ಸತೀಶ್‌ಗೌಡ, ಸೋಮೇಶ್, ಬಿ.ವಿ.ಬಸವರಾಜು, ಬಸಪ್ಪ, ಪಿ.ರವಿ, ದೊಡ್ಡನಾಯಕ, ಏಜಾಜ್ ಪಾಷ ಇದ್ದರು.

> ಸ್ವಾತಂತ್ರ್ಯ ಪೂರ್ವದಲ್ಲಿ ಮತದಾನದ ಹಕ್ಕು ಕೇವಲ ಮಹಾರಾಜರಿಗೆ, ಶ್ರೀಮಂತರಿಗೆ ಹಾಗೂ ತೆರಿಗೆ ಕಟ್ಟುವವರಿಗೆ ಮಾತ್ರ ಇತ್ತು. ಸ್ವಾತಂತ್ರ್ಯದ ನಂತರ ಅಂಬೇಡ್ಕರ್ ಸಂವಿಧಾನದಲ್ಲಿ ಮಹಿಳೆಯರು, ಶೋಷಿತರು, ಹಿಂದುಳಿದವರು ಸೇರಿದಂತೆ ಎಲ್ಲರಿಗೂ ಮತದಾನದ ಹಕ್ಕನ್ನು ನೀಡಿದ್ದಾರೆ.
> – ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ.

ತಂದ್ರೆ ಅಂಕನಹಳ್ಳಿ ಪಿಎಸಿಎಸ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಭೇರ್ಯ, ಏ.25– ಸಾಲಿಗ್ರಾಮ ತಾಲೂಕಿನ ತಂದ್ರೆ ಅಂಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಮಂಜೇಗೌಡ ಮತ್ತು ಉಪಾಧ್ಯಕ್ಷರಾಗಿ ಎ.ಯೋಗೀಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಇವರಿಬ್ಬರನ್ನು ಹೊರತುಪಡಿಸಿ ಬೇರಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಹಕಾರ ಇಲಾಖೆಯ ಎಂ.ಆರ್.ಶಿವಕುಮಾರ್ ಅವಿರೋಧ ಆಯ್ಕೆ ಘೋಷಿಸಿದರು.

ಚುನಾವಣಾ ಸಭೆಯಲ್ಲಿ ನಿರ್ದೇಶಕರಾದ ನಟೇಶ್, ಕುಮಾರ್, ಸಂಪತ್ ಕುಮಾರ್, ಕೆ.ಯೋಗೇಶ್, ಸರ್ವಮಂಗಳ, ಸುಶೀಲಮ್ಮ, ಗೋವಿಂದಯ್ಯ, ಗಣೇಶ್, ವೆಂಕಟೇಶ ನಾಯಕ, ಕಾಂತರಾಜನಾಯಕ, ಜಿಲ್ಲಾ ಬ್ಯಾಂಕಿನ ಪ್ರತಿನಿಧಿ ಸತೀಶ್, ಸಂಘದ ಸಿಇಓ ರಾಜಶೇಖರಮೂರ್ತಿ, ಸಹಾಯಕ ಮಹೇಶ್ ಹಾಜರಿದ್ದರು.

ಅಧ್ಯಕ್ಷ ಮಂಜೇಗೌಡ ಮಾತನಾಡಿ, ಮುಂದಿನ ದಿನಗಳಲ್ಲಿ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಜತೆಗೆ ಸದಸ್ಯರ ಹಿತಕ್ಕೆ ಬದ್ಧನಾಗಿ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು. ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಮಂಜೇಗೌಡ ಮತ್ತು ಎ.ಯೋಗೇಶ್ ಅವರ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮ ಆಚರಿಸಿದರು.

ತಂದ್ರೆ ಗ್ರಾಪಂ ಮಾಜಿ ಅಧ್ಯಕ್ಷ ಟಿ.ಪಿ.ನಟರಾಜು, ಮುಖಂಡರಾದ ಬಸವರಾಜು, ಟಿ.ಎಸ್.ವೀರಭದ್ರಸ್ವಾಮಿ, ಯೋಗೇಶ್, ದ್ಯಾವಯ್ಯ, ಹಳಿಯೂರು ಗ್ರಾಪಂ ಮಾಜಿ ಉಪಾಧ್ಯಕ್ಷ ಹೆಚ್.ಆರ್.ಕೃಷ್ಣಮೂರ್ತಿ, ಸಾಲಿಗ್ರಾಮ ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಹೆಚ್.ಆರ್. ಮಧುಚಂದ್ರ, ತಾಲೂಕು ಯುವ ಜೆಡಿಎಸ್ ಮುಖಂಡ ಟಿ.ಪಿ.ಮಂಜುನಾಥ್ ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿದರು.



ಸರಗೂರಿನ ವಿಶ್ವಕರ್ಮ ಸಮಾಜದಿಂದ ಶ್ರೀಕಾಳಿಕಾಂಬ ಕಮಠೇಶ್ವರಿ ಅಮ್ಮನವರ 48ನೇ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು. ದೇವಾಲಯದ ಅರ್ಚಕ ಕುಮಾರ್, ವಿಶ್ವಕರ್ಮ ಸಮಾಜದ ಯಜಮಾನರು, ಮುಖಂಡರು, ಯುವಕರು ಇದ್ದರು.



ಕಂಪಲಾಪುರ ಗ್ರಾಪಂ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಅಧ್ಯಕ್ಷೆ ಮಮತ ಭೂಮಿಪೂಜೆ ನೆರವೇರಿಸಿದರು. ಪಿಡಿಓ ಎಸ್.ಆರ್.ಪರಮೇಶ್ ಸೇರಿದಂತೆ ಸದಸ್ಯರು, ಸಿಬ್ಬಂದಿ ಹಾಜರಿದ್ದರು.

ಅಂಬೇಡ್ಕರ್ ತತ್ವಾದರ್ಶಗಳನ್ನು ಮೈಗೂಡಿಸಿಕೊಳ್ಳಿ

ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಅಧ್ಯಕ್ಷ ಎಸ್.ಮಹದೇವಯ್ಯ



ನಂಜನಗೂಡು, ಏ.25(ಸುದರ್ಶನ್)– ಡಾ.ಬಿ.ಆರ್.ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕು ಎಂದು ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ ತಿಳಿಸಿದರು.

ನಗರದ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ಶ್ರೀರಾಂಪುರ ಗೆಳೆಯರ ಬಳಗದಿಂದ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನದ ಪ್ರಯುಕ್ತ ಏರ್ಪಡಿಸಿದ್ದ ಕ್ರಿಕೆಟ್ ಪಂದ್ಯಾವಳಿ ಸಮಾರೋಪದಲ್ಲಿ ಗೆಲುವು ಪಡೆದ ಶ್ರೀರಾಂಪುರ ತಂಡಕ್ಕೆ ಕಪ್ ವಿತರಿಸಿ ಮಾತನಾಡಿದರು.

ಅಂಬೇಡ್ಕರ್ ಅವರನ್ನು ಬರೀ ಜಯಂತಿಗೆ ಸೀಮಿತ ಗೊಳಿಸಿ ಅವರ ಆದರ್ಶಗಳನ್ನು ಮರೆಯುತ್ತಿದ್ದೇವೆ. ಅವರು ಶೋಷಿತರ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಪ್ರಪಂಚದಲ್ಲೇ ಅತ್ಯಂತ ಶ್ರೇಷ್ಠ ಸಂವಿ ಧಾನ ಕೊಟ್ಟಿದ್ದಾರೆ. ಇಂದಿನ ಯುವಕರು ಅವರ ತತ್ವ ಆದರ್ಶಗಳನ್ನು ಜೀವನದಲ್ಲಿ ಮೈಗೂಡಿಸಿಕೊಂಡು ನಡೆಯಬೇಕಿದೆ ಎಂದರು. ಕ್ರೀಡೆ ಮನುಷ್ಯನ ಮಾನಸಿಕ, ದೈಹಿಕ ಆರೋಗ್ಯಕ್ಕೆ ಸಹಕಾರಿಯಾಗಿದೆ. ಎಲ್ಲರೂ ಬದುಕನ್ನು ಕ್ರೀಡಾ ಸ್ಫೂರ್ತಿಯಿಂದ ತೆಗೆದುಕೊಳ್ಳಬೇಕು. ಸೋತಾಗ ಕುಗ್ಗಬಾರದು ಗೆದ್ದಾಗ ಹಿಗ್ಗಬಾರದು. ಸೋಲೆ ಗೆಲುವಿನ ಮೆಟ್ಟಿಲು ಎಂದು ತಿಳಿದು ಉತ್ತಮ ಗುರಿ ಇಟ್ಟುಕೊಂಡು ಸಾಧನೆಗೆ ಮುಂದಾಗಬೇಕು. ಸಂಘಟನೆಗಳು ಬಡವರ ಸೇವೆ ಮಾಡುವಂತಹ ಕಾರ್ಯಕ್ರಮಗಳನ್ನು ರೂಪಿಸಿ ನೆರವಾಗಿ ಎಂದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್, ಬಿಎಸ್ಪಿ ಪಕ್ಷದ ಶಿವಕುಮಾರ್, ವಕೀಲರಾದ ಉಮೇಶ್, ನಗರಸಭಾ ಸದಸ್ಯ ಪ್ರದೀಪ್, ಜಿಪಂ ಮಾಜಿ ಸದಸ್ಯ ಕೆ.ಬಿ.ಸ್ವಾಮಿ, ಮುಖಂಡರಾದ ಕೃಷ್ಣ, ಮಣಿ, ಚೇತನ್, ಸುಧಾಕರ್, ತ್ರಿಲೋಚನಾ, ಭೀಮ, ಸೇರಿದಂತೆ ಇತರರಿದ್ದರು.

ಧನ್ವಂತರಿ ಸೇವಾ ಪ್ರತಿಷ್ಠಾನದಿಂದ ವೈದ್ಯಕೀಯ ತಪಾಸಣಾ ಶಿಬಿರ



ಹುಣಸೂರು, ಏ.25(ಕೆಕೆ)– ಹುಣಸೂರಿನ ಧನ್ವಂತರಿ ಸೇವಾ ಪ್ರತಿಷ್ಠಾನ ಗ್ರಾಮೀಣ ವೈದ್ಯಕೀಯ ಸೇವಾ ಸಂಸ್ಥೆಯಿಂದ ತಾಲೂಕಿನ ಕೂಡ್ಲೂರು ಹಾಗೂ ಹೆಗ್ಗಂದೂರು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ವೈದ್ಯಕೀಯ ತಪಾಸಣೆ ನಡೆಸಿ ಔಷಧಿ ವಿತರಿಸಲಾಯಿತು.

ಧನ್ವಂತರಿ ಸೇವಾ ಪ್ರತಿಷ್ಠಾನ ಗ್ರಾಮೀಣ ವೈದ್ಯಕೀಯ ಸೇವಾ ಸಂಸ್ಥೆ ಹಾಗೂ ಲಕ್ಷ್ಮಿ ಕ್ಲಿನಿಕ್ ಮತ್ತು ಪಾಲಿ ಕ್ಲಿನಿಕ್ ಸಹಯೋಗದಲ್ಲಿ ಗ್ರಾಮೀಣ ಜನರಿಗೆ ಉಚಿತವಾಗಿ ರಕ್ತದೊತ್ತಡ, ಸಿಹಿಮೂತ್ರ ರೋಗ ಹಾಗೂ ಇನ್ನಿತರ ಖಾಯಿಲೆಗಳ ತಪಾಸಣೆ ನಡೆಸಿ ಔಷಧಿ ವಿತರಿಸಲಾ ಯಿತು. ಪ್ರತಿಷ್ಠಾನದ ಮುಖ್ಯಸ್ಥ ಡಾ.ರಾಜು ಮಾತನಾಡಿ, ಶಿಬಿರದಲ್ಲಿ ಕೋವಿಡ್ ನಿಯಮ ಪಾಲಿಸುವ ಮೂಲಕ ಗ್ರಾಮೀಣ ಬಡ ಜನರಿಗೆ ಉಚಿತವಾಗಿ ವೈದ್ಯಕೀಯ ತಪಾಸಣೆ ನಡೆಸಿ, ಔಷಧಿ ವಿತರಿಸುತ್ತಿದ್ದೇವೆ. ಗ್ರಾಮೀಣ ಬಡ ಜನರಿಗೆ ಆರೋಗ್ಯ ಸೇವೆ ನೀಡುವುದೇ ನಮ್ಮ ಪ್ರತಿಷ್ಠಾನದ ಮುಖ್ಯ ಉದ್ದೇಶ ಎಂದರು. ಈ ವೇಳೆ ಪ್ರತಿಷ್ಠಾನದ ಮುಖ್ಯಸ್ಥ ಡಾ.ಎಸ್.ರಾಜು ಅವರ ಪತ್ನಿ ಎಸ್.ಆರ್. ತುಳಸಿಮಾತ, ಸದಸ್ಯರು ಹಾಜರಿದ್ದರು.

ಏ.29ಕ್ಕೆ, ಅದ್ಧೂರಿ ಡಾ.ಅಂಬೇಡ್ಕರ್ ಜಯಂತಿ

ಮಲ್ಕುಂಡಿ, ಏ.25(ಚನ್ನಪ್ಪ)– ನಂಜನಗೂಡು ತಾಲೂಕಿನ ಮಲ್ಕುಂಡಿಯಲ್ಲಿ ಏ.29ರಂದು ಡಾ.ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ ಅದ್ಧೂರಿಯಾಗಿ ನಡೆಯಲಿದೆ. ಉರಿಲಿಂಗ ಪೆದ್ದಿ ಮಹಾಸಂಸ್ಥಾನ ಮಠದ ಶ್ರೀಜ್ಞಾನ ಪ್ರಕಾಶ್ ಸ್ವಾಮೀಜಿ ಸಾನ್ನಿಧ್ಯದಲ್ಲಿ, ಸಂಸದ ಶ್ರೀನಿವಾಸ್ ಪ್ರಸಾದ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಬಿ.ಹರ್ಷವರ್ಧನ್ ಅಧ್ಯಕ್ಷತೆ ವಹಿಸುವರು. ಮಾಜಿ ಸಂಸದ ಆರ್ ಧ್ರುವನಾರಾಯಣ್ ಅಂಬೇಡ್ಕರ್ ಗೋಪುರ ಅನಾವರಣಗೊಳಿಸುವರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಪುಷ್ಪಾರ್ಚನೆ ಮಾಡುವರು. ಮುಖ್ಯ ಅತಿಥಿಯಾಗಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮುಖ್ಯ ಭಾಷಣಕಾರರಾಗಿ ಪತ್ರಕರ್ತ ಕೆ.ದೀಪಕ್, ಮೈಸೂರಿನ ಯುವರಾಜ ಕಾಲೇಜಿನ ಪ್ರಾಂಶುಪಾಲೆ ಯಶೋಧಮ್ಮ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಎಂದಿಗೂ ನಾನು ಪಕ್ಷದ ಸಿದ್ಧಾಂತಕ್ಕೆ ವಿರೋಧವಾಗಿ ನಡೆದುಕೊಂಡಿಲ್ಲ

- ನನ್ನನ್ನು ಏಕಾಏಕಿ ಬ್ಲಾಕ್ ಅಧ್ಯಕ್ಷ ಸ್ಥಾನದಿಂದ ತೆಗೆಯಲಾಗಿದೆ: ಕೇಳಿದ್ದರೇ ನಾನೇ ರಾಜೀನಾಮೆ ನೀಡುತ್ತಿದ್ದೆ
- ಪರೋಕ್ಷವಾಗಿ ಮಾಜಿ ಸಚಿವ ಹೆಚ್‌ಸಿಎಂ ವಿರುದ್ಧ ವಾಗ್ದಾಳಿ ನಡೆಸಿದ ಜಿಪಂ ಮಾಜಿ ಸದಸ್ಯ ಟಿ.ಎಚ್.ಮಂಜುನಾಥ್



ತಿ.ನರಸೀಪುರ, ಏ.25(ಎಸ್‌ಕೆ)– ಕಾಂಗ್ರೆಸ್ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದ ನಾನು ಎಂದಿಗೂ ಪಕ್ಷದ ಸಿದ್ಧಾಂತಕ್ಕೆ ವಿರೋಧವಾಗಿ ನಡೆದುಕೊಂಡಿಲ್ಲ. ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಿದ್ದಕ್ಕೆ ನನ್ನನ್ನು ಏಕಾಏಕಿ ಬ್ಲಾಕ್ ಅಧ್ಯಕ್ಷ ಸ್ಥಾನದಿಂದ ತೆಗೆಯಲಾಯಿತು ಎಂದು ಜಿಪಂ ಮಾಜಿ ಸದಸ್ಯ ಟಿ.ಎಚ್.ಮಂಜುನಾಥ್ ತಿಳಿಸಿದರು.

ತಲಕಾಡಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಕಳೆದ 13 ವರ್ಷದಿಂದ ಕಾಂಗ್ರೆಸ್ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದ ನನ್ನನ್ನು ಏಕಾಏಕಿ ಅಧ್ಯಕ್ಷ ಸ್ಥಾನದಿಂದ ತೆಗೆಯಲು ನಾನು ಮಾಡಿದ ತಪ್ಪಾದರೂ ಏನು? ನಿರಂತರವಾಗಿ ಪಕ್ಷ ಸಂಘಟನೆ ಮಾಡಿ ಕ್ಷೇತ್ರ ಮರು ವಿಂಗಡಣೆಯಾದ ಮೇಲೆ ಕ್ಷೇತ್ರ ದಲ್ಲಿ 2 ಬಾರಿ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲಿಲ್ಲವೇ? ಹಾಗಿದ್ದರೂ ನನ್ನಿಂದ ಅಧ್ಯಕ್ಷ ಸ್ಥಾನ ಕಸಿದುಕೊಳ್ಳಲು ಕಾರಣವಾದರೂ ಏನೆಂದು ಪ್ರಶ್ನಿಸಿದರು.

ಬಹಳ ವರ್ಷದಿಂದ ಅಧ್ಯಕ್ಷ ಸ್ಥಾನದಲ್ಲಿ ಕೆಲಸ ಮಾಡಿದ್ದೇನೆ. ನನಗೂ ಸಾಕಾಗಿದೆ. ಬೇರೆಯವರನ್ನು ನೇಮಕ ಮಾಡಿಕೊಳ್ಳಿ ಎಂದು ಮಾಜಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಬಳಿ ಹೇಳಿದ್ದೆ. ಆದರೆ ಅವರು ಬೇರೆ ಯಾರೂ ನಿನ್ನಂತೆ ಕೆಲಸ ಮಾಡಲಾರರು. ನಿನಗಾದರೆ ಕ್ಷೇತ್ರದ ಸಂಪೂರ್ಣ ಪರಿಚಯವಿದೆ. ಸಂಘಟನೆ ಮಾಡಲು ನೀನೇ ಸೂಕ್ತ ಎಂದಿದ್ದರು. ಆದರೆ ಕಳೆದ ಬಾರಿ ನಡೆದ ಲೋಕಸಭಾ ಚುನಾವಣೆಯಲ್ಲಿ ನಡೆದ ಕೆಲ ಕಹಿ ಘಟನೆಗಳಿಂದ ನನ್ನ ಮೇಲೆ 2 ವರ್ಷಗಳಿಂದಲೂ ದ್ವೇಷದ ರಾಜಕಾರಣ ಮಾಡುತ್ತಾ ಬರಲಾಗಿತ್ತು.

ಚುನಾವಣೆಯಲ್ಲಿ ನಾನು ಹೈ ಕಮಾಂಡ್ ಸೂಚಿಸಿದ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ಕೈಗೊಂಡೆ. ಆದರೆ ಇದು ಕೆಲ ನಾಯಕರಿಗೆ ಹಿಡಿಸಲಿಲ್ಲ. ಮತ್ತೊಂದು ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಬೇಕೆನ್ನುವುದು ಆ ನಾಯಕರ ಅಭಿಲಾಷೆಯಾಗಿತ್ತು. ಹಾಗಾಗಿ ಕೆಲ ನಾಯಕರು ದ್ವೇಷದ ರಾಜಕಾರಣ ಮಾಡಿ ಬ್ಲಾಕ್ ಅಧ್ಯಕ್ಷ ಸ್ಥಾನವನ್ನು ನನ್ನಿಂದ ಕಸಿದುಕೊಂಡರು. ಕೇಳಿದ್ದರೇ ನಾನೇ ರಾಜೀನಾಮೆ ನೀಡುತ್ತಿದ್ದೆ. ನನ್ನ ಗಮನಕ್ಕೆ ತರದೇ ಅಧ್ಯಕ್ಷ ಸ್ಥಾನದಿಂದ ನನ್ನನ್ನು ತೆಗೆದಿದ್ದಕ್ಕೆ ತುಂಬಾ ನೋವಾಗಿದೆ ಎಂದು ನೊಂದು ನುಡಿದರು. ಇದಕ್ಕೂ ಮುನ್ನಾ ಮಂಜುನಾಥ್ ಅವರನ್ನು ಸಾವಿರಾರು ಅಭಿಮಾನಿಗಳು ಮೆರವಣಿಗೆ ಮೂಲಕ ತಲಕಾಡಿನ ಅತಿಥಿಗೃಹದಿಂದ ಬಂಡರಸಮ್ಮ ದೇವಸ್ಥಾನಕ್ಕೆ ಕರೆ ತಂದರು. ಈ ವೇಳೆ ಅಭಿಮಾನಿಗಳು ಕಾರ್ಯಕರ್ತರು ದೊಡ್ಡ ಗಾತ್ರದ ಹೂವಿನಹಾರ ಹಾಕಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ವೇಳೆ ನಾಯಕ ಜನಾಂಗದ ದೊಡ್ಡ ಯಜಮಾನ ಜೆ.ರಾಜು, ತಾಪಂ ಮಾಜಿ ಸದಸ್ಯ ನರಸಿಂಹ ಮಾದನಾಯಕ, ಸತೀಶ್ ನಾಯಕ, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಪುರಸಭೆ ಮಾಜಿ ಅಧ್ಯಕ್ಷ ಸೋಮು, ಕನಕ ಪಾಪು, ಗ್ರಾಪಂ ಮಾಜಿ ಅಧ್ಯಕ್ಷ ಶಾಂತರಾಜು, ಮಲ್ಲಣ್ಣ, ತಾಲೂಕು ಕುರುಬರ ಸಂಘದ ಖಜಾಂಚಿ ಮಲ್ಲೇಶ್, ಎಸ್‌ಟಿ ವಿಭಾಗದ ಅಧ್ಯಕ್ಷ ಸತೀಶ್ ನಾಯಕ, ತಾಲೂಕು ಅಧ್ಯಕ್ಷ ನಾಗರಾಜು, ರಘುನಾಯ್ಕ, ಉಮೇಶ್, ಎಪಿಎಂಸಿ ಮಾಜಿ ಸದಸ್ಯ ಪುಟ್ಟಸ್ವಾಮಿ, ಕಾರ್ಮಿಕ ವಿಭಾಗದ ಅಧ್ಯಕ್ಷ ರಮೇಶ್, ಬನ್ನೂರು ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಸುಹೇಲ್, ಸಿದ್ದರಾಜು, ಸದಸ್ಯ ಶಂಕರ್, ಯುವ ಘಟಕದ ಅಧ್ಯಕ್ಷ ಲೋಕೇಶ್, ಡೈರಿ ಕಾರ್ಯದರ್ಶಿ ಸೋಮಣ್ಣ, ರಾಮು, ಮರಿಗೌಡ, ಕುಮಾರ್ ನಾಯಕ್, ನಾರಾಯಣ್, ಯೂತ್ ಅಧ್ಯಕ್ಷ ರಘು, ಮಹೇಶ್, ಗುರುಮೂರ್ತಿ, ನೌಷದ್ ಪಾಷಾ, ಮಧು, ಲಿಂಗರಾಜು, ಸುನೀಲ್, ವಿಜಯ್ ಕುಮಾರ್, ಚಿಕ್ಕಣ್ಣ ಮತ್ತಿತರರಿದ್ದರು.

ಪಕ್ಷಕ್ಕೆ ಬೆಲೆ ಕೊಡುತ್ತೇನೆ ವ್ಯಕ್ತಿಗಲ್ಲ!

ಧ್ರುವನಾರಾಯಣ್ ಪರ ಕೆಲಸ ಮಾಡಿದ್ದಕ್ಕೆ ನಿಮ್ಮ ಮೇಲೆ ದ್ವೇಷ ರಾಜಕಾರಣ ಮಾಡಲಾಗುತ್ತಿದೆಯೇ? ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಮಂಜುನಾಥ್ ಧ್ರುವನಾರಾಯಣ್ ಅವರನ್ನು ಎಐಸಿಸಿಯಿಂದ ಅಭ್ಯರ್ಥಿ ಎಂದು ಘೋಷಣೆ ಮಾಡಲಾಗಿತ್ತು. ಹಾಗಾಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾದ ನಾನು ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಬೇಕು. ಮಹದೇವಪ್ಪನವರೂ ಮಾಡಬೇಕು. ಇದು ಪಕ್ಷದ ಸಿದ್ಧಾಂತ. ನಾನು ಸಿದ್ಧಾಂತ ಬಿಟ್ಟು ಆಚೆ ಹೋಗುವಂತಿಲ್ಲ. ಈಗಲೂ ನಾನು ಪಕ್ಷದಲ್ಲೇ ಇದ್ದೇನೆ. ಮುಂದೆ ಪಕ್ಷದ ಹೈಕಮಾಂಡ್ ಸೂಚನೆಯಂತೆ ಕೆಲಸ ಮಾಡುತ್ತೇನೆ. ನಾನು ಪಕ್ಷಕ್ಕೆ ಬೆಲೆ ಕೊಡುವ ವ್ಯಕ್ತಿಯೇ ಹೊರತು ವ್ಯಕ್ತಿಗೆ ಬೆಲೆ ಕೊಡುವ ವ್ಯಕ್ತಿಯಲ್ಲ. ಕಾಂಗ್ರೆಸ್‌ನಲ್ಲಿದ್ದುಕೊಂಡು ಮತ್ತೊಂದು ಪಕ್ಷದೊಂದಿಗೆ ಸಂಪರ್ಕ ಇಟ್ಟುಕೊಳ್ಳುವ ಜಾಯಮಾನ ನನ್ನದಲ್ಲ ಎನ್ನುವ ಮೂಲಕ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನವರ ಹೆಸರೇಳದೇ ಮಂಜುನಾಥ್ ಟಾಂಗ್ ನೀಡಿದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೆಜಿಎಫ್ 2 (ತ): ಬೆ.8ಕ್ಕೆ, ಬೆ.11.30ಕ್ಕೆ, ಮ.3.15ಕ್ಕೆ, ಸಂ.6.30ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.15ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ.
ಸ್ಕ್ರೀನ್ 3	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.25ಕ್ಕೆ, ಬೀಸ್ಟ್ (ತ): ಮ.3.30ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.11.45ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬೀಸ್ಟ್ (ತ): ಬೆ.8.40ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬೀಸ್ಟ್ (ತ): ಬೆ.8ಕ್ಕೆ, ಬೆ.11.10ಕ್ಕೆ, ಮ.2.30ಕ್ಕೆ, ಸಂ.5.50ಕ್ಕೆ, ರಾ.9.10ಕ್ಕೆ.
ಸ್ಕ್ರೀನ್ 3	ಬೀಸ್ಟ್ (ತ): ಬೆ.8.20ಕ್ಕೆ, ಬೆ.11.45ಕ್ಕೆ, ಫೆಂಟಾಸ್ಟಿಕ್ ಬೀಸ್ಟ್ಸ್ (ಇಂ): ಮ.3.05ಕ್ಕೆ, ಜೇಮ್ಸ್ (ಕ): ಸಂ.6.10ಕ್ಕೆ, ಆರ್‌ಆರ್‌ಆರ್ (ಹಿಂ): ರಾ.9.20ಕ್ಕೆ.
ಸ್ಕ್ರೀನ್ 4	ಬೀಸ್ಟ್ (ತ): ಬೆ.8.10ಕ್ಕೆ, ಜೇಮ್ಸ್ (ಕ): ಬೆ.11.35ಕ್ಕೆ, ಆರ್‌ಆರ್‌ಆರ್ (ತೆ): ಮ.2.45ಕ್ಕೆ, ರಾ.9.50ಕ್ಕೆ, ಕೆಜಿಎಫ್ (ಕ): ಸಂ.6.25ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಆರ್‌ಆರ್‌ಆರ್ (2ಡಿ)(ಕ): ಬೆ.11ಕ್ಕೆ, ತ್ರಿಕೋನ (ಕ): ಸಂ.4ಕ್ಕೆ, ಗಣಿ (ತೆ): ಸಂ.6.45ಕ್ಕೆ.
ಸ್ಕ್ರೀನ್ 2	ಆರ್‌ಆರ್‌ಆರ್ (2ಡಿ)(ತೆ): ಮ.1.30ಕ್ಕೆ.
ಸ್ಕ್ರೀನ್ 3	ಆರ್‌ಆರ್‌ಆರ್ (2ಡಿ)(ಕ): ಸಂ.4ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ವರ್ಣಪಟಲ (ಕ): ಬೆ.11ಕ್ಕೆ, ಜೇಮ್ಸ್ (ಕ): ಮ.1.30ಕ್ಕೆ, ರಾ.7.30ಕ್ಕೆ, ಗಣಿ (ತೆ): ಸಂ.4.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖಿತ್ರಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕೆಜಿಎಫ್–2 (ಕ)	4 ಪ್ರದರ್ಶನಗಳು
ಸಂಗಂ	
ಕೆಜಿಎಫ್ 2 (ಕ)	4 ಪ್ರದರ್ಶನಗಳು
ಲಿಡೋ	
ಬೀಸ್ಟ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೀಸ್ಟ್ (ಕ)	4 ಪ್ರದರ್ಶನಗಳು

ಮಯಾಂಕ್ ಪಡೆಗೆ ಗೆಲುವು: ಚೆನ್ನೈಗೆ ಸೋಲು




ಮುಂಬೈ, ಏ.25– ಶಿಖರ್ ಧವನ್ ಹಾಗೂ ಬಾನುಕ ರಾಜಪಕ್ಷ ಅವರ ಶತಕದ ಜೊತೆಯಾಟದ ನೆರವಿನಿಂದ ಪಂಜಾಬ್ ಕಿಂಗ್ಸ್, ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 11 ರನ್‌ಗಳ ಅಮೋಘ ಜಯ ಸಾಧಿಸಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿತು. ತಂಡದ ಪರ ಶಿಖರ್ ಧವನ್ 59 ಎಸೆತಗಳಲ್ಲಿ 2 ಸಿಕ್ಸರ್, 9 ಬೌಂಡರಿ ಒಳಗೊಂಡ 88 ರನ್ ಗಳಿಸಿ ಅಜೇಯರಾಗುಳಿದರು. ಅಲ್ಲದೇ ಬಾನುಕ ರಾಜಪಕ್ಷ ಜೊತೆಗೂಡಿ 110 ರನ್‌ಗಳ ಜೊತೆಯಾಟದಲ್ಲಿ ಭಾಗಿಯಾದರು. ಉಳಿದಂತೆ ರಾಜಪಕ್ಷ 42, ಲಿವಿಂಗ್‌ಸ್ಟೋನ್ 19, ಮಯಾಂಕ್ ಅಗರ್ವಾಲ್ 18 ರನ್ ಗಳಿಸಿದರು. ಚೆನ್ನೈ ಪರ ಡ್ವೇನ್ ಬ್ರಾವೋ 2, ಮಹೀಶ್ ತೀಕ್ಷಣ 1 ವಿಕೆಟ್ ಪಡೆದರು.


ಬಳಿಕ ಗುರಿ ಬೆನ್ನತ್ತಿದ ಸಿಎಸ್‌ಕೆ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ಅಂಬಟಿ ರಾಯುಡು 39 ಎಸೆತಗಳಲ್ಲಿ 6 ಸಿಕ್ಸರ್, 7ಬೌಂಡರಿ ಒಳಗೊಂಡ 78 ರನ್ ಗಳಿಸಿದರಾದರೂ ತಂಡಕ್ಕೆ ಜಯ ತಂದುಕೊಡಲು ಸಾಧ್ಯವಾಗಲಿಲ್ಲ. ಉಳಿದಂತೆ ರವೀಂದ್ರ ಜಡೇಜಾ 21, ಋತುರಾಜ್ ಗಾಯಕ್ವಾಡ್ 30, ಧೋನಿ 12 ರನ್ ಗಳಿಸಿದರು. ಪಂಜಾಬ್ ಪರ ರಬಾಡ, ರಿಷಿ ಧವನ್ ತಲಾ 2, ಸಂದೀಪ್ ಶರ್ಮಾ, ಹರ್ಷದೀಪ್ ಸಿಂಗ್ ತಲಾ ಒಂದೊಂದು ವಿಕೆಟ್ ಪಡೆದರು. ಶಿಖರ್ ಧವನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ರಾಮು ನಿಧನ




ಹುಣಸೂರು, ಏ.24(ಕೆಕೆ)– ನಗರದ ಎನ್‌ಇಎಸ್ ಕಾಲೋನಿ ನಿವಾಸಿ ದಿ.ದಾಸಪ್ಪನವರ ಪುತ್ರ ರಾಮು (44) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ತಾಲೂಕು ಕಚೇರಿ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು.

ಚೆಲುವಸ್ವಾಮಿ



ಮಲ್ಕುಂಡಿ, ಏ.25– ಇಲ್ಲಿಗೆ ಸಮೀಪದ ಸಿದ್ದೇಗೌಡನಹುಂಡಿ ಗ್ರಾಮದ ನಿವಾಸಿ ಚೆಲುವಸ್ವಾಮಿ(33) ಸೋಮವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಮಂಗಳವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಪಿಎಸ್ಐ ಅಕ್ರಮ ದಾಖಲೆ ಬಹಿರಂಗಪಡಿಸಿದವರನ್ನು ಹೆದರಿಸ್ತೀರಾ: ತಾಕತ್ತಿದ್ದರೆ ನನಗೂ ಸಿದ್ದರಾಮಯ್ಯಗೂ ನೋಟಿಸ್ ನೀಡಲಿ



ಬೆಂಗಳೂರು, ಏ. 25– ಪಿಎಸ್ಐ ಅಕ್ರಮದ ವಿಷಯವಾಗಿ ಪ್ರಿಯಾಂಕ್ ಖರ್ಗೆಗೆ ನೋಟಿಸ್ ನೀಡಿದ್ದಾರೆ. ನೊಂದವರು ನನ್ನ ಹತ್ತಿರ ಬಂದಿದ್ದರು. ಆ ಭಾಗದ ವಿಷಯ ಆದ್ದರಿಂದ ಇದನ್ನು ಸ್ಟಡಿ ಮಾಡಿ ಅಂತ ನಾನೇ ಪ್ರಿಯಾಂಕ್ ಖರ್ಗೆಗೆ ಹೇಳಿದ್ದು. ಆದರೆ ಮಾಹಿತಿ ನೀಡಿದವರಿಗೆ ನೋಟಿಸ್ ನೀಡ್ತಿರಾ? ದಾಖಲೆ ಬಹಿರಂಗಪಡಿಸಿದವರನ್ನು ಹೆದರಿಸ್ತೀರಾ? ಈ ಆಟ ನಮ್ಮಲ್ಲಿ ನಡೆಯಲ್ಲ ಎಂದು ಸರ್ಕಾರದ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಗುಡುಗಿದ್ದಾರೆ.

ತಾಕತ್ತಿದ್ದರೆ ನನಗೂ ಸಿದ್ದರಾಮಯ್ಯಗೂ ನೋಟಿಸ್ ಕೊಡಲಿ ನೋಡ್ತೀವಿ. ಪ್ರಿಯಾಂಕ್ ಖರ್ಗೆಗೆ ವಿಚಾರಣೆಗೆ ಹಾಜರಾಗದಂತೆ ಪಕ್ಷದಿಂದ ಸೂಚನೆ ನೀಡಿದ್ದೇವೆ. ನಿನ್ನೆ ನೋಟಿಸ್ ನೀಡಿದ್ದ ಬಗ್ಗೆ ಪಕ್ಷದ ನಾಯಕರ ಜೊತೆಗೆ ಚರ್ಚೆ ಮಾಡಿಯೇ ವಿಚಾರಣೆಗೆ ಹಾಜರಾಗಬೇಡಿ ಅಂತ ಸೂಚಿಸಿದ್ದೇನೆ. ಗೃಹ ಸಚಿವರ ಜೊತೆಗೆ ನಿಂತು ಆರೋಪಿ ಫೋಟೋ ತೆಗೆದುಕೊಳ್ಳುತ್ತಾರೆ. ಹಲವು ಸಚಿವರ ಜೊತೆಗೆ ಅವರು ನಿಂತಿದ್ದಾರೆ. ಹಾರ ತುರಾಯಿ ಹಾಕಿಸಿಕೊಂಡು ಫೋಟೋ ಕೂಡ ತೆಗೆಸಿಕೊಳ್ತಾರೆ. ಗೃಹ ಸಚಿವರಿಗೆ ಮೊದಲು ನೋಟಿಸ್ ಕೊಡಲಿ. ಅವರಿಗೂ ದಿವ್ಯಾ ಹಾಗರಗಿಗೂ ಇರುವ ಲಿಂಕ್ ಏನು? ಅವರ ಆಶೀರ್ವಾದ ಇತ್ತಾ? ಎಲ್ಲಾ ತನಿಖೆ ಆಗಲಿ. ಆರೋಪಿ ಭ್ರಷ್ಟಾಚಾರದ ಅಂಗಡಿ ಓಪನ್ ಮಾಡಿಕೊಂಡಿದ್ದಾರೆ. ಅಂಗಡಿ ಓಪನ್ ಆಗಿದಕ್ಕೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೇರಿದಂತೆ ಎಲ್ಲರೂ ಅಂಗಡಿಗೆ ಹೋಗಿದ್ದಾರೆ ಎಂದರು.

ವಿದ್ಯಾರ್ಥಿಗಳು ಹಾಗೂ ಯುವಕರ ಭವಿಷ್ಯದ ದೃಷ್ಟಿಯಿಂದ ನಮ್ಮ ಹೋರಾಟ ನಡೆಯುತ್ತದೆ. ಯಾರೇ ತಪ್ಪು ಮಾಡಿದ್ದರು ಒದ್ದು ಒಳಗೆ ಹಾಕಲಿ. ನಮ್ಮನ್ನು ಹೆದರಿಸಲು ಯಾರಿಂದಲೂ ಸಾಧ್ಯವಿಲ್ಲ. ನಿಮ್ಮ ವಿರುದ್ಧ ಮಾತೇ ಆಡಬಾರದಾ? ನಮ್ಮನ್ನು ಹೆದರಿಸಲು ಸಾಧ್ಯವಿಲ್ಲ. ಪ್ರಾಣ ಹೋದರು ನಾವು ಹೆದರಲ್ಲ. ತನಿಖೆಗೆ ಸಹಕಾರ ಮಾಡ್ತಿಲ್ಲ ಎಂಬುದು ತಪ್ಪು. ಈ ಹಿಂದೆ ಪರಿಷತ್ ಸದಸ್ಯ ವಿಶ್ವನಾಥ್ ಅವರು ಯಡಿಯೂರಪ್ಪ ಮೇಲೆ ಕಮಿಷನ್ ಆರೋಪ ಮಾಡಿದ್ರು ಯಾಕೆ ಎಸಿಬಿ ಅವರು ಕೇಸ್ ರಿಜಿಸ್ಟರ್ ಮಾಡಿ ವಿಶ್ವನಾಥ್‌ಗೆ ನೋಟಿಸ್ ಕೊಟ್ಟು ವಿಚಾರಣೆ ಮಾಡಲಿಲ್ಲ? ಯತ್ನಾಳ್ ಹೇಳಿದ್ದರು. ಆಗ ಕೇಸ್ ರಿಜಿಸ್ಟರ್ ಮಾಡಲಿಲ್ಲ?. ಹಾಗಾದರೆ ಆರೋಪಿ ಜೊತೆಗೆ ಇದ್ದವರಿಗೆಲ್ಲರಿಗೂ ನೋಟಿಸ್ ಕೊಡಬೇಕಿತ್ತು. ಹೋಮ್ ಮಿನಿಸ್ಟರ್‌ಗೆ ನೋಟಿಸ್ ಕೊಡಬೇಕಿತ್ತು ಎಂದು ವಾಗ್ದಾಳಿ ನಡೆಸಿದ್ದಾರೆ.

ಮುಸ್ಲಿಂ ಸಮುದಾಯದ ವ್ಯಾಪಾರಿಗಳ ಚಿನ್ನದ ಅಂಗಡಿಯಿಂದ ಚಿನ್ನ ಖರೀದಿಸಬೇಡಿ ಎಂಬ ವಿಚಾರದ ಕುರಿತಾಗಿ ಮಾತನಾಡಿ, ಇವತ್ತು ಚಿನ್ನ ತಗೋಬೇಡ, ಚಿನ್ನದ ಅಂಗಡಿಗೆ ಹೋಗಬೇಡ ಅಂತ ಬಿಜೆಪಿ ಕಾರ್ಯಕರ್ತರು ಹೇಳುತ್ತಿದ್ದಾರೆ. ಏನು ಮಾಡುತ್ತಿದ್ದಾರೆ ಸಿಎಂ ಬೊಮ್ಮಾಯಿ? ಏನು ಮಾಡುತ್ತಿದ್ದಾರೆ ಗೃಹ ಸಚಿವರು? ಏನಾಗಬೇಡ ಆರ್ಥಿಕ ಭವಿಷ್ಯ? ಚಿನ್ನ ಖರೀದಿಗೆ, ಹೋಟೇಲ್‌ಗೆ ಹೋಗೋದಕ್ಕೆ, ವ್ಯಾಪಾರ ಮಾಡೋದಕ್ಕೆ ಜಾತಿ ಬಣ್ಣ ಕಟ್ಟಿದರೆ ಏನು ಆಗ್ಬೇಡಾ? ಏನು ಆಗುತ್ತಿದೆ ರಾಜ್ಯದಲ್ಲಿ ಎಂದು ಪ್ರಶ್ನಿಸಿದರು.

ಪಿಎಸ್ಐ ಹಗರಣ: ಮೃತಪಟ್ಟವರ ಮೊಬೈಲ್ ಬಳಕೆ

ಕಲಬುರಗಿ: ಪಿಎಸ್ಐ ಅಕ್ರಮ ನೇಮಕಾತಿ ಕರ್ಮಕಾಂಡವು ಬಗೆದಷ್ಟು ಬಯಲಾಗುತ್ತಿದೆ. ಇದೀಗ ತನಿಖೆಯಲ್ಲಿ ಮತ್ತೊಂದು ವಿಚಾರ ಬೆಳಕಿಗೆ ಬಂದಿದೆ. ಪಿಎಸ್ಐ ಅಕ್ರಮಕ್ಕೆ ಕೋವಿಡ್‌ನಿಂದ ಮೃತಪಟ್ಟ ನೌಕರನ ಮೊಬೈಲ್‌ನನ್ನು ಕಿಂಗ್ ಪಿನ್ ಆರ್.ಡಿ. ಪಾಟೀಲ್ ಬಳಸುತ್ತಿದ್ದ ಎನ್ನುವ ವಿಚಾರ ಬಯಲಾಗಿದೆ.

ಸೊನ್ನ ಗ್ರಾಮದ ಲಕ್ಷ್ಮೀಪುತ್ರ ಎಂಬುವರು ಆರ್‌ಡಿ ಪಾಟೀಲ್ ಬಳಿ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದರು. ಆದರೆ ಲಕ್ಷ್ಮಿಪುತ್ರ ಕೋವಿಡ್‌ನಿಂದ ಮೃತಪಟ್ಟಿದ್ದರು. ಇವರು ಮೃತಪಟ್ಟ ಬಳಿಕ ಇವರ ಬಳಿ ಇದ್ದ 2 ಮೊಬೈಲ್‌ಗಳಲ್ಲಿ ಒಂದನ್ನು ಆರ್‌ಡಿ ಪಾಟೀಲ್ ಇಟ್ಟುಕೊಂಡಿದ್ದ. ಅದೇ ಮೊಬೈಲ್‌ನಿಂದ ಪಿಎಸ್ಐ ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ಎಸಗಿದ್ದ. ಇದರಿಂದ ಬೇರೆ ಯಾರಿಗೂ ಅನುಮಾನ ಮೂಡುವುದಿಲ್ಲ ಎಂದು ಈ ರೀತಿ ಯೋಜನೆ ಮಾಡಿದ್ದ.

ಈ ಸ್ಫೋಟಕ ಮಾಹಿತಿ ಸಿಐಡಿ ಅಧಿಕಾರಿಗಳ ವಿಚಾರಣೆ ವೇಳೆ ಬಹಿರಂಗವಾಗಿದೆ. ತಮ್ಮ ಬಳಿಯಿರುವ ಮೊಬೈಲ್ ಬಳಸಿದರೆ ಪ್ರಕರಣ ಬಯಲಿಗೆ ಬರುತ್ತದೆ ಎಂದು ಮೃತ ವ್ಯಕ್ತಿಯ ಮೊಬೈಲ್‌ನ್ನು ಬಳಸುತ್ತಿದ್ದೆ ಎಂದು ಒಪ್ಪಿಕೊಂಡಿದ್ದಾನೆ. ಎರಡು ದಿನಗಳ ಹಿಂದೆ ಆರ್‌ಡಿ ಪಾಟೀಲ್ ಸ್ನೇಹಿತ ಮಂಜುನಾಥ್ ಮಲ್ಲುಗೌಡನನ್ನು ಸಿಐಡಿ ಅಧಿಕಾರಿಗಳು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ಇಬ್ಬರನ್ನು ಕಲಬುರಗಿ ಜೆಎಮ್‌ಎಫ್‌ಸಿ ಕೋರ್ಟ್ 13 ದಿನಗಳ ಕಾಲ ಸಿಐಡಿ ಕಸ್ಟಡಿಗೆ ನೀಡಿದೆ.

ಅಪರಿಚಿತ ವ್ಯಕ್ತಿ ಸಾವು

ಮೈಸೂರು,ಏ.25–ಅಪರಿಚಿತ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೇ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಮಂಡಿ ಠಾಣೆ ವ್ಯಾಪ್ತಿಯ ಆರ್‌ಎಂಸಿ ಸರ್ಕಲ್ ಬಳಿ ಇರುವ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಬಳಿ ಏ.16ರಂದು ಅನಾರೋಗ್ಯದಿಂದ ಬಿದ್ದಿದ್ದ ಎಡ್ವಿನ್ ಪೌಲ್ (60) ಎಂಬಾತನನ್ನು 108 ಆಂಬು ಲೆನ್ಸ್ ಮೂಲಕ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದ್ದು, ಈತ ಚಿಕಿತ್ಸೆ ಫಲಕಾರಿಯಾಗದೆ ಏ.22ರಂದು ರಾತ್ರಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತನ ಎಡ ತೋಳಿನಲ್ಲಿ ಇಂಗ್ಲಿಷ್‌ನಲ್ಲಿ ಎಸ್.ಟಿ. ಮತ್ತು ನಾಗರಹಾವಿನ ಹಚ್ಚೆ ಹಾಗೂ ಬಲ ತೋಳಿನಲ್ಲಿ ಹಚ್ಚೆ ಇದೆ. ಈತನ ವಾರಸುದಾರರು ಮಂಡಿ ಠಾಣೆ ದೂ.ಸಂಖ್ಯೆ 0821–2418313 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339ನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಜಿಲ್ಲಾಡಳಿತದ ಅನುಪಸ್ಥಿತಿಯಲ್ಲಿ ಡಾ.ರಾಜ್ ಜನ್ಮದಿನ ಆಚರಣೆ: ಅಭಿಮಾನಿಗಳ ಬೇಸರ


ಮೈಸೂರು, ಏ.25– ಕರ್ನಾಟಕ ಏಕೀಕರಣದ ನಂತರ ಗೋಕಾಕ್ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದು, ಹೋರಾಟದ ಸಾರಥ್ಯವನ್ನು ವಹಿಸಿಕೊಂಡವರು ಡಾ.ರಾಜಕುಮಾರ್. ಇಂತಹ ಮಹಾನ್ ನಟನ ಜನ್ಮದಿನಕ್ಕೆ ಪ್ರಭಾರ ಮಹಾಪೌರರ ಹೊರತು ಯಾವುದೇ ಒಬ್ಬ ಜನಪ್ರತಿನಿಧಿಯಾಗಲೀ, ಜಿಲ್ಲಾಡಳಿತವಾಗಲೀ, ಕನ್ನಡ ಸಂಸ್ಕೃತಿ ಇಲಾಖೆ ಆಡಳಿತ ಅಧಿಕಾರಿಗಳಾಗಲೀ ಯಾರೂ ಸುಳಿಯದಿರುವುದು ದುರಂತ ಎಂದು ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ವಿಷಾದಿಸಿದ್ದಾರೆ.

ಹಲವಾರು ಮೇರು ಪ್ರಶಸ್ತಿಗಳನ್ನು ಪಡೆದಂತಹ ಏಕೈಕ ನಟ ರಾಜ್‌ಕುಮಾರ್. ಹೊರ ರಾಜ್ಯದ ನಟರು ಇವರ ನಟನೆಗೆ ತಲೆದೂಗಿದ್ದರು. ನಾಡು, ನುಡಿ, ಜಲಕ್ಕಾಗಿ ಹೋರಾಡಿದ್ದರು. ಆದರೆ ಮೈಸೂರಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಲವಾರು ಜಯಂತಿಗಳನ್ನು ಮಾಡುತ್ತದೆ. ಆ ವರನಟನಿಗೆ ಕಿಂಚಿತ್ತು ಗೌರವವನ್ನು ಸೂಚಿಸದೆ ಅಪಮಾನ ಮಾಡಿದೆ. ಸಹ ನಿರ್ದೇಶಕರಿಗೆ ಡಾ. ರಾಜಕುಮಾರ್ ಅವರ ನೆನಪು ಬರಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಇವರ ಇಲಾಖೆಗೆ ಹಲವು ಕಾರ್ಯಕ್ರಮಗಳನ್ನು ಡಾ.ರಾಜಕುಮಾರ್ ಧನ್ಯ ಮಿಲನದ ಮೂಲಕ ನೀಡಿದ್ದಾರೆ. ಇದು ಈಗಿನ ಅಧಿಕಾರಿಗಳಿಗೆ ಅರಿವಿಲ್ಲವೇ? ಕರ್ನಾಟಕದಾದ್ಯಂತ ಸರಕಾರಿ ಕಚೇರಿಗಳು ಮತ್ತು ಕ್ರೀಡಾಂಗಣಕ್ಕೆ ಡಾ.ರಾಜ್ ಕೊಡುಗೆ ನೀಡಿದ್ದಾರೆ. ಆದರೆ ನಮ್ಮ ಮೈಸೂರಿನಲ್ಲಿ ಯಾವ ಒಬ್ಬ ಅಧಿಕಾರಿಯಾಗಲೀ, ಜನಪ್ರತಿನಿಧಿಗಳಿಗೆ ಇವರ ನೆನಪು ಬಾರದಿರುವುದು ದುರಂತ ಎಂದು ಕಿಡಿಕಾರಿದ್ದಾರೆ.

ರಾಜ್ಯದ ಇತಿಹಾಸದಲ್ಲಿ ಯಾವುದೇ ಸರ್ಕಾರ ಅಸ್ತಿತ್ವಕ್ಕೆ ಬಂದರೂ ಮುಖ್ಯಮಂತ್ರಿಗಳು ಮೊದಲು ಭೇಟಿ ಮಾಡುತ್ತಿದ್ದದ್ದು ಡಾ. ರಾಜ್ ಅವರನ್ನು. ಅವರು ಕನ್ನಡ ಭಾಷೆಗೆ ಚಿತ್ರರಂಗಕ್ಕೆ ಕೊಟ್ಟಂತಹ ಕೊಡುಗೆ ಅವಿಸ್ಮರಣೀಯ. ಡಾ. ರಾಜ್ ಬಯಸಿದ್ದರೆ ರಾಜ್ಯದ ಮುಖ್ಯಮಂತ್ರಿಯಾಗುತ್ತಿದ್ದರು. ಆದರೆ ಅಧಿಕಾರ, ರಾಜಕಾರಣದಿಂದ ದೂರ ಉಳಿದಿದ್ದು ಅವರ ಮೇರು ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಇಂತಹ ಮಹಾನ್ ವ್ಯಕ್ತಿಗೆ ಜಿಲ್ಲೆಯಲ್ಲಿ ಜಿಲ್ಲಾಡಳಿತ ಮತ್ತು ಜನಪ್ರತಿನಿಧಿಗಳು ಅಗೌರವ ತೋರಿದ್ದಾರೆ ಎಂದು ದೂರಿದ್ದಾರೆ.

ಹಲಾಲ್ ಕಟ್ ಆಯ್ತು ಈಗ 'ಚಿನ್ನ' ಖರೀದಿ ವಿಷಯವೂ ವಿವಾದವಾಯ್ತು!?



ಬೆಂಗಳೂರು, ಏ.25– ಯುಗಾದಿ ಸಂದರ್ಭದಲ್ಲಿ ಹಿಂದೂ ಪರ ಸಂಘಟನೆಗಳು ಮುಸ್ಲಿಮರ ಅಂಗಡಿಗಳಲ್ಲಿ ಹಲಾಲ್‌ಕಟ್ ಮಾಂಸ ಖರೀದಿಸದಂತೆ ಅಭಿಯಾನ ಕೈಗೊಂಡ ರೀತಿಯಲ್ಲೇ, ಇದೀಗ ಅಕ್ಷಯ ತೃತೀಯ ವೇಳೆಯಲ್ಲಿ ಮುಸ್ಲಿಮರ ಜ್ಯುವೆಲರಿ ಅಂಗಡಿ ಗಳಲ್ಲಿ ಚಿನ್ನ ಖರೀದಿಸದಂತೆ ಹಿಂದೂಗಳಿಗೆ ಶ್ರೀರಾಮ ಸೇನಾ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಕರೆ ನೀಡಿದ್ದಾರೆ.

ರಾಜ್ಯದಲ್ಲಿ ಕೇರಳ ಮುಸ್ಲಿಮರೇ ಜ್ಯುವೆಲರಿ ಅಂಗಡಿಗಳನ್ನು ತೆರೆದಿದ್ದು, ಅಲ್ಲಿ ನೀವು ಖರೀದಿಸುವ ಚಿನ್ನದ ಲಾಭಾಂಶದ ಒಂದು ಭಾಗ ಕೇರಳದಲ್ಲಿ ಲವ್ ಜಿಹಾದ್‌ಗೆ ಬಳಕೆಯಾಗುತ್ತದೆ. ಅಲ್ಲಿ 800 ಹಿಂದೂಗಳ ಕೊಲೆಯಾಗಿದೆ. ಸುಮಾರು 1200 ಹಿಂದೂ ಯುವತಿಯರು ಲವ್‌ಜಿಹಾದ್‌ಗೆ ಬಲಿಯಾಗಿದ್ದಾರೆ. ಮುಸ್ಲಿಮರ ಜ್ಯುವೆಲರಿ ಅಂಗಡಿಗಳಲ್ಲಿ ಚಿನ್ನ ಖರೀದಿಸಿದರೆ ನಮ್ಮ ತಲೆ ಮೇಲೆ ನಾವೇ ಚಪ್ಪಡಿ ಎಳೆದುಕೊಂಡಂತಾಗುತ್ತದೆ. ಹೀಗಾಗಿ ಹಿಂದೂಗಳ ಜ್ಯುವೆಲರಿ ಅಂಗಡಿಗಳಲ್ಲೇ ಚಿನ್ನ ಖರೀದಿಸಿ ಎಂದು ಅವರು ಕರೆ ನೀಡಿದ್ದಾರೆ.

ಸಭೆಯೊಂದರಲ್ಲಿ ಮಾತನಾಡಿದ ಅವರು, ಗಣೇಶ ಉತ್ಸವ, ಹನುಮ ಜಯಂತಿ ಮೆರವಣಿಗೆ ಸೇರಿದಂತೆ ಹಿಂದೂಗಳ ಉತ್ಸವದಲ್ಲಿ ನೀವು ಒಂದು ಕಲ್ಲು ಹೊಡೆದರೆ ನಿಮ್ಮ ಮೇಲೆ ಸಾವಿರ ಕಲ್ಲುಗಳು ಬೀಳುತ್ತವೆ ಎಂದು ಮುಸ್ಲಿಮರಿಗೆ ಎಚ್ಚರಿಕೆ ನೀಡಿದರು. ಹಿಂದೂ ಯುವತಿಯರನ್ನು ಪ್ರೀತಿ–ಪ್ರೇಮದ ಹೆಸರಿನಲ್ಲಿ ಲವ್ ಜಿಹಾದ್ ಮಾಡುವುದು ಇನ್ನು ಮುಂದೆ ನಡೆಯುವುದಿಲ್ಲ. ಹಿಂದೂ ಯುವಕರು ಕೂಡ ಲವ್ ಕೇಸರಿ ಮಾಡಲು ಸಿದ್ಧರಿದ್ದಾರೆ ಎಂದ ಅವರು, ಕೇಸ್ ಮತ್ತು ಜೈಲುಗಳಿಗೆ ಹೆದರಬೇಡಿ ಎಂದು ಹಿಂದೂ ಯುವಕರನ್ನುದ್ದೇಶಿಸಿ ಹೇಳಿದರು. ನಿಮ್ಮ ಮೇಲೆ ಕೇಸ್ ಬಿದ್ದರೆ, ನೀವು ಜೈಲಿಗೆ ಹೋದರೆ ಒಂದು ಪೈಸೆಯೂ ಖರ್ಚಿಲ್ಲದೆ ನಿಮ್ಮನ್ನು ಬಿಡಿಸಿಕೊಳ್ಳಲು ವಕೀಲರು ಸಿದ್ಧರಿದ್ದಾರೆ. ದೇಶ ಮತ್ತು ಧರ್ಮಕ್ಕಾಗಿ ಜೈಲಿಗೆ ಹೋಗುವವರನ್ನು ನಾವು ಬಿಟ್ಟುಕೊಡದೆ ಬಿಡಿಸಿಕೊಂಡು ಬರುತ್ತೇವೆ ಎಂದು ಪ್ರಮೋದ್ ಮುತಾಲಿಕ್ ಕರೆ ನೀಡಿದ್ದಾರೆ.



ಭಾನುವಾರ ಮೈಸೂರಿನ ಖಾಸಗಿ ಹೋಟೆಲೊಂದರಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ಉದ್ಯಮಿ ಹಾಗೂ ಯುವ ಮುಖಂಡ ಪ್ರದೀಪ್ ಸಿಂಗ್ ಅವರನ್ನು ಅವರ ಅಭಿಮಾನಿಗಳು ಹಾಗೂ ಹಿತೈಷಿಗಳು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.



ಮುಕ್ತ ವಿವಿ ಘಟಿಕೋತ್ಸವದಲ್ಲಿ ಕಂಪ್ಯೂಟರ್ ವಿಜ್ಞಾನ ಸ್ನಾತಕೋತ್ತರ ಪದವಿಯಲ್ಲಿ ಕೆ.ಆರ್. ವೈಷ್ಣವಿ ಶ್ರೀ 2ನೇ ರ್‍ಯಾಂಕ್ ಪಡೆದು, ಪ್ರಮಾಣ ಪತ್ರ ಸ್ವೀಕರಿಸಿದರು. ಇವರು ಮೈಸೂರಿನ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಅವರ ಪುತ್ರಿ.

ಪಾಕಿಸ್ತಾನದ 280 ಕೋಟಿ ಮೌಲ್ಯದ ಹೆರಾಯಿನ್ ವಶ

ನವದೆಹಲಿ: ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಮತ್ತು ಭಾರತೀಯ ಕರಾವಳಿ ಕಾವಲು ಪಡೆ ಜತೆಗಿನ ಜಂಟಿ ಕಾರ್ಯಾಚರಣೆಯಲ್ಲಿ ಅರಬ್ಬಿ ಸಮುದ್ರದಲ್ಲಿ 9 ಸಿಬ್ಬಂದಿಯೊಂದಿಗೆ ಪಾಕಿಸ್ತಾನದ ದೋಣಿಯನ್ನು ಬಂಧಿಸಿ, 280 ಕೋಟಿ ಮೌಲ್ಯದ ಹೆರಾಯಿನ್ ವಶಪಡಿಸಿಕೊಂಡಿದೆ. ಪಾಕಿಸ್ತಾನದ ಬೋಟ್ 'ಅಲ್ ಹಜ್' ಭಾರತದ ಸಮುದ್ರಕ್ಕೆ ನುಗ್ಗಿದಾಗ ಭಾರತೀಯ ಕೋಸ್ಟ್ ಗಾರ್ಡ್ ಹಡಗುಗಳು ತಡೆಹಿಡಿದು ಬಂಧಿಸಿವೆ. ದೋಣಿಯಲ್ಲಿ 280 ಕೋಟಿ ರೂ. ಮೌಲ್ಯದ ಹೆರಾಯಿನ್ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.








ನಿಧನ



ದೇವಮ್ಮ (ಜಕ್ಕೋಳಮ್ಮ)
w/o ರಂಗೇ ಮರಿಯಪ್ಪ
ಕೆ.ಜಿ.ಕೊಪ್ಪಲು, ಮೈಸೂರು

ಇವರು ದಿ.25.04.2022 ರಂದು ದೈವಾಧೀನರಾಗಿದ್ದು, ಮೃತರ ಅಂತ್ಯಕ್ರಿಯೆಯನ್ನು ದಿ.26.04.2022 ರಂದು ಬೆಳಿಗ್ಗೆ 11.30ಕ್ಕೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ (ಕಾವೇರಿ ಶಾಲೆ ಪಕ್ಕ) ನೆರವೇರಿಸಲಾಗುವುದು.
ದುಃಖತಪ್ತರು: ಕುಟುಂಬವರ್ಗ



ಉತ್ತರ ಕ್ರಿಯಾದಿ ಭೂಶಾಂತಿ – ಆಹ್ವಾನ ಪತ್ರಿಕೆ

ದಿನಾಂಕ: 27–4–2022 ನೇ ಬುಧವಾರ



ಶ್ರೀಮತಿ ವಿ. ಸುಮಿತ್ರ
ನಿಧನ : 17–04–2022 ನೇ ಭಾನುವಾರ
ಶ್ರೀ ಕೆ.ಜಿ.ಕುಚೇಲ
2644, ಸಿಹೆಚ್ 24–1, 3ನೇ ಕ್ರಾಸ್, ಕೆ.ಜಿ.ಕೊಪ್ಪಲು, ಮೈಸೂರು
ಇವರು ಮಾಡುವ ವಿಜ್ಞಾಪನೆಗಳು
ನನ್ನ ಧರ್ಮಪತ್ನಿ ಶ್ರೀಮತಿ ವಿ.ಸುಮಿತ್ರ ದಿನಾಂಕ 17–04–2022 ನೇ ಭಾನುವಾರದಂದು ದೈವಾಧೀನರಾಗಿರುವ ವಿಷಯವನ್ನು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 27–4–2022 ಬುಧವಾರ ಬೆಳಿಗ್ಗೆ 10.30 ಗಂಟೆಗೆ ಕನ್ನೇಗೌಡನ ಕೊಪ್ಪಲು ಶ್ರೀ ಮರುಳೇಶ್ವರ ಶಾಂತಿಧಾಮ ಅವರಣದಲ್ಲಿ ಏರ್ಪಡಿಸಿರುತ್ತೇವೆ. (ಕಾವೇರಿ ಶಾಲೆಯ ಪಕ್ಕ) ... ತಾವುಗಳು ಸಕುಟುಂಬ ಸಮೇತರಾಗಿ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಬಯಸಬೇಕಾಗಿ ಕೋರುತ್ತೇವೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ತಿಳಿದುಕೊಳ್ಳಬೇಕಾಗಿ ವಿನಂತಿ
ಸ್ಥಳ : ಮರುಳೇಶ್ವರ ಶಾಂತಿಧಾಮ (ಕಾವೇರಿ ಶಾಲೆಯ ಪಕ್ಕ)
ಭೋಜನ : ಮಧ್ಯಾಹ್ನ 12.30 ಗಂಟೆಗೆ
ಇಂತಿ ದುಃಖತಪ್ತರು
ಕೊಪ್ಪಲು ಜನಾರ್ದನ ಕುಟುಂಬದವರು, ಕೆ.ಜಿ.ಕೊಪ್ಪಲು, ಮೈಸೂರು
ಶ್ರೀ ವೆಂಕಟೇಶ್ ಗೌಡರ ಕುಟುಂಬದವರು, ಭತ್ತದ ಕೊಪ್ಪಲು, ಮೈಸೂರು